ಬೆಲೆ : ಎರಡು ಆಣೆ

ವರ್ಗಣಿ ದರ
( ಅಂಚೆವೆಚ್ಚ ಸೇರಿ )
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವದು.

# ಕರ್ಮವೀರ

KARMAVEER
WEEKLY
HUBLI
DEC. 2
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ. ]

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

[ Editor: H. R. Purohit, M. A.

ಸಂಪುಟ ೧೮ ] ಹುಬ್ಬಳ್ಳಿ ಸೋಮವಾರ ತಾರೀಖು ೨ — ೧೨ — ೧೯೪೬ [ ಸಂಚಿಕೆ ೩೭


# 'ಸ್ವಾತಂತ್ರ್ಯದ ಸದುಪಯೋಗ ಮಾಡಿಕೊಳ್ಳೋಣ'

## ಹಿಂಸೆಯಿಂದ ಜಾತೀಯ ಸಮಸ್ಯೆ ಬಗೆಹರಿಯದು

## ಮುಸ್ಲಿಂ ಲೀಗಿಗೆ ಆಚಾರ್ಯ ಕೃಪಲಾನಿಯವರ ಎಚ್ಚರಿಕೆ

### ಮಿರತ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಭಾಷಣ

"೧೯೪೨ ಅಗಸ್ಟದಲ್ಲಿ ಕಾಂಗ್ರೆಸ್ಸು ಬ್ರಿಟಿಶ ಸಾಮ್ರಾಜ್ಯದ ವಿರುದ್ಧ ಬಂಡು ಹೂಡಿರದಿದ್ದರೆ, ಇಂದು ಅದಕ್ಕೆ ದೊರೆತ ಸ್ಥಾನ ಸಿಗುತ್ತಿರಲಿಲ್ಲ; ಮುಸ್ಲಿಂಲೀಗ ಮತ್ತು ಇನ್ನಿತರ ಅಲ್ಪಸಂಖ್ಯಾಕರು ಈ ಮಾತನ್ನೊಪ್ಪದಿದ್ದರೂ ಅವರಿಗೆ ಸಹ ಇಂದಿನ ಸ್ಥಾನ ಲಭಿಸುತ್ತಿದ್ದಿಲ್ಲ," ಹೀಗೆಂದು ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ಸಿನ ೫೪ ನೇ ಅಧಿವೇಶನದ ಅಧ್ಯಕ್ಷಪೀಠದಿಂದ ಸುದೀರ್ಘ ಭಾಷಣ ಮಾಡುತ್ತ ಹೇಳಿದರು.



ಅವರು ಮತ್ತೂ ಹೇಳಿದ್ದೇನೆಂದರೆ—

"ಪೂರ್ಣ ಸ್ವರಾಜ್ಯ ಇನ್ನೂ ದೊರೆತಿಲ್ಲವೆಂಬುದು ನಿಜ. ಆದರೆ ನಮ್ಮ ಪ್ರತಿನಿಧಿಗಳು ಅಧಿಕಾರಕೋಟೆಯನ್ನು ಭೇದಿಸಿ ಒಳನುಗ್ಗಿದ್ದಾರೆ. ಅದು ಪರಕೀಯ ನೊಗದ ಉಚ್ಚಾಟನೆ ಅಲ್ಲದಿದ್ದರೂ ಅದರ ಪ್ರಾರಂಭ. ಆದರೆ ನಮಗೀಗ ದೊರೆತ ಅವಕಾಶದ ಸದುಪಯೋಗ ಮಾತ್ರ ಮಾಡಿಕೊಳ್ಳಲು ತಪ್ಪತಕ್ಕದ್ದಲ್ಲ. ಅದಾಗ್ಯೂ ಪೂರ್ಣ ಸ್ವಾತಂತ್ರ್ಯ ಲಭ್ಯವಾದ ಮೇಲೆ ನಮ್ಮ ಕಾರ್ಯ ಮುಗಿಯಿತೆಂದು ತಿಳಿದುಕೊಳ್ಳತಕ್ಕದ್ದಲ್ಲ. ರಾಷ್ಟ್ರೀಯ ಸ್ವಾತಂತ್ರ್ಯ ಅಮೌಲ್ಯವಾದುದು. ಅದು ರಾಷ್ಟ್ರದ ಉಸಿರು. ಆದರೆ ಅದು ಎಷ್ಟೇ ಮಹತ್ವದ್ದಿದ್ದರೂ ಅದರಿಂದ ನಮ್ಮ ಬಾಹ್ಯಬಂಧನಗಳನ್ನು ಮಾತ್ರ ಕಡಿದೊಗೆದಂತಾಗುವದು. ದಾಸ್ಯಪಾಶವು ಕಡಿದು ಬಿದ್ದನಂತರ ಮಾನವನು ಹೊಸದಾಗಿ ದೊರೆತ ಸ್ವಾತಂತ್ರ್ಯವನ್ನು ತನ್ನ ಅಹಿತಕ್ಕಾಗಿ ಉಪಯೋಗಿಸುವ ಸಂಭವವಿರುತ್ತದೆ. ನಾವು ಬುದ್ಧಿವಂತರಿದ್ದರೆ, ಬಾಹ್ಯ ಬಂಧನಗಳನ್ನು ಕಡಿದೊಗೆಯುವದರಲ್ಲಿಯೇ ತೃಪ್ತರಾಗದೆ, ನಮಗೆ ದೊರತ ಸ್ವಾತಂತ್ರ್ಯದಿಂದ ನಮ್ಮ ಜನಾಂಗದ ಕಲ್ಯಾಣವಾಗುವಂತೆ ಅದರ ಉಪಯೋಗ ಮಾಡಿಕೊಳ್ಳುವೆವು. ಅಂದರೆ ನಮ್ಮ ಕ್ರಾಂತಿಕಾರಕ ಉತ್ಸಾಹದಿಂದ ದಾಸ್ಯ ಬಂಧನವನ್ನು ಕತ್ತರಿಸಿ ಚಲ್ಲುವದಲ್ಲದೆ ವಿಧಾಯಕ ಕಾರ್ಯ ಸಾಧಿಸಲು ಉದ್ಯುಕ್ತರಾಗಬೇಕು.

ಅಹಿಂಸೆಯ ಅಡಿಗಲ್ಲಿನ ಮೇಲೆ ನಿಂತಿರುವ ನಮ್ಮ ಕ್ರಾಂತಿಕಾರಕ ಚಳವಳಿ ಇತಿಹಾಸದಲ್ಲೇ ಅಪೂರ್ವವಾದುದು. ಸಾಮಾನ್ಯವಾಗಿ ರಾಜಕೀಯ ಕ್ರಾಂತಿಗಳು ಹಿಂದಿನದನ್ನು ಪೂರ್ಣ ನಾಶ ಮಾಡಲು ಹೆಣಗುತ್ತವೆ; ಅಧಿಕಾರವನ್ನು ಕಿತ್ತಿಕೊಳ್ಳುವದೇ ಅವುಗಳ ಗುರಿ. ಹಳೆಯುದನ್ನು ಪೂರ್ಣ ನಾಶ ಮಾಡಿ ಅಧಿಕಾರ ಕಿತ್ತಿಕೊಂಡ ಮೇಲೆಯೇ ಹೊಸ ಕಟ್ಟಡ ರಚಿಸುವದಕ್ಕೆ ಪ್ರಾರಂಭಿಸಲಾಗುವದು. ಈ ಪದ್ಧತಿಯ ಪರಿಣಾಮವಾಗಿ, ಶಾಂತಿಸ್ಥಾಪನೆಯಾಗುವ ಮೊದಲು ಹಲವಾರು ಕ್ರಾಂತಿಗಳಾಗುವವು. ಯಾದವೀಯುದ್ಧದಲ್ಲಿ ಪ್ರಾರಂಭವಾಗಿ ಸರ್ವಾಧಿಕಾರಿತ್ವದಸ್ಥಾಪನೆಯಲ್ಲಿ ಕೊನೆಗೊಳ್ಳುವವು. ಯಾದವೀಯುದ್ಧ ಮತ್ತೂ ಸರ್ವಾಧಿಕಾರಿತ್ವ-ಇವುಗಳಲ್ಲಿ ನಮ್ಮ ಉದ್ದೇಶವನ್ನೇ ವಿಫಲಗೊಳಿಸುವ ಕ್ರಿಮಿಗಳಿರುತ್ತವೆ.

#### ನಿಜವಾದ ಪ್ರಜಾತಂತ್ರ

ಕಾಂಗ್ರೆಸ್ಸು ಗಾಂಧೀಜಿಯ ನೇತೃತ್ವದಲ್ಲಿ ಕೇವಲ ವಿಧ್ವಂಸ ಮತ್ತು ಅಧಿಕಾರಗ್ರಹಣ ಇವುಗಳಿಗೆ ಅತಿ ಮಹತ್ವ ಕೊಡದಂತೆ ನೋಡಿಕೊಂಡಿದೆ. ಬದಲಿಗೆ ವಿಧಾಯಕ ಕಾರ್ಯಕ್ರಮಕ್ಕೆ ಅದು ಬಹಳ ಮಹತ್ವಕೊಟ್ಟಿದೆ. ನಮ್ಮ ಕ್ರಾಂತಿಯು ಬಹಿರಂಗ ರಾಜತಂತ್ರ ಆಗಬೇಕು ಮತ್ತು ಅದರಲ್ಲಿ ಹೆಚ್ಚು ಹೆಚ್ಚು ಜನತೆ ಸೇರಿಸಿಕೊಳ್ಳಬೇಕು, ಎಂದು ನಾವು ನಿರ್ಣಯಿಸಿದೆವು. ಅದುದರಿಂದ ಅದು ರಹಸ್ಯವಿಲ್ಲದ್ದೂ ಅಹಿಂಸಾತ್ಮಕವೂ ಆಗುವದು ಅವಶ್ಯವಾಯಿತು. ಜನತೆಯಿಂದ ಉಂಟುಮಾಡಲ್ಪಟ್ಟ, ಅದೂ ಅಹಿಂಸಾತ್ಮಕವಾದ ಕ್ರಾಂತಿಯು ಪ್ರಜಾತಂತ್ರಾತ್ಮಕವಾಗಿಯೇ ಇರುವದು. ಕಾಂಗ್ರೆಸ್ಸು ರಾಜಕೀಯ ಪ್ರಜಾತಂತ್ರಕ್ಕೆ ಬದ್ಧವಾಗಿದೆ. ನಮ್ಮ ಸ್ವರಾಜ್ಯವೂ ಪ್ರಜಾತಂತ್ರಾತ್ಮಕವಾಗಿರುವದು. ಎಷ್ಟೇ ಶ್ರೇಷ್ಠನಾಗಿದ್ದರೂ ಒಬ್ಬವ್ಯಕ್ತಿಯ ಅಥವಾ ಎಷ್ಟೇ ಪ್ರತಿಷ್ಠಿತವಾಗಿದ್ದರೂ ಒಂದೇ ವಂಶದ ಸತ್ತೆಯಾಗಿರಲಾರದು. ಅಥವಾ ಯಾವುದೇ ಒಂದು ವರ್ಣದ, ಧರ್ಮದ ಅಥವಾ ವರ್ಗದ ಸತ್ತೆಯೂ ಆದಾಗಿರಲಾರದು.

#### ವಿಕೇಂದ್ರೀಕರಣ

ಆದರೆ ಆರ್ಥಿಕ ಸಮಾನತೆಯಿಲ್ಲದ ರಾಜಕೀಯ ಪ್ರಜಾತಂತ್ರ ಬರಿ ಹೆಸರಿಗಷ್ಟೇ ಪ್ರಜಾತಂತ್ರವಾಗಿರುವದನ್ನು ಜಗತ್ತಿನಲ್ಲಿ ನಾವು ನೋಡುತ್ತೇವೆ. ಆರ್ಥಿಕ ಸಮಾನತೆಯೆಂಬುದು ಕಮ್ಯುನಿಷ್ಟ ಪದ್ಧತಿಯಂತೆ ಉದ್ದಾಮ ಉದ್ಯೋಗಗಳ ಕೇಂದ್ರೀಕರಣದಿಂದಾಗಬಹುದು ಇಲ್ಲವೆ ಯೋಗ್ಯ ಪ್ರಮಾಣದ ವಿಕೇಂದ್ರೀಕರಣದಿಂದಲೂ ಆಗಬಹುದು. ಆದರೆ ಕಮ್ಯುನಿಝಂನಲ್ಲಿ ಸಮಸ್ತ ಔದ್ಯೋಗಿಕ ಶಕ್ತಿಯೂ ರಾಜಕೀಯ ಸರ್ವಾಧಿಕಾರಿಯ ಮತ್ತು ಸರಕಾರಿ ಅಧಿಕಾರಿಯ ಕೈಯಲ್ಲಿ ಕೇಂದ್ರೀಕರಿಸಲ್ಪಡುವದು. ಇದು ಪ್ರಜಾತಂತ್ರಕ್ಕೆ ದೊಡ್ಡ ಗಂಡಾಂತರ.

ಆದುದರಿಂದ ಕಾಂಗ್ರೆಸ್ಸು ಧೈರ್ಯದಿಂದ ಉದ್ಯೋಗಗಳ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದೆ. ಇದರಿಂದ ನಮ್ಮ ರೈತ ಜನಸಮುದಾಯದಲ್ಲಿ ಅಧಿಕಾಂಶವನ್ನು ಪೀಡಿಸುತ್ತಿರುವ ಹಳೆಯ ನಿರುದ್ಯೋಗ ರೋಗದ ಸಮಸ್ಯೆಯನ್ನು ನಿವಾರಿಸಲು ಸಹಾಯವಾಗುವದೆಂದು ಮರೆಯಕೂಡದು. ಆದರೆ ಯಾವ ಯಾವ ಉದ್ಯೋಗಗಳನ್ನು ವಿಕೇಂದ್ರೀಕರಿಸಬೇಕೆಂದು ಕಾಂಗ್ರೆಸ್ಸು ಈಗ ನಿರ್ಧರಿಸಬೇಕಾಗಿದೆ. ಇಲ್ಲದಿದ್ದರೆ ಪ್ರತಿಯೊಂದು ಪ್ರಾಂತವೂ ತನ್ನ ಮನಬಂದಂತೆ ಸಾಗೀತು. ಬಟ್ಟೆಯ ಉದ್ಯೋಗವು ವಿಕೇಂದ್ರೀಕರಣಕ್ಕೆ ಒಪ್ಪುವ ಉದ್ಯೋಗವೆಂದು ನಾವು ಭಾವಿಸಿದ್ದೆವು. ಆದರೆ ಹೊಸ ಗಿರಣಿಗಳನ್ನು ಸ್ಥಾಪಿಸಲು (ಕಾಂಗ್ರೆಸ್) ಪ್ರಾಂತಿಕ ಸರಕಾರಗಳು ಕೂಡ ಪರಸ್ಪರ ಮೇಲಾಟ ನಡೆಸಿವೆ. ಖಾದಿ ಕಾರ್ಯಕರ್ತನಾದನನಗೆ ಹೊಸ ಗಿರಣಿಗಳನ್ನು ಸ್ಥಾಪಿಸುವದಕ್ಕಿಂತ ರಾಟಿ ಮತ್ತು ಕೈಮಗ್ಗಕ್ಕೆ ಉತ್ತೇಜನ ಕೊಟ್ಟರೆ ಕಡಿಮೆ ಬಂಡವಳದಿಂದ ಕಡಿಮೆ ಪ್ರಯತ್ನದಿಂದ ಕಡಿಮೆ ಸಮಯದಲ್ಲಿ ಹೆಚ್ಚು ಪ್ರಯೋಜನವನ್ನು ಸಾಧಿಸಬಹುದೆಂದು ಭರವಸೆಯುಂಟು. ಉದ್ಯೋಗಗಳ ವಿಕೇಂದ್ರೀಕರಣದಿಂದ ಸಂಪು ಮೊದಲಾದ ಔದ್ಯೋಗಿಕ ತಿಕ್ಕಾಟಗಳಿಂದುಂಟಾಗುವ ರಾಷ್ಟ್ರೀಯ ಸಂಪತ್ತಿಯ ಹಾನಿಯೂ ನಿವಾರಿಸಲ್ಪಡುವದೆಂದು ಹೇಳಬೇಕಾಗಿಲ್ಲ.

ನಮ್ಮ ಬೇಸಾಯದಲ್ಲಿಯೂ ನಾವು ಹೆಚ್ಚಾಗಿ ವಿಕೇಂದ್ರೀಕರಣ ನೀತಿಯನ್ನೇ ಅನುಸರಿಸಬೇಕು. ನೆಲವನ್ನು ಸಾಗುಮಾಡುವವನೇ ಭೂಮಿಯ ಒಡೆಯನಾಗಿರಬೇಕು. ಕಾಂಗ್ರೆಸ್ಸು ರೈತನಿಗೂ ಸರಕಾರಕ್ಕೂ ನಡುವೆ ಇರುವ ಜಮೀನದಾರನನ್ನು ಕಿತ್ತುಹಾಕಲು ವಚನಬದ್ಧವಾಗಿದೆ. ವಿವಿಧ ಪ್ರಾಂತಿಕ ಸರಕಾರಗಳು ಜಮೀನದಾರಿ ಪದ್ಧತಿಯ ನಾಶಕ್ಕೆ ಮಾಡಿದ ಯೋಜನೆಗಳನ್ನು ಅ. ಭಾ. ಕಾಂ. ಕಚೇರಿಗೆ ಕಳಿಸಬೇಕೆಂದು ಗೊತ್ತುವಳಿ ಮಾಡಿದೆ. ಜಮೀನದಾರರಿಗೆ ಯೋಗ್ಯ ಪರಿಹಾರವೀಯುವದರಿಂದ ಅವರು ಆಕ್ಷೇಪಿಸಲು ನ್ಯಾಯವಿಲ್ಲ.

#### ರಾಷ್ಟ್ರೀಯ ಐಕ್ಯ

ರಾಷ್ಟ್ರೀಯ ಐಕ್ಯ ಮಹತ್ವದ್ದು. ಇಂದು ಕೇಂದ್ರದಲ್ಲಿ ಒಂದು ತರಹದ ರಾಷ್ಟ್ರೀಯ ಸರಕಾರವಿದೆ. ಪ್ರಾಂತಗಳಲ್ಲಿ ಲೋಕನಿಯುಕ್ತ ಮಂತ್ರಿಗಳು ಅಧಿಕಾರ ವಹಿಸಿಕೊಂಡಿರುತ್ತಾರೆ. ಅನತಿಕಾಲದಲ್ಲಿ ಹಿಂದುಸ್ತಾನದ ಹೊಸ ರಾಜ್ಯಘಟನೆ ರಚಿಸುವ ಸಮಿತಿಯ ಸಭೆ ಸೇರಲಿದೆ. ಸ್ವಾತಂತ್ರ್ಯ ಇನ್ನೂ ದೊರೆತಿರದಿದ್ದರೂ ದಿಗಂತದಲ್ಲಿ ಕಾಣಿಸಹತ್ತಿದೆ. ಬ್ರಿಟಿಶರ ಉದ್ದೇಶವೇನಿದ್ದರೂ ಅದನ್ನಿನ್ನು ಅಲ್ಲಗಳೆಯಲಾರರು. ಇಂದು ನಮ್ಮ ಗುರಿ ಮುಟ್ಟಲು ತಪ್ಪಿದರೆ, ತಪ್ಪು ನಮ್ಮದೇ; ಈ ಆಯತ ಸಮಯದಲ್ಲಿ ನಮ್ಮಿಂದಾಗುವ ಪ್ರಮಾದಗಳ ಪರಿಣಾಮವದು. ರಾಷ್ಟ್ರೀಯ ಹಿತಕ್ಕಿಂತ ಜಾತಿ, ಮತ, ಪಂಥಗಳ ಹಿತಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವದು ನಮ್ಮ ದೌರ್ಬಲ್ಯ. ರಾಜಕೀಯ ಸದ್ಗುಣಗಳಲ್ಲಿ ರಾಷ್ಟ್ರೀಯ ಐಕ್ಯಕ್ಕೆ ಪ್ರಥಮ ಸ್ಥಾನವಿರುವದು. ಆದರೆ ಅದು ಸರಾಗವಾಗಿ ಬೆಳೆದು ಬರಬೇಕಲ್ಲದೆ ಯಾವದೊಂದು ಶಕ್ತಿಯ ಪ್ರಭಾವದಿಂದ ಹೇರಲ್ಪಟ್ಟಿರಬಾರದು. ಆದರೆ ಹಿಂದುಸ್ಥಾನದಲ್ಲಿ ಅತ್ಯಲ್ಪ ಮತಭೇದಗಳು ಸಹ ಎಂದೂ ಕೂಡದಂಥ ಬಿರುಕನ್ನು ಕಲ್ಪಿಸುತ್ತವೆ. ಸಾಮಾನ್ಯ ವಿಷಯಗಳನ್ನು ಮರೆತು ಪಕ್ಷಭೇದಗಳಿಗೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ನಾವು ಬದುಕಿ ಬೆಳೆದು ಬಾಳಬೇಕಾದರೆ ನಮ್ಮಂತರಂಗವನ್ನು ಕೊರೆವ ಈ ದುರ್ಗುಣವನ್ನು ನಾವು ಶೇಷ ಮಾಡಬೇಕು.

ಸದ್ಯಕ್ಕೆ ನಮ್ಮಲ್ಲಿ ಜಾತೀಯ ಭೇದಗಳು, ವಿಶೇಷತಃ ಹಿಂದು ಮುಸ್ಲಿಂ ಭೇದಗಳು ನಮ್ಮ ಸ್ವಾತಂತ್ರ್ಯಕ್ಕೆ ಗಂಡಾಂತರವಾಗಿರುತ್ತವೆ. ಈ ನಮ್ಮ ದೌರ್ಬಲ್ಯದ ದುರ್ಲಾಭವನ್ನು ಪರಕೀಯರು ಹಿಂದಕ್ಕೆ ಬಹಳ ಪಡೆದಿರುವರು. ಇಂದಿಗೂ ಅದು ಅವರ ಹುಕುಮಿನ ಎಲೆಯಾಗಿದೆ. ಅದನ್ನೊಳ್ಳೇ ಚಾಚಾಕ್ಷತನದಿಂದ ಬಳಸುತ್ತಿದ್ದಾರೆ. ಹಿಂದು, ಮುಸಲ್ಮಾನರು ಎರಡು ರಾಷ್ಟ್ರಗಳೆನ್ನುವದು ಅನೈತಿಹಾಸಿಕ, ಅಶಾಸ್ತ್ರೀಯ, ಅಧಾರ್ಮಿಕ ಹಾಗೂ ಅನೈಸರ್ಗಿಕವಾದುದು. ಅವರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಹಿತಸಂಬಂಧಗಳು ಒಂದೇ ಆಗಿವೆ. ಉಭಯತರಿಗೆ ಸಾಮಾನ್ಯವಾಗಿರುವ ವಿಷಯಗಳು ಅಸಂಖ್ಯವಿರುವವು. ಮತಭೇದಗಳನ್ನು ಕೈಬೆರಳಿನಿಂದೆಣಿಸಬಹುದು. ಅವು ಸಹ ಆಳವಾಗಿಲ್ಲ. ಹಿಂದುಸ್ತಾನದ ವೇಷಭೂಷಣಗಳ ಪರಿಚಯವಿದ್ದ ಕೆಲವು ಪರಕೀಯರು ಮಾತ್ರ ಹಿಂದು ಮುಸಲ್ಮಾನರೆಂದು ಗುರುತಿಸಬಲ್ಲರು. ಹೊರಗಿನವರಿಗೆ ಹಿಂದುಸ್ತಾನವು ಒಂದೇ.

#### ಜಾತಿಭೇದ

ಈ ದೇಶದಲ್ಲಿ ಕಂಡುಬರುವ ಜಾತಿಭೇದವು ಇಂದು ಕರಾಳ ಸ್ವರೂಪ ತಳೆದಿದೆ. ಅದನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ, ನಮ್ಮ ರಾಷ್ಟ್ರೀಯತೆಯ, ಪ್ರಜಾಸತ್ತೆಯ ಬೊಡ್ಡೆಗೆ ಕೊಡಲಿ ಪೆಟ್ಟು ಹಾಕುವಂಥ ತತ್ವಗಳನ್ನೊಪ್ಪಬಹುದು. ನಾವು ಹಾಗೆ ತಪ್ಪಿ ಹೆಜ್ಜೆ ಇಕ್ಕಿದರೆ, ನಮ್ಮ ರಾಷ್ಟ್ರಕ್ಕಲ್ಲದೆ, ಮುಸಲ್ಮಾನ ಮತ್ತು ಇನ್ನಿತರ ಅಲ್ಪಸಂಖ್ಯಾಕರಿಗೂ ದ್ರೋಹ ಬಗೆದಂತಾಗುವದು. ಪ್ರತ್ಯೇಕ ಮತದಾನ ಪದ್ಧತಿಗೆ ಕಾಂಗ್ರೆಸ್ಸು ಒಪ್ಪಿದ್ದು ತಪ್ಪೆಂದು ನನಗನಿಸುತ್ತದೆ. ನಾವು ಅದನ್ನು ಧೈರ್ಯದಿಂದ ವಿರೋಧಿಸಿದ್ದರೆ ಈಗಿನ

—೬ನೇ ಪುಟಕ್ಕೆ




## ಎಚ್ಚತ್ತ ಆಗ್ನೇಯ ಏಶಿಯ

ಲೇಖಕರು: ಶ್ರೀ ಎಂ. ಹರಿದಾಸ, ಪ್ರಕಾಶಕರು: ಸಾಹಿತ್ಯ ಭಾಂಡಾರ ಹುಬ್ಬಳ್ಳಿ ಮಾರಾಟದ ಪೂರ್ಣಾಧಿಕಾರಿಗಳು: ರಾಷ್ಟ್ರದರ್ಶ ಗದಗ. ೧೨೮ ಪುಟ, ಬೆಲೆ ೧—೮—೦.

ಸಾಮ್ರಾಜ್ಯವಾದಿ ರಾಷ್ಟ್ರಗಳ ಮೇಯುವ ಹೊಲವೆಂದರೆ ಆಗ್ನೇಯ ಏಶಿಯಾ. ಅಲ್ಲಿನ ಸರಳ ಜನಕೋಟಿಗಳನ್ನು ಪಶುಗಳಂತೆ ನಡೆಸಿಕೊಂಡು ದಬ್ಬಾಳಿಕೆಯಿಂದ, ಪ್ರತ್ಯಕ್ಷ ಸೂರೆಯಿಂದ ಬಹುಶಃ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳು ಅಮಾನುಷ ರೀತಿಯಲ್ಲಿ ಅಮಿತ ಲಾಭ ಮಾಡಿಕೊಳ್ಳುತ್ತ ಬಂದಿವೆ ಈ ರಾಷ್ಟ್ರಗಳ ಎಚ್ಚತ್ತ ಜನರು ಸ್ವಾತಂತ್ರ್ಯಕ್ಕಾಗಿ ಅನೇಕ ದಶಮಾನಗಳಿಂದ ಹೋರಾಟವನ್ನು ಸಾಗಿಸುತ್ತ ಬಂದಿದ್ದರೂ ಹೆಗಲ ಮೇಲೆ ಹೇರಿದ ನೊಗವನ್ನು ಎತ್ತಿ ಒಗೆಯುವ ಶಕ್ತಿ ಅವುಗಳಿಗೆ ಬಂದಿರಲಿಲ್ಲ. ಏಶಿಯಾದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಸ್ಪರ್ಧಿಸಬಲ್ಲ ಆಧುನಿಕ ರಾಷ್ಟ್ರವಾವುದೂ ಇಲ್ಲದ್ದು ಅವುಗಳ ಹೋರಾಟದ ವಿಫಲತೆಗೆ ಕೆಲಮಟ್ಟಿಗೆ ಕಾರಣವಾಗಿತ್ತು. ಕಳೆದ ಮಹಾಯುದ್ಧದ ನಂತರ ಜಪಾನು ಪ್ರಬಲ ರಾಷ್ಟ್ರಗಳಲ್ಲೊಂದಾಗಿ ತಲೆಯೆತ್ತಿದ್ದು ಈ ಕೊರತೆಯನ್ನು ಪೂರೈಸಿತು. ಜಪಾನಿನ ಉದ್ದೇಶವೆಷ್ಟೇ ಸ್ವಾರ್ಥಮಯವಾಗಿದ್ದಿರಲಿ, ಅದರ ಬೃಹತ್ತರ ಏಶಿಯಾದ ಕೂಗು ಏಶಿಯಾದಲ್ಲೆಲ್ಲ ಒಂದು ಬಗೆಯ ಸ್ಫೂರ್ತಿಯನ್ನುಂಟುಮಾಡಿತೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಸಾಲದ್ದಕ್ಕೆ ೧೯೪೧ರ ನಂತರ ಕೆಲ ತಿಂಗಳುಗಳ ವರೆಗೆ ಜಪಾನು ಏಶಿಯಾದಲ್ಲಿ ಬಿಳಿ ಸಾಮ್ರಾಜ್ಯವಾದಿಗಳ ವಿರುದ್ಧ ಸಂಪಾದಿಸಿದ ಆಶ್ಚರ್ಯಕರ ವಿಜಯಮಾಲೆಯಿಂದ ಏಶಿಯಾದ ರಾಷ್ಟ್ರಗಳಲ್ಲಿ ಬಿಳಿಯರ ಬಗ್ಗೆ ಇದ್ದ ಅಲ್ಪಸ್ವಲ್ಪ ಭೀತಿಯೂ ತೊಲಗಿ ಹೋಯಿತು. ಬರಿ ಇದರಿಂದಲೇ ಈ ಪರತಂತ್ರ ರಾಷ್ಟ್ರಗಳ ಉದ್ಧಾರವಾಗುತಿರಲಿಲ್ಲ. ಆದರೆ ಯುದ್ಧದಲ್ಲಿ ಜಪಾನಿನ ಅಕಸ್ಮಾತ್ ಪತನದಿಂದಾಗಿ, ಮಿತ್ರ ರಾಷ್ಟ್ರಗಳು ತಮ್ಮ ಹಳೆಯ ಸಾಮ್ರಾಜ್ಯ ಭಾಗಗಳನ್ನು ತಿರುಗಿ ಕೈಸೇರಿಸಿಕೊಳ್ಳಲು ತುಸು ತಡವಾದುದರಿಂದ ಆ ರಾಜ್ಯಗಳಲ್ಲಿ ಅಧಿಕಾರ ಶಕ್ತಿ ಕೆಲಕಾಲ ತೆರವುಬಿತ್ತು. ಆ ತೆರವನ್ನು ಆದೇಶದ ಸ್ವಾತಂತ್ರ್ಯ ಚಳವಳಿಗಳು ಆಕ್ರಮಿಸಿಕೊಂಡವು. ಹೀಗಾಗಿ ಹಳೆಯ ಒಡೆಯರು ಮರಳಿದಾಗ ತಾವು ಆಕ್ರಮಿಸಿಕೊಂಡ ರಾಜ್ಯಗಳಲ್ಲಿ ಪ್ರಬಲವೂ ಸಶಸ್ತ್ರವೂ ಆದ ದೇಶೀಯ ಪ್ರಭುತ್ವ ಇವರಿಗೆ ದುರಾಯಿತು. ಮನಸಿಲ್ಲದಿದ್ದರೂ ಅವರು ಆ ದೇಶದ ಜನತೆಯ ಚಳವಳಿಯೊಡನೆ ಒಡಂಬಡಿಕೆ ಮಾಡಿಕೊಳ್ಳಲೇಬೇಕಾಯಿತು. ಹಾಲಂಡ, ಫ್ರಾನ್ಸ ಮೊದಲಾದ ಸಾಮ್ರಾಜ್ಯವಾದಿ ರಾಷ್ಟ್ರಗಳು ಆ ಚಳವಳಿಗಳ ಶಕ್ತಿಗೆ ಕೆಲಮಟ್ಟಿಗೆ ಮತ್ತು ಜಾಗತಿಕ ಅಭಿಪ್ರಾಯಕ್ಕೆ ಕೆಲಮಟ್ಟಿಗೆ ತಲೆವಾಗಿ ಬಂದಲ್ಲಿ ಒಂದು ಬಗೆಯಲ್ಲಿ ಒಡಂಬಡಿಕೆ ಮಾಡಿಕೊಂಡದ್ದನ್ನು, ಮಾಡಿಕೊಳ್ಳಲು ಹೆಣಗುತಿರುವದನ್ನು ಕಾಣುತ್ತೇವೆ.

ಆಗ್ನೇಯ ಏಶಿಯಾದ ಈ ಮುನ್ನಡೆಯನ್ನು ಕುರಿತು ದಿನವೂ ಪತ್ರಿಕೆಗಳಲ್ಲಿ ಓದುತ್ತೇವೆ. ಆದರೆ ಆ ದೇಶಗಳ ಜನತೆ, ಹಿಂದಿನ ಚಳವಳಿ, ಸಾಮ್ರಾಜ್ಯವಾದಿ ರಾಷ್ಟ್ರಗಳು ಹೇಗೆ ಸೋಲೊಪ್ಪಿಕೊಳ್ಳಬೇಕಾಯಿತು ಇತ್ಯಾದಿ. ವಿವರಗಳು ಜನಸಾಮಾನ್ಯರಿಗೆ ತಿಳಿದಿಲ್ಲ. ಶ್ರೀ ಹರಿದಾಸರ ಈ ಪುಸ್ತಕದಿಂದ ಈ ಕೊರತೆ ತುಂಬಿಬಂದಿದೆ. ಆರು ಭಾಗಗಳಾಗಿ ವಿಂಗಡಿಸಿ ಒಳ್ಳೆ ತೂಕದಿಂದ ಬರದ ಈ ಪುಸ್ತಕದ ಮೊದಲನೆ ಭಾಗದಲ್ಲಿ ಆಗ್ನೇಯ ಏಶಿಯಾದ ಚಳವಳಿಗಳ ಸಾಮಾನ್ಯ ಸ್ವರೂಪವನ್ನು ಪ್ರಸ್ತಾಪಿಸಿ ಉಳಿದೈದು ಭಾಗಗಳಲ್ಲಿ ಇಂಡೋನೇಶಿಯಾ, ಬ್ರಹ್ಮ, ಸಯಾಂ, ಮಲಯ, ಇಂಡೋಚೀನ ಈ ದೇಶಗಳ ಸಾಧಾರಣ ಐತಿಹಾಸಿಕ ಪರಿಚಯದೊಂದಿಗೆ ಚಳವಳಿಯ ಅಂದು—ಇಂದುಗಳನ್ನು ಸರಳವಾಗಿ ವಿವೇಚಿಸಿದೆ. ಈ ಕನ್ನಡದಲ್ಲಿ ಇಂಥ ಸಾಹಿತ್ಯ ವಿರಳವಾಗಿರುವ ಕಾಲದಲ್ಲಿ ಶ್ರೀ ಹರಿದಾಸರು ವಿವರಗಳನ್ನು ಅನೇಕ ಮೂಲಗಳಿಂದ ಸಂಗ್ರಹಿಸಿ ಸಾಮಾನ್ಯರಿಗೆ ರುಚಿಸುವಂತೆ ಬರೆದಿರುವದು ಪ್ರಶಂಸಾರ್ಹವಾಗಿದೆ.

## ಕಾಬೂಲಿವಾಲಾ ಮತ್ತು ಇತರ ಕತೆಗಳು

ಮೂಲ: ಶ್ರೀ ರವೀಂದ್ರನಾಥ ಠಾಕುರ; ಅನುವಾದ: ಶ್ರೀ ಆ. ನಾರಾಯಣಸ್ವಾಮಿ ಅಯ್ಯರ್. ಪ್ರಕಾಶಕರು: ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಕ್ರೌ. ಆ. ಪ. ೧೦೦ ಪುಟ, ಬೆಲೆ ೧—೮—೦.

## ಹೆದ್ದಾರಿಯ ಹೇಳಿಕೆ ಮತ್ತು ಇತರ ಕತೆಗಳು

ಮೂಲ: ಶ್ರೀ ರವೀಂದ್ರನಾಥ ಠಾಕುರ. ಅನುವಾದಕರು: ಮೇಲಿನವರೇ. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು. ೧೧೮ ಪುಟ, ಬೆಲೆ ರೂ. ೧—೦—೦.

ಶರಚ್ಚಂದ್ರರ ಬಂಗಾಲಿ ಸಾಹಿತ್ಯ ಕನ್ನಡಕ್ಕೆ ಇಳಿದು ಬಂದ ಮಾನದಲ್ಲಿ ರವೀಂದ್ರರದು ಸಾಕಷ್ಟು ಬಂದಿಲ್ಲ. ಇದೀಗ ಶ್ರೀ ಅಯ್ಯರರು ರವೀಂದ್ರರ ಕಥೆಗಳನ್ನು ದೊಡ್ಡ ಪ್ರಮಾಣದಲ್ಲಿ ಕನ್ನಡಿಸಿ ಪ್ರಕಟಿಸತೊಡಗಿರುವದು ಪ್ರಶಂಸಾರ್ಹ. ಪ್ರಸ್ತುತ ಪುಸ್ತಕಗಳಲ್ಲಿ ಮೊದಲನೆಯದು ರವೀಂದ್ರರ ೩ ಮತ್ತು ಎರಡನೆಯದು ೮ ಕಥೆಗಳನ್ನೊಳಗೊಂಡಿದೆ. ರವೀಂದ್ರ ಸಾಹಿತ್ಯ ಈ ವರೆಗೆ ಕನ್ನಡಕ್ಕಿಳಿದುಬಂದುದು ಮುಖ್ಯವಾಗಿ ಅದರ ಇಂಗ್ಲಿಷ ಅನುವಾದದಿಂದ. ಆದರೆ ಅಯ್ಯರರು ಮೂಲ ಬಂಗಾಲಿಯಿಂದಲೇ ಕನ್ನಡಕ್ಕಿಳಿಸಿದ್ದಾರೆ. ಆದರೆ ಅವರ ಈ ಮೂಲಕ ಅನುವಾದವನ್ನು ಹೆಚ್ಚು ಚೆನ್ನಾಗಿ ಮಾಡಿ ತೋರಿಸಿದಂತೆ ಕಾಣಲಿಲ್ಲ. ಬದಲಿಗೆ ಬಂಗಾಲಿ ಭಾಷೆಯಲ್ಲಿ ವಿಪುಲವಾಗಿರುವ ಸಂಸ್ಕೃತ ಪದಗಳು ಅನುವಾದಕರನ್ನು ಹೆಜ್ಜೆಹೆಜ್ಜೆಗೆ ಪ್ರಲೋಭನಕ್ಕೆ ಗುರಿ ಮಾಡಿವೆ. ಕಾಬೂಲಿವಾಲಾದಲ್ಲಂತೂ ಕೆಲವೆಡೆ ವಾಕ್ಯನಿರ್ಮಾಣದಲ್ಲಿ ಕೂಡ ಕನ್ನಡಕ್ಕೆ ಹೊರತಾದ ರೀತಿ ಕಂಡುಬರುತ್ತದೆ. ಹೆದ್ದಾರಿಯ ಹೇಳಿಕೆಯಲ್ಲಿ ಅಯ್ಯರರು ಕನ್ನಡದ ಮೇಲೆ ತುಸು ಹೆಚ್ಚು ಪ್ರಭುತ್ವವನ್ನು ಪ್ರದರ್ಶಿಸಿದ್ದಾರೆ.

"ರವೀಂದ್ರರ ಕತೆಗಳು"೪ ಎಂದು "ಹೆದ್ದಾರಿಯ ಹೇಳಿಕೆ"ಯಲ್ಲಿ ಮುಖಪತ್ರದ ಮೇಲೆ ಬರೆದಿರುವದರಿಂದ ಪ್ರಸ್ತುತ ಪುಸ್ತಕಗಳಲ್ಲದೆ ಇನ್ನೆರಡು ಕಥಾಗುಚ್ಛಗಳನ್ನೂ ಶ್ರೀ ಅಯ್ಯರರು ಪ್ರಕಟಿಸಿದ್ದಾರೆಂದು ತಿಳಿಯುತ್ತದೆ. ಶ್ರೀ ಅಯ್ಯರರು ರವೀಂದ್ರರ "ಗಲ್ಪಗುಚ್ಛ"ದ ೮೭ ಕಥೆಗಳನ್ನೂ ಉದ್ದಕ್ಕೆ ಅನುವಾದಿಸುವ ಪ್ರಯತ್ನಕ್ಕೆ ಹೋಗದೆ ಅವುಗಳಲ್ಲಿ ಅತ್ಯುತ್ತಮವಾದವುಗಳನ್ನಷ್ಟೆ ಅನುವಾದಿಸಿ ರವೀಂದ್ರ ಸಾಹಿತ್ಯದ ಕಾದಂಬರಿ ನಾಟಕಗಳನ್ನೂ ಆಯ್ದು ಕನ್ನಡಕ್ಕೆ ತರಲು ಉದ್ಯೋಗಿಸಬೇಕೆಂದು ಸೂಚಿಸಬಯಸುವೆವು.

## ತರಕಾರಿಗಳು ಮತ್ತು ಅವುಗಳನ್ನು ಬೆಳೆಯುವ ಬಗೆ

ಲೇಖಕರು: ಶ್ರೀ ಸಿ. ವಿ. ರಾವ್, ಪುಸ್ತಕ ಸಿಗುವ ಸ್ಥಳ: ಆತ್ರೇಯ ಜನರಲ್ ಏಜನ್ಸಿ ೩೪, ಸರಸ್ವತಿಬಿಲ್ಡಿಂಗ್ಸ, ಶ್ರೀ ನರಸಿಂಹರಾಜ ರಸ್ತೆ, ಬೆಂಗಳೂರು. ೧೦೪ಪುಟ ರೂ- ೧—೮—೦

ತರಕಾರಿ ಅಥವಾ ಕಾಯಿಪಲ್ಲೆಗಳು ಮನುಷ್ಯನ ಆಹಾರದಲ್ಲಿರಬೇಕಾದ ಅವಶ್ಯಾಂಗಗಳೆಂದೂ ಹಿಂದೀಯರ ಆಹಾರದಲ್ಲಿ ಅದು ಸಾಕಷ್ಟು ಇಲ್ಲದಿರುವದರಿಂದ ಅವರ ಆಹಾರ ಅಷ್ಟು ಮಟ್ಟಿಗೆ ಸತ್ವಹೀನವಾಗಿದೆಯೆಂದೂ ಆಹಾರ ತಜ್ಞರು ಹೇಳುತ್ತಾರೆ. ತರಕಾರಿಗಳ ವ್ಯವಸಾಯ ಅಂಥ ಕಠಿಣ ಅಥವಾ ಹೊತ್ತು ತೆಗೆದುಕೊಳ್ಳುವ ಕೆಲಸವಲ್ಲ. ತುಸು ತೆರವು ಸ್ಥಳವಿರುವ ನಗರಗಳಲ್ಲಿ ಕೂಡ ಮನೆಮನೆಗಳಲ್ಲಿಯೆ ಅವುಗಳನ್ನು ಕುಟುಂಬಕ್ಕೆ ಬೇಕಾಗುವಷ್ಟು ಬೆಳೆಸಿಕೊಂಡು ಹೆಚ್ಚು ವೆಚ್ಚವಿಲ್ಲದೆ ಆಹಾರದ ಪೌಷ್ಟಿಕತೆಯನ್ನು ಹೆಚ್ಚಿಸಿಕೊಳ್ಳಬಹುದು. ಶ್ರೀ ಸಿ ವಿ ರಾಯರು ದೇಶೀಯ ಹಾಗು ಹೊರಗಿಂದ ಬಂದು ಇಲ್ಲಿ ಜನಪ್ರಿಯವಾಗಿರುವ ಅನೇಕ ಕಾಯಿಪಲ್ಲೆಗಳನ್ನು ಬೆಳೆಸುವ ರೀತಿಯನ್ನು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಆಯಾ ತರಕಾರಿಗೆ ಬೇಕಾದ ಭೂಗುಣ, ಹವಾಗುಣ, ಗೊಬ್ಬರ ಇತ್ಯಾದಿ ವಿಷಯಗಳನ್ನು ಸಂಕ್ಷೇಪವಾಗಿ ಕೊಟ್ಟು ಮತ್ತೆರಡು ಅಧ್ಯಾಯಗಳಲ್ಲಿ ಗೊಬ್ಬರಗಳ ಮತ್ತು ತರಕಾರಿಗಳಿಗೆ ಬರುವ ರೋಗಗಳ ವಿಷಯ ವಿವೇಚಿಸಲಾಗಿದೆ. ಕನ್ನಡದಲ್ಲಿ ಈ ಜಾತಿಯ ಪುಸ್ತಕ ಇದೇ ಮೊದಲನೆಯದು ಲೇಖಕರ ಪ್ರಯತ್ನ ಅಭಿನಂದನೀಯವೆಂದು ಹೇಳುವ ಅವಶ್ಯಕತೆಯೇ ಇಲ್ಲ. ಪುಸ್ತಕಕ್ಕೆ ಒಂದು ಪರಿವಿಡಿ ಇದ್ದಿದ್ದರೆ ಚನ್ನಾಗಿತ್ತು. "ಪಟ್ಟಣಗಳಲ್ಲಿನ ನಮ್ಮ ಜನಕ್ಕೆ ತರಕಾರಿ ಬೆಳೆಯುವದರಲ್ಲಿ ಹೆಚ್ಚು ಆದರ, ಆಸಕ್ತಿಗಳನ್ನುಂಟುಮಾಡಬೇಕೆಂಬುದೇ ಈ ಪುಸ್ತಕದ ಹೆಗ್ಗುರಿಯೆಂದು ಲೇಖಕರು ಹೇಳಿದ್ದಾರೆ. ಆ ಗುರಿ ಸಾಧಿಸಲೆಂದು ಹಾರೈಸುವೆವು. ಕನ್ನಡ ಪುಸ್ತಕಕ್ಕೆ ಇಂಗ್ಲೀಷ ಹೊದಿಕೆ ಯಾಕೆಂದು ಮಾತ್ರ ನಮಗೆ ತಿಳಿಯದಾಗಿದೆ.

## ಔಷಧಿ ಕಲ್ಪನಾ

ಲೇಖಕರು: ಆಯುರ್ವೇದ ವಿದ್ವಾನ್ ಮೋಟಿಗಾನಹಳ್ಳಿ, ಮಹಾದೇವ ಶಾಸ್ತ್ರಿ, ಪ್ರಕಾಶಕರು- ಗೌರ್ನಮೆಂಟ ಆಯುರ್ವೇದ ಮತ್ತು ಯುನಾನಿ ಕಾಲೇಜ ಪದವೀಧರ ಸಂಘ, ಮೈಸೂರು. ೧೦೧ ಪುಟ, ಬೆಲೆ ೦—೯—೦.

ಆಯುರ್ವೇದ ಔಷಧಿಗಳು ಇಂದಿಗೂ ಈ ದೇಶದಲ್ಲಿ ಜನಪ್ರಿಯವಾಗಿ ಉಳಿದಿದ್ದರೂ ಸುಶಿಕ್ಷಿತರಿಗೆ ಅವುಗಳ ಮೇಲೆ ಶಂಕಾದೃಷ್ಟಿಯುಂಟಾಗಲು ಅವುಗಳಲ್ಲಿ ಕಲ್ಪನಾ ವ್ಯವಸ್ಥೆ (Standardisation) ಅಥವಾ ಔಷಧಿಗಳ ನಿರ್ಮಾಣದಲ್ಲಿ ಒಂದು ನಿರ್ದಿಷ್ಟ ವ್ಯವಸ್ಥೆಯಿಲ್ಲದ್ದೂ ಒಂದು ಕಾರಣ. ಒಂದೇ ಹೆಸರಿನ ಔಷಧವನ್ನು ಹಲವರು ಹಲ ವಿಧವಾಗಿ ಸಿದ್ಧಗೊಳಿಸುವರು. ಈ ರೀತಿ ಸೂತ್ರಬದ್ಧತೆಯಿಲ್ಲದಿರುವದರಿಂದ ಅವುಗಳ ಪ್ರಯೋಗ ಕೆಲವೊಮ್ಮೆ ಅಪಾಯಕಾರಿಯೂ ಆಗಬಹುದು. ಪ್ರಸ್ತುತ ಲೇಖಕರು ಆಯುರ್ವೇದದಲ್ಲಿ ಬಹುಶ್ರುತರಿದ್ದು ಬೆಂಗಳೂರಿನ ಸರಕಾರಿ ವಿದ್ಯುತ್ ಕಾರಖಾನೆಯ ವೈದ್ಯರೂ ಇದ್ದಾರೆ. ಅವರು ಆಯುರ್ವೇದ ಓಷಧಿಗಳ ಕಲ್ಪನಾವ್ಯವಸ್ಥೆ ಸೂತ್ರಬದ್ಧವಾಗಲು ಬಹಳ ಸಹಾಯಕವಾಗುವ ಈ ಪುಸ್ತಕವನ್ನು ಬರೆದು ಆಯುರ್ವೇದ ಪ್ರಪಂಚಕ್ಕೆ ಬಹಳ ಉಪಕಾರ ಮಾಡಿದ್ದಾರೆ. ಈ ಚಿಕ್ಕ ಪುಸ್ತಕದಲ್ಲಿ ಎಷ್ಟು ಸಾಧ್ಯವೋ ಅಷ್ಟೂ ವಿವರಗಳನ್ನು ಇದು ಒಳಗೊಂಡಿದೆ. ಕನ್ನಡದಲ್ಲಿ ಇಂಥ ಪುಸ್ತಕ ಇದೇ ಮೊದಲು. ಲೇಖಕರು ವಿಶಾಲ ಮನಸ್ಸಿನವರು. ಆಯುರ್ವೇದದ ಟೊಳ್ಳು ಅಭಿಮಾನ ಸಾಲದು; ಅದರಲ್ಲಿಯೂ ಇನ್ನೂ ಅನಿರ್ದಿಷ್ಟ ವಿಷಯಗಳಿವೆ. ಆಯುರ್ವೇದವೆಂಬುದು ಒಂದು ದಿನದಲ್ಲಿ ಹುಟ್ಟಿದ ಶಾಸ್ತ್ರವಲ್ಲ, ಬೆಳೆಯುತ್ತ ಬಂದ ಶಾಸ್ತ್ರ. ಈಗ ಮಾತ್ರ ಅದರ ಬೆಳವಣಿಗೆ ನಿಂತಿದೆ. ಆಯುರ್ವೇದದಲ್ಲಿಯೂ ಪ್ರಯೋಗಗಳಾಗುವದು ಅವಶ್ಯವಿದೆ. ಆಧುನಿಕ ಉಪಕರಣಗಳ ಉಪಯೋಗವನ್ನೂ ಮಾಡಿಕೊಳ್ಳಬೇಕು, ಎಂದವರು ಮನಗಂಡಿದ್ದಾರೆ. ಹಾಗೆಮಾಡಿದರೆ ಮಾತ್ರ ಅದಿನ್ನೂ ಬೆಳೆದು ವಿವಿಧ ಔಷಧಿ ಪದ್ಧತಿಗಳ ಸಂಗಡ ಗೌರವದಿಂದ ಬಾಳಬಲ್ಲದು. ಲೇಖಕರ ಪ್ರಯತ್ನ ಸ್ತುತ್ಯ.

## ವಿವೇಕ ಚೂಡಾಮಣಿ

ಲೇಖಕರು :- ಶ್ರೀ ಎಂ. ಎಸ್. ಸುಬ್ಬಣ್ಣ, ಪ್ರಕಾಶಕರು ಎಸ್. ಎಸ್. ಎನ್. ಬುಕ್ ಡಿಪೊ ಬೆಂಗಳೂರ ನಗರ. ೧೫೦ ಪುಟ, ೧—೮—೦

ಶಂಕರಾಚಾರ್ಯರ ಸಂಸ್ಕೃತ ವಿವೇಕ ಚೂಡಾಮಣಿಯ ಕನ್ನಡ ಭಾಷಾಂತರವಿದು, ಆಚಾರ್ಯರ

## ಪಂಡಿತ ಮಾಲವೀಯರೆಲ್ಲಿ?

ಮದನ ಮೋಹನರಕಟ! ಮರಣವನು ಕಂಡರೇ?  
ಒದಗಿತೇನಾಪತ್ತು ಬುಧನಮಿತ ಭೂಷಣಗೆ?  
ಮುದುಕನಾದರು ಕಾಯಕಲ್ಪವನು ಕೊಂಡವಗೆ  
ಮರಣ ತಾ ಬೆನ್ನಟ್ಟಿತೇ॥

ಹದಿನೆಂಟು ಜಾತಿಗಳ ಕಲಹ ಭಾರತದಲ್ಲಿ।  
ಕುದಿಯುತಿರೆ ನವಕಾಳಿ ವಿಪರೀತ ಪರಿತಿ[illegible]।  
ಹೃದಯು ಭೇದಿಸಿತೇನು ? ಹಿಂದುಧರ್[illegible]  
ಆಸುಡಿಕ್ಕಿ ಹಾ[illegible]

-೨-

ಅಹುದವ ಸನಾತನಿಯು ಪರಮಧರುಮಾತ್ಮನು।  
ಬಹುಸಂಖ್ಯರಹುದೆಂದು ಕೊಂಡಾಡಿಮೆಚ್ಚಿದರು।  
ಅಹುದು ಅತನು ಧರ್ಮಾಚರಿಸಬಹುದೆಂಬುದನು  
ತೋರಿ ಮರೆಯಾದನು ॥

ಅಹುದು ಅಹುದೆನ್ನುವೊಲು ಬಹು ಪ್ರಯಾಸದಿ  
ತಾನು

ಬಹುಮಾನ್ಯ ಬಿಕ್ಕೆಯನು ಬೇಡಿ ಕಾಶೀ ಕ್ಷೇತ್ರ।  
ಅಹುದೆನ್ನುವೊಲುಗೆಯ್ದು ಹಿಂದುವಿದ್ಯಾಪೀಠ  
ಸ್ಥಾಪಿಸುತ ಮುದದಿಂದಲಿ ॥

-೩-

ಧೀರನಿವ ಮಾತಿನಲಿ ಕೃತಿಗೆ ವೀರರ ವೀರು।  
ಮಾರನಂತಹ ಪೆಸರು, ಸದ್ಗುಣೋನ್ನತ ಶರಧಿ।  
ಮೀರಿದಾವೇಶದಲಿ ಭಾರತದ ಹಿತಕಾಗಿ  
ಹೋರಾಡಿದಂಥ ಶೂರ ॥

ಶೂರನಿವ ಪ್ರೀತಿಯಲಿ ಸಾರುವವ ನೀತಿಯಲಿ।  
ಬೀರಿದನು ವೈಶಿಷ್ಟ್ಯ ದೇಶ-ಪರದೇಶದಲಿ।  
ಧಾರುಣಿಗೆ ಭಾರತದ ಚಾರುಧರ್ಮಶ್ರೀಯ  
ಹೊಳೆಯಿಸಿದ ಮ[illegible]

-೪-

ಇಂತು ರವಿ ಎಂಭತ್ತು ಮೇಲೈದು ವರುಷಗಳು।  
ಸಂತತಂ ಭಾರತಕೆ ದಿವ್ಯ ತೇಜವನೀಡಿ  
ಮುಂತೆರಳಿ ಕಾಶಿಯಲಿ ವೃದ್ಧಾಪ್ಯ ಕಳೆಯುತಿಹ  
ನವಕಾಳಿ ಕಲಹಾಗ್ನಿಯು॥

ಚಿಂತೆಯಲಿ ಪರಿಣಮಿಸಿ ಶಾಂತಕಿರಣನ ತೇಜ।  
ವಿಂತು ಮರೆಯಾದಿತೆ? ವಿಧಿವಿಲಕ್ಷಣ ರೀತಿ।  
ಯಿಂತು ನಲಿವಾದಿತೆ? ಮಾಲವಿಯ ಸೆಳೆದೊಯ್ಯೆ  
ಕನಿಕರವು ಕೂಕಾಯಿತು ॥

-೫-

ಬೇಕಾದ ಕಾರ್ಯದಲಿ ಬೇಕಾದ ಮಾಲವಿಯು।  
ಬೇಕಾಗದವರು ಸಹ ಬೇಕಾಗಿ ಹೊಗಳಿದರು।  
ಬೇಕೆಷ್ಟು ಜನತೆಯಲಿ ಬೇಕಾದ ಮಹಿಮನಿವ  
ಭಾರತದ ವಾಸ್ಯಕಳೆಯೊ ॥

ಬೇಕಾಷ್ಟು ಶ್ರಮವಿರಲಿ ಬೇಕಾಗಿ ಸಹಿಸು[illegible]  
ಬೇಕೆಂಬುವೊಲು ನಡೆದು ಶ್ರೀಕಾಶೀನಾಥ[illegible]ಗೆ।  
ಬೇಕಾಗಿ ಪೋದಂಥ ಧರ್ಮಾತ್ಮನಾತುಮಕೆ  
ಶಾಂತಿಯನು ಬೇಡುತಿರುವೆ॥

ಎನ್ ಬಿ ಮುಜುಮದಾರ  
(ಸುಭದ್ರಾತನಯ)

---

ರಸಾಲವಾಣಿ ವೇದಾಂತ ಗ್ರಂಥದಲ್ಲಿಯೂ ವಿವಿಧ ಛಂದೋಭಂಗಿಯಲ್ಲಿ ಸಾಗಿದೆ. ಕನ್ನಡದ ಹರಿವರ್ಣನೆ ಮೂಲದ ಅಭಿಪ್ರಾಯ ಬೆಂಬತ್ತಿ ಸಾಗಿದೆ. ಕನ್ನಡದ ಷಟ್ಪದಿಗಳಿಗೆ, ಸಂಸ್ಕೃತದ ಆ ಛಂದೋವಿನ್ಯಾಸದೊಡನೆ ಸಾಗಲಾಗಿಲ್ಲವಾದರು, ಅಭಿಪ್ರಾಯ ನಿರೂಪಣೆಯಲ್ಲಿ ಲೇಖಕರು ಬಹುಮಟ್ಟಿಗೆ ಯಶ ದೊರಕಿಸಿದ್ದಾರೆ. ಸಂಸ್ಕೃತದ ಮೂಲ ಗ್ರಂಥದಲ್ಲಿ ಅಭಿ[illegible] ಹಾಗು ಛಂದೋರಚನೆಯಲ್ಲಿ [illegible] ರಮ್ಯ ಶಯ್ಯೆ ಕನ್ನಡಕ್ಕಿಳಿಯದ ಒಂ[illegible] ವಿಚಾರವನ್ನು ಬಿಟ್ಟರೆ ಗ್ರಂಥಕರ್ತರ ಯತ್ನ ಅಮೋಘವಾಗಿವೆಂದೆ ಹೇಳಬೇಕು. ಅಲ್ಲಲ್ಲಿಯ ಶ್ಲೋಕಸಮುದಾಯಕ್ಕೆ ವಿಷಯ ಸೂಚನೆಯನ್ನು ಗ್ರಂಥಕರ್ತರು ಸೇರಿಸಿ [illegible]ರಿಗೆ ಮತ್ತೂ ಸೌಲಭ್ಯವನ್ನೊದಗಿಸಿದ್ದಾರೆ. ಆಚಾರ್ಯರ ಗ್ರಂಥಗಳನ್ನು ಕನ್ನಡಿಸುವ ಕಾರ್ಯದಲ್ಲಿ ಶ್ರೀ ಸುಬ್ಬಣ್ಣನವರು ಇನ್ನೂ ಮುಂದೆ ಸಾಗಿ ಯತ್ನಿಸಲಿ. ಕನ್ನಡ ಜನತೆ ಅವರಿಂದ ಅಂಥ ಗ್ರಂಥಗಳನ್ನು ಅಪೇಕ್ಷಿಸಲಿ.



## ಮತ್ತೆ ಕಾರ್ಮೋಡಗಳು

ಹಿಂದುಸ್ತಾನದ ರಾಜಕಾರಣದಲ್ಲಿ ಮತ್ತೆ ಕಾರ್ಮೋಡಗಳು ಮುಸುಕಿವೆ. ಮುಸ್ಲಿಂಲೀಗು ಸಹಕಾರ ಬುದ್ಧಿಯಿಂದ ನಡುಗಾಲ ಸರಕಾರದಲ್ಲಿ ಸೇರುವ ಆಶ್ವಾಸನ ಕೊಟ್ಟು ಒಳಗೆ ಹೊಕ್ಕಿದ್ದರೂ ಅವಶ್ಯಕ ಸಹಕಾರ ಸಿಕ್ಕದಿದ್ದುದರಿಂದ ಕಾಂಗ್ರೆಸ ಮತ್ತು ಇತರ ಪಕ್ಷಗಳ ಮಂತ್ರಿಗಳು ತಿಂಗಳೊಪ್ಪತ್ತಿನಲ್ಲಿಯೆ ನಿರಾಶೆ ಹೊಂದಿರುವರು. ನಡುಗಾಲ ಸರಕಾರದ ಉಪಾಧ್ಯಕ್ಷರಾದ ಪಂಡಿತ ಜವಾಹರಲಾಲರು ಮತ್ತು ಗೃಹ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಮಿರತ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಇದೆಲ್ಲವನ್ನು ಬಿಚ್ಚಿ ಹೇಳಿದ್ದಾರೆ. ಸಧ್ಯದ ನಡುಗಾಲ ಸರಕಾರವು ೧೯೧೯ ನೆಯ ಇಸ್ವಿಯ ಕಾಯದೆಯನ್ವಯ ರಚಿಸಲ್ಪಟ್ಟದ್ದರೂ ಒಂದು ಬಗೆಯ ಸಂಯುಕ್ತ ಹೊಣೆಗಾರಿಕೆಯಿಂದ ಆಡಳಿತವನ್ನು ಸಾಗಿಸುವ ಧ್ಯೇಯವನ್ನಿಟ್ಟುಕೊಂಡು ಮುನ್ನಡೆಯುವಾ ಎಂದು ಕಾಂಗ್ರೆಸ್ ಪ್ರತಿನಿಧಿಗಳು ಇದಕ್ಕೆ ಮಂತ್ರಿಮಂಡಳದ ಸ್ವರೂಪ ತಂದಿರುವರು. ವೈಸರಾಯರೂ ಕೆಲಮಟ್ಟಿಗೆ ಇದಕ್ಕೊಪ್ಪಿರುವರು. ಆದರೆ ಮುಸ್ಲಿಂ ಲೀಗಿನವರು ಇದನ್ನೊಪ್ಪದೆ ಸಂಯುಕ್ತ ಹೊಣೆಗಾರಿಕೆಯೆ ಇಲ್ಲ; ಇದು ಮಂತ್ರಿಮಂಡಳವೆ ಅಲ್ಲ ಎಂದು ಮೇಲಿಂದ ಮೇಲೆ ಕೂಗೆಬ್ಬಿಸಿ ಏತಕ್ಕಾಗಿ ತಾವಿಷ್ಟೊಂದು ಹಟಾಪಿಸುತ್ತಿದ್ದರೊ ಆ ಮಂತ್ರಿಮಂಡಳದ ಮತ್ತು ಉಪಾಧ್ಯಕ್ಷ ಪದದ ಸ್ಥಳದ ಮಹತ್ವವನ್ನು ಕಡಮೆ ಮಾಡುತಿರುವರು. ಇತ್ತೀಚೆ ಸ್ವೀಕರಿಸಿದ ಧೋರಣೆಯಿಂದಂತೂ ಮುಸ್ಲಿಂ ಲೀಗಿನವರು ಹಿಂದುಸ್ತಾನದ ಪ್ರಗತಿಗೆ ಅಡ್ಡಿ ಮಾಡುವುದಕ್ಕಾಗಿಯೆ ನಡುಗಾಲ ಸರಕಾರವನ್ನು ಸೇರಿರುವರೆಂಬುದು ಸ್ಪಷ್ಟವಾಗುವುದು.

## ಘಟನಾ ಸಮಿತಿಗೆ ಬಹಿಷ್ಕಾರ

ಮೊದಲು ಗೊತ್ತುಪಡಿಸಿದಂತೆ ಬ್ರಿಟಿಶ ಸರಕಾರದವರು ಡಿಸೆಂಬರ ೯ ನೆಯ ತಾರೀಕಿಗೆ ಘಟನಾಮಿತಿ ಸೇರುವುದೆಂದು ಸಾರಿ ವೈಸರಾಯ ವೇವಲ್‌ರ ಮುಖಾಂತರ ಸದಸ್ಯರಿಗೆಲ್ಲ ಅಮಂತ್ರಣ ಪತ್ರಿಕೆಗಳನ್ನು ಕಳಿಸಿದ್ದಾರೆ. ವೇವೆಲ್ಲರು ಈ ಬಗೆಯ ಅಮಂತ್ರಣ ಪತ್ರಿಕೆಗಳನ್ನು ಕಳಿಸುವ ಮೊದಲು ಬ್ಯಾ. ಜಿನ್ನಾರೊಡನೆ ಚರ್ಚಿಸಿದರು. ಜಿನ್ನಾರವರಾದರೂ ತಮ್ಮ ದುರಾರಾಧ್ಯವೃತ್ತಿಗನುಸಾರ ಹಿಂದುಸ್ತಾನದಲ್ಲಿಯ ಸಧ್ಯದ ಅಶಾಂತಿಯ ನೆವ ಮುಂದೆ ಮಾಡಿ ಘಟನಾ ಸಮಿತಿಯನ್ನು ಮುಂದೂಡಿರೆಂದು ವೈಸರಾಯರಿಗೆ ಹೇಳಿದರು. ಆದರೆ ವೈಸರಾಯರು ಅದಕ್ಕೊಪ್ಪದೆ ಮೇಲೆ ಹೇಳಿದಂತೆ ಅದನ್ನು ಸೇರಿಸುವ ನಿರ್ಧಾರ ಮಾಡಿದರು. ತಮ್ಮ ಮಾತಿಗೆ ಮಹತ್ವ ಕೊಡಲಿಲ್ಲೆಂದು ಬಗೆದು ಬ್ಯಾ. ಜಿನ್ನಾ ಸಾಹೇಬರು ಘಟನಾ ಸಮಿತಿಯನ್ನೇ ಬಹಿಷ್ಕರಿಸಬೇಕೆಂದು ನಿರ್ಧರಿಸಿ ಆ ರೀತಿ ಅರ್ಭಟಿಸಿದ್ದಾರೆ ಇದರಿಂದ ಹಿಂದೀ ರಾಜಕಾರಣದಲ್ಲಿ ಮತ್ತೆ ತೊಡಕುಂಟಾಗಿದೆ. ನಡುಗಾಲ ಸರಕಾರದಲ್ಲಿ ಸೇರುವ ಮೊದಲು ಬ್ಯಾ. ಜಿನ್ನಾರವರು ಘಟನಾ ಸಮಿತಿಯಲ್ಲಿ ಭಾಗ ವಹಿಸುವ ಆಶ್ವಾಸನ ಕೊಟ್ಟಿರುವರೆಂಬುದು ಲಾರ್ಡ ವೇವಲ್ಲರು ಪಂಡಿತ ಜವಾಹರಲಾಲರಿಗೆ ಬರೆದ ಪತ್ರದಿಂದ ಸ್ಪಷ್ಟವಾಗುವದು. ಅಕ್ಟೋಬರ ೩೩ಕ್ಕೆ ವೈಸರಾಯರು ಜವಾಹರರಿಗೆ ಬರೆದ ಪತ್ರದಲ್ಲಿ 'ಮುಸ್ಲಿಂ ಲೀಗು ಸಂಪೂರ್ಣ ಸಹಕಾರ ಬುದ್ಧಿಯಿಂದ ನಡುಗಾಲ ಸರಕಾರವನ್ನೂ ಘಟನಾ ಸಮಿತಿಯನ್ನೂ ಸೇರುವದೆಂದು ಬ್ಯಾ. ಜಿನ್ನಾರು ಆಶ್ವಾಸನ ಕೊಟ್ಟಿದ್ದಾರೆ' ಎಂದು ಸ್ಪಷ್ಟವಾಗಿ ಬರೆದಿರುವರು. ಈ ಪತ್ರವ್ಯವಹಾರ ಪ್ರಸಿದ್ಧವಾದ ನಂತರ ಬ್ಯಾ. ಜಿನ್ನಾರು ಕರಾಚಿ ಸುದ್ದಿಗಾರರ ಸಭೆಯಲ್ಲಿ ಮಾತಾಡುತ್ತ ವೈಸರಾಯರಿಗೆ ತಾವು ಹಾಗೇನು ವಚನ ಕೊಟ್ಟರಲಿಲ್ಲೆಂದೂ ವಿಚಾರ ಮಾಡುವದಾಗಿ ಆಶ್ವಾಸನ ಕೊಟ್ಟದ್ದಾಗಿಯೂ ಹೇಳಿದ್ದಾರೆ. ಇದನ್ನು ನೋಡಿದರೆ ವೈಸರಾಯರಾದರೂ ಜವಾಹರಲಾಲರಿಗೆ ಸುಳ್ಳು ಪತ್ರ ಬರೆದಿರಬಹುದು; ಇಲ್ಲವೆ ಬ್ಯಾ. ಜಿನ್ನಾರವರು ವಚನಭಂಗ ಮಾಡುತಿರಬಹುದೆಂಬುದು ಗೊತ್ತಾಗುವುದು. ವೈಸರಾಯರು ಜಿನ್ನಾರ ಈ ಹೇಳಿಕೆಯ ಬಗ್ಗೆ ಏನೂ ನಿರಾಕರಣೆ ಹೊರಡಿಸದಿದ್ದುದು ಆಶ್ಚರ್ಯಕರವಾಗಿದೆ. ವೈಸರಾಯರು ಈ ಸಂದರ್ಭದಲ್ಲಿ ಚಾಣಕ್ಯತಂತ್ರ ನಡೆಸಿರಬಹುದೆಂಬ ಸಂಶಯವೂ ಬರುತಿದೆ. ಇಲ್ಲದಿದ್ದರೆ ಮೊದಲೆ ದೀರ್ಘಾವಧಿ ಯೋಜನೆಗೆ ಒಪ್ಪುವದಾಗಿ ಜಿನ್ನಾರವರು ಹೇಳಿರುವಾಗ ಮತ್ತೆ ಅವರೊಡನೆ ವಿಚಾರವಿನಿಮಯ ಮಾಡುವ ಪ್ರಸಂಗವೇನಿತ್ತು ? ಇದರಿಂದ ವೇವೆಲ್ಲರ ಹೃದಯ ಇನ್ನೂ ಅಷ್ಟೊಂದು ವಿಶುದ್ಧವಾಗಿಲ್ಲೆಂದು ಸ್ಪಷ್ಟ ತೋರುತ್ತದೆ. ಮುಸ್ಲಿಂ ಲೀಗು ನಡುಗಾಲ ಸರಕಾರದಲ್ಲಿ ಸೇರಿದಂದಿನಿಂದ ಅವರ ಬುದ್ಧಿ ಮಂಕವಾಗಿದೆಂದು ಪಂಡಿತರು ಅರೋಪಿಸಿದ್ದು ಯಥಾರ್ಥ ತೋರುತ್ತದೆ.

# ಸಂಪಾದಕೀಯ
# ಟೀಕೆ-ಟಿಪ್ಪಣೆಗಳು

## ಹಿಂದೂಡುವ ಹೊಸ ದಾರಿ?

ಮುಸ್ಲಿಂ ಲೀಗಿನವರು ದೀರ್ಘಾವಧಿ ಯೋಜನೆಗೆ ಒಪ್ಪಿ ಈಗ ಅದನ್ನು ಬಹಿಷ್ಕರಿಸುವ ಧೋರಣ ವಹಿಸಿರುವರೆಂದ ಬಳಿಕ ಬ್ರಿಟಿಶ್ ಸರಕಾರದವರು ತಮ್ಮ ಕಾರ್ಯಕ್ರಮದಂತೆ ನೆಡೆಯಬೇಕಿತ್ತು. ನಡುಗಾಲ ಸರಕಾರದಲ್ಲಿ ಸೇರುವಾಗ ದೀರ್ಘಾವಧಿ ಯೋಜನೆಯನ್ನೂ ಸ್ವೀಕರಿಸುವ ಸ್ಪಷ್ಟ ಆಶ್ವಾಸನ ಕೊಟ್ಟರುವಿರಾದ್ದರಿಂದ ಘಟನಾ ಸಮಿತಿಯಲ್ಲಿ ಸೇರಬೇಕು ಇಲ್ಲವಾದರೆ ನಡುಗಾಲ ಸರಕಾರದಲ್ಲಿ ನಿಮಗೆ ಸ್ಥಳವಿರಲಾರದೆಂದು ಖಂಡತುಂಡಾಗಿ ಹೇಳಬೇಕಿತ್ತು. ಆದರೆ ಬ್ರಿಟಿಶ್ ಸರಕಾರದವರು ಹೀಗೆ ಮಾಡದೆ ಘಟನಾ ಸಮಿತಿಯನ್ನೆ ಹಿಂದೂಡುವ ಹೊಸದೊಂದು ಹಾದಿಯನ್ನು ಹುಡುಕಿರುವರೆಂದು ತೋರುವದು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳಲ್ಲಿ ಉಂಟಾದ ಈ ಮತಭೇದವನ್ನು ಬಗೆಹರಿಸಲು ಹಿಂದೀ ಮುಂದಾಳುಗಳ ಪರಿಷತ್ತೊಂದನ್ನು ಲಂಡನದಲ್ಲಿ ಕರೆದಿರುವರು. ಆದಕ್ಕೆ ಕಾಂಗ್ರೆಸ್ಸಿನ ಇಬ್ಬರು, ಮುಸ್ಲಿಂ ಲೀಗಿನ ಇಬ್ಬರು, ಮತ್ತು ಶೀಖ ಒಬ್ಬರು ಹೀಗೆ ಐದು ಜನರನ್ನು ಮತ್ತು ವೈಸರಾಯ ವೇವೆಲ್ಲರನ್ನು ಲಂಡನ್ನಿಗೆ ಅಮಂತ್ರಿಸಿರುವರು. ವೈಸರಾಯರು ಇದೇ ೩೦ ನೇ ದಿನಾಂಕ ಲಂಡನ್ನಿಗೆ ಹೊರಡುವರು. ಹತ್ತು ದಿನಗಳ ಅವರ ಅನುಪಸ್ಥಿತಿಯಲ್ಲಿ ಸರ್ ಜಾನ್ ಕಾಲ್ವಿಲ್‌ರನ್ನು ವೈಸರಾಯರನ್ನಾಗಿ ನೇಮಿಸಲಾಗಿದೆ. ಬ್ಯಾ. ಜಿನ್ನಾ ಸಾಹೇಬರು ಬ್ರಿಟಿಶ್ ಸರಕಾರದ ಈ ಹೊಸ ಉಪಕ್ರಮಕ್ಕೆ ಹೂಗೊಟ್ಟು ಲಂಡನ್ನಿಗೆ ಹೋಗಲು ಸಿದ್ಧರಾಗಿರುತ್ತಾರೆಂದು ತಿಳಿಯುತ್ತದೆ. ಕಾಂಗ್ರೆಸ್ ಮುಂದಾಳುಗಳು ಬಹುಶಃ ಹೋಗಲಿಕ್ಕಿಲ್ಲೆಂದು ತೋರುತ್ತದೆ. ಕಾಂಗ್ರೆಸು ದೀರ್ಘಾವಧಿ ಯೋಜನೆಯನ್ನೊಪ್ಪಿರುವದೆಂದ ಬಳಿಕ ಲಂಡನಿಗೆ ಹೋಗುವದರ ಪ್ರಯೋಜನವೇನೊ ತಿಳಿಯದು! ಸ್ವತಃ ಭಾರತ ಮಂತ್ರಿಗಳು ಮತ್ತು ಇಬ್ಬರು ಬೇರೆ ಬ್ರಿಟಿಶ್ ಮಂತ್ರಿಗಳು ಇಲ್ಲಿಗೆ ಬಂದು ಕಾಂಗ್ರೆಸ ಲೀಗುಗಳಲ್ಲಿ ಒಡಂಬಡಿಕೆ ಮಾಡಲು ಎಷ್ಟೊಂದು ಪ್ರಯತ್ನಿಸಿದರೂ? ಅದು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಲಂಡನ್ನಿಗೆ ಅವರನ್ನು ಕರೆಸಿಕೊಳ್ಳುವದರಿಂದ ಅದೆಂತು ಒಂಬಡಿಕೆಯಾದಗಬಲ್ಲದೊ ತಿಳಿಯದು !! ಘಟನಾ ಸಮಿತಿಯನ್ನೆ ಕೂಡಿಸದಿರುವ ಇದೊಂದು ಚಾಣಕ್ಯನೀತಿ ಬೇರೆಯಾಗಿರಲಿಕ್ಕಿಲ್ಲವಷ್ಟೇ ? ಖಾನ ಅಬ್ದುಲ್ ಗಫರಖಾನರಂತೂ ಈಗಲೆ ಹಾಗೆ ಆರೋಪಿಸಿ ಕೂಡ ಬಿಟ್ಟಿರುವರು. ಘಟನಾ ಸಮಿತಿಯ ಬಗ್ಗೆ ಇಷ್ಟೆಲ್ಲ ಸಿದ್ಧತೆಯಾಗಿರುವಾಗ ಮತ್ತೆ ವಿಚಾರ ವಿನಿಮಯಕ್ಕಾಗಿ ಹಿಂದೀ ಮುಖಂಡರನ್ನು ಲಂಡನ್ನಿಗೆ ಕರೆಯಿಸಿಕೊಳ್ಳುವುದೇನು ಶುಭಲಕ್ಷಣವಲ್ಲ ಏನೋ ಒಂದು ಬಗೆಯ ಕುತಂತ್ರವನ್ನು ಹೂಡಿ ಹಿಂದುಸ್ತಾನವನ್ನು ತಮ್ಮ ಕಪಿಮುಷ್ಟಿಯಲ್ಲಿಯೇ ಇಟ್ಟುಕೊಳ್ಳಲು ಬ್ರಿಟಿಶರ ಸಾಹಸವಿರಬಹುದೇನೊ. ಮುಂದಿನ ಘಟನೆಗಳೆ ಇದನ್ನು ಸಿದ್ಧಪಡಿಸುವುವು.

## ಮಿರತ ಕಾಂಗ್ರೆಸ್ಸಿನ ಮುನ್ನಡೆ

ಮಿರತಿನಲ್ಲಿ ಕೂಡಿದ ಕಾಂಗ್ರೆಸ್ಸಿನ ೫೪ನೇ ಮಹಾಧಿವೇಶನದ ಕಾರ್ಯಕಲಾಪಗಳನ್ನು ಸಂಕ್ಷೇಪತಃ ಕೊಟ್ಟಿದ್ದೇವೆ. ಕಾಂಗ್ರೆಸ್‌ಅಧ್ಯಕ್ಷಪದವನ್ನಲಂಕರಿಸಿರುವ ಆಚಾರ್ಯ ಕೃಪಲಾನಿಯವರ ಭಾಷಣದ ಮುಖ್ಯಾಂಶವನ್ನೂ ಕೊಟ್ಟಿದ್ದೇವೆ. ಕಾಂಗ್ರೆಸ್ಸು ದೇಶದಲ್ಲಿಯ ಸಧ್ಯದ ಪರಿಸ್ಥಿತಿಯನ್ನನುಲಕ್ಷಿಸಿ ತನ್ನ ಧೋರಣವನ್ನು ಸ್ಪಷ್ಟಪಡಿಸಿದೆ. ಘಟನಾಸಮಿತಿಯಲ್ಲಿ ತಾನು ಸೇರುವುದೇಕೆ ಎಂದು ಮುಂತಾದ್ದನ್ನು ಬಿಚ್ಚುಮಾತುಗಳಲ್ಲಿ ಹೇಳಿದೆ. ಪರಕೀಯದ ಬಂಧನಗಳನ್ನು ಹರಿದೊಗೆದು ಸ್ವಾತಂತ್ರ್ಯವನ್ನನುಭೋಗಿಸಬೇಕಾಗಿದ್ದರೆ ಅಂತರಿಕ ಐಕ್ಯ ಅತ್ಯವಶ್ಯವಾಗಿದೆಂದು ಬೇರೆ ಹೇಳಬೇಕಿಲ್ಲ. ಆಕಿತೆಯು ಕಾಂಗ್ರೆಸ್ಸು ಅಂತರಿಕ ಐಕ್ಯದ ಬಗ್ಗೆ ಪಂಡಿತ ಜವಾಹರಲಾಲರು ಮಂಡಿಸಿದ ಗೊತ್ತನ್ನು ಸ್ವೀಕರಿಸಿ ದೇಶಕ್ಕೆ ನಿಚ್ಚಳ ಮಾರ್ಗವನ್ನು ತೋರಿಸಿದೆ. ಸ್ವರಾಜ್ಯ ಸಾಧನೆಯ ಮಾರ್ಗವೆಂದು ಕಾಂಗ್ರೆಸ್ಸು ನಡುಗಾಲ ಸರಕಾರದಲ್ಲಿ ಸೇರಿದೆ. ಈ ಬಗ್ಗೆ ಕಾಂಗ್ರೆಸ್ ಕಾರ್ಯ ಸಮಿತಿ ಮತ್ತು ಅ. ಭಾ. ಕಾಂಗ್ರೆಸ ಸಮಿತಿ ಒಪ್ಪಿಗೆ ಕೊಟ್ಟದ್ದಕ್ಕೆ ಕಾಂಗ್ರೆಸ ಮಹಾಧಿವೇಶನದ ಬೆಂಬಲವಿರುವ ಗೊತ್ತುವಳಿಯನ್ನು ಸರದಾರ ವಲ್ಲಭಭಾಯಿಯವರು ಮಂಡಿಸಿ ಒಳ್ಳೇ ಆವೇಶಯುಕ್ತ ಭಾಷಣ ಮಾಡಿದರು. ಹಿಂದೀಯರು ಪುಂಡರ ವಿರುದ್ಧ ಆತ್ಮರಕ್ಷಣೆಯ 'ಸಂಘಟನೆಯನ್ನು ಮಾಡಿಕೊಳ್ಳಬೇಕೆಂದು ಹೇಳಿ ಶಠಂ ಪ್ರತಿಶಾಠ್ಯಂ ಧೋರಣೆಯಲ್ಲಿ ತಮ್ಮ ವಿಶ್ವಾಸವಿದೆಂದು ಹೇಳಿದರು. ವಿಶೇಷ ಚರ್ಚೆಯ ನಂತರ ಗೊತ್ತುವಳಿ ಸ್ವೀಕೃತವಾಯಿತು. ಸಂಪೂರ್ಣ ಸ್ವಾತಂತ್ರ್ಯವೆ ಕಾಂಗ್ರೆಸ್ಸಿನ ಗುರಿಯೆಂದು ಲಾಹೋರ ಕಾಂಗ್ರೆಸ್ಸಿನಿಂದ ಇಟ್ಟುಕೊಳ್ಳಲಾಗಿದೆ. ಮತ್ತು ಆ ಧ್ಯೇಯ ಸಾಧನೆಯ ದಿಸೆಯಲ್ಲಿಯೆ ಕಾರ್ಯ ಕೂಡ ನಡೆದಿದೆ. ಸರ್ವತಂತ್ರ ಸ್ವತಂತ್ರ ಹಿಂದುಸ್ತಾನವನ್ನು ರಚಿಸುವದೆ ಕಾಂಗ್ರೆಸ್ಸಿನ ಗುರಿಯೆಂಬ ಗೊತ್ತುವಳಿಯನ್ನು ಸ್ವೀಕರಿಸಿ ಕಾಂಗ್ರೆಸ್ಸು ಒಂದು ಹೆಜ್ಜೆ ಮುಂದಿಟ್ಟತೆಂದು ಹೇಳಬಹುದು. ಸಂಸ್ಥಾನಗಳಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮು ಹಿಂದುಸ್ತಾನದಲ್ಲಿ ನಡೆದ ಸ್ವಾತಂತ್ರ್ಯಸಂಗ್ರಾಮುದ ಮುಖ್ಯ ಅಂಗವೇ ಆಗಿರುವದರಿಂದ ಸ್ವತಂತ್ರ ಹಿಂದುಸ್ತಾನದ ಒಳಅಂಗಗಳೆಂದು ಸಂಸ್ಥಾನಗಳ ಜನರು ನಾಗರಿಕ ಸ್ವಾತಂತ್ರ್ಯ ಹಾಗು ಹೊಣೆಗಾರ ಸರಕಾರಸ್ಥಾಪನೆಗೆ ಸಹಾನುಭೂತಿ ವ್ಯಕ್ತಪಡಿಸುವ ಡಾ. ಪಟ್ಟಾಭಿಯವರ ಗೊತ್ತುವಳಿಯನ್ನು ಕಾಂಗ್ರೆಸ್ಸು ಸ್ವೀಕರಿಸಿತು, ಕಾಂಗ್ರೆಸ್ ಚುನಾವಣೆ ಕಾಲಕ್ಕೆ ಹೊರಡಿಸಿದ ಘೋಷಣೆ ಪತ್ರಿಕೆಯನ್ನು ಸಮರ್ಥಿಸುವ ಗೊತ್ತುವಳಿಯು ಸ್ವೀಕೃತವಾಯಿತು. ಕಾಂಗ್ರೆಸ್ಸಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳು ಭಾರತದ ಸ್ವಾತಂತ್ರ್ಯದ ದೃಷ್ಟಿಯಿಂದ ಅತ್ಯಂತ ಮಹತ್ವವಾಗಿವೆಂದು ಬೇರೆ ಹೇಳಬೇಕಿಲ್ಲ. ಆರು ವರ್ಷಗಳ ನಂತರ ಕೂಡಿದ ಮಹಾಧಿವೇಶನ ಸಧ್ಯದ ವಿಷಮ ಪರಿಸ್ಥಿತಿಯಲ್ಲಿಯೂ ಯಶಸ್ವಿಯಾಗಿ ರಾಷ್ಟ್ರಕ್ಕೆ ನಿಚ್ಚಳವಾದ ಮಾರ್ಗ ತೋರಿಸಿದೆ.

## ಕೈಲಾಸ ಕಂಡ ಕೈಲಾಸಂರು

ಕರ್ನಾಟಕದ ಪ್ರಮುಖ ಸಾಹಿತಿಗಳೂ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರೂ ಅಗಿದ್ದ ತ್ಯಾಗರಾಜ ಪರಮಶಿವ ಕೈಲಾಸಂರು ೨೩ ನೆಯ ದಿನಾಂಕ ಬೆಂಗಳೂರಿನಲ್ಲಿ ಕೈಲಾಸವಾಸಿಗಳಾದುದನ್ನು ಕೇಳಿ ಇಡೀ ಕನ್ನಡನಾಡು ದುಃಖಾಶ್ರುಗಳನ್ನು ದುರಿಸುವಲ್ಲಿ ಸಂದೇಹವಿಲ್ಲ. ಕರ್ನಾಟಕ ಪ್ರಹಸನ ಪಿತಾಮಹರಾಗಿದ್ದ ಕೈಲಾಸಂರು ಕನ್ನಡ ಸಾಹಿತ್ಯದೇವಿಗೆ ಸಲ್ಲಿಸಿದ ಮುಡುಪು ಅನುಪಮವಾಗಿದೆ. ಕನ್ನಡನಾಡಾದರೂ ತಡವಾಗಿಯಾದರೂ ಚಿಂತೆಯಿಲ್ಲ ಈ ಸೇವೆಯನ್ನು ಮನ್ನಿಸಿ. ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನದಲ್ಲಿ ಅವರನ್ನು ಕುಳ್ಳಿರಿಸಿದ್ದಿತು.ಕೈಲಾಸಂರ ಆರೋಗ್ಯ ವೇನು ಅಷ್ಟೊಂದು ಕೆಟ್ಟರಲಿಲ್ಲ.ಆದರೆ ಇತ್ತೀಚೆ ದೇಶದಲ್ಲಿ ನಡೆದ ಹತ್ಯಾಕಾಂಡದಿಂದ ಅವರ ಮನಸಿನ ಮೇಲೆ ಒಳ್ಳೆ ಅಘಾತವಾದಂತಾಗಿತ್ತೆಂಬುದು ಅವರ ಮರಣಕಾಲದ ಮಾತುಗಳಿಂದ ಗೊತ್ತಾಗುವದು. ಕಳೆದ ವರ್ಷ ಮದ್ರಾಸಿನಲ್ಲಿ ಅವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಾಹಿತ್ಯ ಸಮ್ಮೇಲನದ ಕಾಲಕ್ಕೆಯೆ ಕನ್ನಡ ಬಾವುಟದ ಕೋಲುಮುರಿದು ಆದ ಅಪಶಕುನವು ಶ್ರೀಕಂಠಯ್ಯನವರನ್ನೂ ಸ್ವತಃ ಕೈಲಾಸಂರನ್ನೂ ಒಂದು ವರ್ಷದೊಳಗಾಗಿ ಅಹುತಿ ತೆಗೆದುಕೊಂಡದ್ದು ಅತ್ಯಂತ ವಿಷಾದಕರವಾದ ಸಂಗತಿಯಾಗಿದೆ. ಕೈಲಾಸಂರ ಹಿರಿಯರು ಸರಕಾರಿ ನೌಕರರಾಗಿದ್ದರೂ ಇವರು ಸಾಹಿತ್ಯ ಕ್ಷೇತ್ರವನ್ನೆ ತಮ್ಮ ಕರ್ಮಭೂಮಿಯನ್ನಾಗಿ ರಿಸಿಕೊಂಡು ಕನ್ನಡ ಇಂಗ್ಲಿಷಗಳಲ್ಲಿ ಅನೇಕ ಪ್ರಹಸನಗಳನ್ನು ಬರೆದು ಕೀರ್ತಿಶಾಲಿಗಳಾಗಿರುವರು. ಕೈಲಾಸಂರವರು ಸ್ವತಂತ್ರ ಪ್ರವೃತ್ತಿಯುವರಾದ್ದರಿಂದ ಅನೇಕಸಲ ಒರಟಾಗಿ ಕಾಣುತಿದ್ದರೂ ಅವರ ಜೀವನ ಉದಾತ್ತವಾಗಿದ್ದಿತು. ರೀತಿ ಮೃದುವಾಗಿದ್ದಿತು ತಮ್ಮ ವಿಳಾಸ 'ಭವಿಷ್ಯತ್ತಿನ ಉಡ್ಡಿಯಲ್ಲಿ' ಎಂದು ಕೈಲಾಸಂರು ಹೇಳುತ್ತಿದ್ದರು. ಅಂದರೆ ತಮ್ಮ ಅಮರ ಕೀರ್ತಿಯು ಪ್ರಲಯಕಾಲದ ವರೆಗೂ ಮೊಳಗುವುದೆಂದು ಅವರ ಅಭಿಪ್ರಾಯವಾಗಿದ್ದಿತು. ಇವರ ಕನ್ನಡ ನಾಟಕಗಳು ಮತ್ತು ಇಂಗ್ಲಿಶ್ ನಾಟಕಗಳು ಎರಡು ಕಣ್ಣುಗಳಂತಿವೆ. ಒಂದು ನಗೆಯ ಕಣ್ಣಾಗಿದ್ದರೆ ಇನ್ನೊಂದು ನೋವಿನ ಕಣ್ಣಾಗಿದೆ. ಅವರ ಪ್ರಹಸನಗಳಲ್ಲಿ ಇದನ್ನು ಯಾರಾದರೂ ಕಂಡುಹಿಡಿಯಬಹುದು. ಕೈಲಾಸಂರ ಸಾಹಿತ್ಯವನ್ನು ಹಿರಿಯ ಸಾಹಿತಿಗಳೆಲ್ಲ ಮುಕ್ತಕಂಠದಿಂದ ಹೊಗಳಿರುವರು. ಅವರ ಸಾಹಿತ್ಯದಲ್ಲಿಯ ವಾಸ್ತವಿಕತೆ, ವಿನೋದ, ಜೀವನದ ಆಳವಾದ ಅಭ್ಯಾಸ ಮೊದಲಾದವುಗಳು ಅನುಪಮವಾಗಿವೆ. ಈ ರೀತಿಯಾಗಿ ಕನ್ನಡದ ಹಿರಿಯ ಸಾಹಿತಿಗಳೊಬ್ಬರು ಅಕಾಲ ನಿಧನಹೊಂದಿದ್ದು ತುಂಬಿ ಬರಲಾರದ ಹಾನಿಯಾಗಿದೆ. ಪರಮಾತ್ಮನು ಇವರ ಅತ್ಮಕ್ಕೆ ಚಿರಶಾಂತಿಯನ್ನುಂಟುಮಾಡಲಿ. ಕೈಲಾಸಂರ ಸಾಹಿತ್ಯವು ಕನ್ನಡ ತರುಣರಲ್ಲಿ ಸ್ಫೂರ್ತಿಯನ್ನು ತುಂಬಿ ಅವರಿಂದ ಸಾಹಿತ್ಯ ಸೇವೆ ಮಾಡಿಸಲಿ ಎಂದು ಹಾರಯಿಸುತ್ತೇವೆ.

## ವಿಜಯಲಕ್ಷ್ಮಿಯ ವಿಜಯ ಯಾತ್ರೆ

ವಿಜಯಲಕ್ಷ್ಮೀ ಪಂಡಿತರು ಯುಕ್ತರಾಷ್ಟ್ರ ಸಭೆಯ ರಾಜಕೀಯ ಮತ್ತು ಶಾಸನಸಭೆಗಳ ಸಂಯುಕ್ತ ಸಭೆಯಲ್ಲಿ ದಕ್ಷಿಣ ಅಫ್ರಿಕೆಯಲ್ಲಿಯ ಹಿಂದೀಯರ ಹಕ್ಕುಬಾಧ್ಯತೆಗಳ ಸಂಬಂಧದಲ್ಲಿ ಒಳ್ಳೆ ವಿಚಾರ ಪರಿಪ್ಲುತ ಭಾಷಣ ಮಾಡಿ ನಿಕೋಲಸ್‌ರು ಎತ್ತಿದ ಆಕ್ಷೇಪಗಳನ್ನು ಖಂಡಿಸಿಬಿಟ್ಟರು. ಹಿಂದುಸ್ತಾನದಲ್ಲಿಯ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಅವಹೇಳನ ಮಾಡಿ ದಕ್ಷಿಣಅಫ್ರಿಕೆಯ ಪ್ರತಿನಿಧಿ ನಿಕೋಲಸ್‌ರು ಮಾಡಿದ ಭಾಷಣಕ್ಕೆ ಪ್ರತಿಯಾಗಿ ವಿಜಯಲಕ್ಷ್ಮಿಯವರು ಮಾತಾಡಿ ಹಿಂದೀಯರ ಪಕ್ಷ ಸತ್ಪಕ್ಷವಾಗಿದೆಂಬುದನ್ನು ಎಲ್ಲರಿಗೆ ಮನವರಿಕೆ ಮಾಡಿಕೊಟ್ಟರು. ದಕ್ಷಿಣ ಅಫ್ರಿಕೆಯಲ್ಲಿ ಹಿಂದೀಯರ ಅಸ್ತಿತ್ವವು ಪಾಶ್ಚಾತ್ಯ ಸಂಸ್ಕೃತಿಗೆ ಗಂಡಾಂತರಪ್ರದವಾಗಿದೆಂದು ನಿಕೋಲಸರು ಹೇಳಿದ್ದಕ್ಕೆ ವಿಜಯಲಕ್ಷ್ಮಿಯವರು ಪಾಶ್ಚಾತ್ಯ ಸಂಸ್ಕೃತಿಗಿಂತ ಯುರೋಪಿಯನ್‌ರ ಪ್ರಭುತ್ವಕ್ಕೆ ಕಂಟಕಪ್ರದವಾಗಿದೆಂದು ಹೇಳುವದು ಹೆಚ್ಚು ಸಮರ್ಪಕ ತೋರುತ್ತದೆಂದು ಹೇಳಿದರು. ಈ ಮಾತು ಸತ್ಯಪೂರ್ಣವಾಗಿದೆಂದು ಬೇರೆ ಹೇಳಬೇಕಾಗಿಲ್ಲ. ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳ ಮೇಲೆ ತಮ್ಮ ಪ್ರಭುತ್ವ ಕೂಡಿಸಬೇಕೆಂಬ ರಾಕ್ಷಸೀ ಮಹತ್ವಾಕಾಂಕ್ಷೆಗೆ ಯುರೋಪಿಯನ್ ರಾಷ್ಟ್ರಗಳಿಂದು ಒಳಗಾಗಿವೆ. ಅಂತೆಯೆ ಎಲ್ಲೆಡೆ ತಮ್ಮ ಚಂಚುಪ್ರವೇಶ ಮಾಡಬಯಸುತ್ತವೆ. ದಕ್ಷಿಣ ಅಫ್ರಿಕೆಯಲ್ಲಿಯ ೨೦ ಲಕ್ಷ ಯುರೋಪೇತರರ ಮೇಲೆ ಆರ್ಥಿಕ ಪ್ರಭುತ್ವ ನಡೆಸಲು ಸ್ಮಟ್ಸ ಸರಕಾರ ರಾಜಕೀಯ ಪ್ರಭುತ್ವಕ್ಕಾಗಿ ಹೋರಾಡುತಿದೆ. ಇದರಿಂದ ಯುರೋಪಿಯನ್ ಮತು ಯುರೋಪೇತರರ ಭೇದ ಉಳಿದು ಬೆಳೆಯುವುದಲ್ಲದೆ ಅಳಿಯಲಾರದೆಂದು ವಿಜಯಲಕ್ಷ್ಮಿಯವರು ಒತ್ತಿ ಹೇಳಿದರು. ಜಾಗತಿಕ ಶಾಂತಿ ಸೌಹಾರ್ದವನ್ನು ಸ್ಥಾಪಿಸುವದಕ್ಕಾಗಿ ನಡೆದ ಪ್ರಯತ್ನದ ಸಮಯದಲ್ಲಿ ದಕ್ಷಿಣ ಅಫ್ರಿಕೆಯಲ್ಲಿಯ ಹಿಂದೀಯರ ಹಕ್ಕುಬಾಧ್ಯತೆಗಳನ್ನು ಹತ್ತಿಕ್ಕುವುದು ಯಾವರೀತಿಯಿಂದಲೂ ನ್ಯಾಯ್ಯವಲ್ಲ. ಹಿಂದೀಯರ ಪಕ್ಷ ಸತ್ಪಕ್ಷವೆಂದು ವಿಜಯಲಕ್ಷ್ಮಿಯವರು ಸಿದ್ಧ ಮಾಡಿದ್ದರಿಂದ ರಶಿಯದ ಪ್ರತಿನಿಧಿ ಆ್ಯಂಡ್ರಿ ಗ್ರೊಮಿಕೊರವರು ಸಭೆ ಮುಗಿದ ನಂತರ ವಿಜಯಲಕ್ಷ್ಮಿಯವರ ಹಸ್ತಾಂದೋಲನ ಮಾಡಿ ರಶಿಯದ ಬೆಂಬಲ ನಿಮಗೆ ಸಿಕ್ಕುತ್ತದೆಂದು ಆಶ್ವಾಸನ ಕೊಟ್ಟರು. ಇನ್ನಿತರ ಪ್ರತಿನಿಧಿಗಳೂ ಇದೇ ರೀತಿ ವಚನ ಕೊಟ್ಟಿರುವರು. ವಿಜಯಲಕ್ಷ್ಮಿಯವರು ಯುಕ್ತ ರಾಷ್ಟ್ರ ಸಭೆಯಲ್ಲಿ ಇಂತು ವಿಜಯಯಾತ್ರೆಯನ್ನು ಸಾಧಿಸಿದ್ದು ಅತ್ಯಂತ ಅಭಿನಂದನೀಯ ಸಂಗತಿಯಾಗಿದೆ. ಅವರ ಪ್ರಯತ್ನದಿಂದ ದಕ್ಷಿಣ ಅಫ್ರಿಕೆಯಲ್ಲಿಯ ಹಿಂದೀಯರ ಹಕ್ಕುಬಾಧ್ಯತೆಗಳು ರಕ್ಷಿಸಲ್ಪಡಲೆಂದು ಹಾರಯಿಸುತ್ತೇವೆ.

# ಕಾಂಗ್ರೆಸ್ಸಿನ ೫೪ನೆಯ ಮಹಾಧಿವೇಶನ

ಹಿಂದೀ ರಾಷ್ಟ್ರೀಯ ಮಹಾಸಭೆಯ ೫೪ನೆಯ ಅಧಿವೇಶನ ಮಿರತಿನಲ್ಲಿ ಪ್ಯಾರೇಲಾಲ ನಗರದಲ್ಲಿ ನವಂಬರ ೨೩-೨೪ ಎರಡು ದಿನ ಒಳ್ಳೇ ವಿಜೃಂಭಣೆಯಿಂದ ಸಾಂಗವಾಯಿತು. ೨೩ನೇ ತಾ. ಮಧ್ಯಾಹ್ನ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಅಧಿವೇಶನ ಪ್ರಾರಂಭವಾಯಿತು. ಶ್ರೀ ಚೌಧರಿ ರಘುವೀರನಾರಾಯಣಸಿಂಗರು ಸ್ವಾಗತ ಭಾಷಣ ಮಾಡುತ್ತ ಎಲ್ಲರನ್ನು ಸ್ವಾಗತಿಸಿದರು. ಅನಂತರ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ತಮ್ಮ ಭಾಷಣವನ್ನು ಹಿಂದಿಯಲ್ಲಿ ಮಾಡಿದರು. ಮುದ್ರಿತ ಇಂಗ್ಲೀಷ ಭಾಷಣದಲ್ಲಿಯ ಮುಖ್ಯ ಮುದ್ದೆಗಳನ್ನೆಲ್ಲ ಆಚಾರ್ಯರು ಒಂದು ಗಂಟೆಗಿಂತ ಹೆಚ್ಚು ಅವಧಿವರೆಗೆ ಅಸ್ಖಲಿತವಾಗಿ ವಿವರಿಸಿದರು. ಅನಂತರ ಕಾಂಗ್ರೆಸ್ ಭಕ್ತರ ನಿಧನದ ಬಗ್ಗೆ ದುಃಖ ಪ್ರದರ್ಶಿಸುವ ಗೊತ್ತುವಳಿ ಸ್ವೀಕೃತವಾಯಿತು.

### ಪಂಡಿತ ಜವಾಹರಲಾಲರು

ಅನಂತರ ಪಂಡಿತ ಜವಾಹರಲಾಲ ನೆಹರುರವರು ಮೊದಲನೆಯ ಗೊತ್ತುವಳಿಯನ್ನು ಮಂಡಿಸಿದರು. ಕಳೆದ ೬೦ ವರುಷಗಳಲ್ಲಿ ನಡೆದ ಘಟನೆಗಳ ಸಿಂಹಾವಲೋಕನ ಮಾಡಿ ಅಂತರಿಕ ಕಲಹಗಳನ್ನೆಲ್ಲ ನಿಲ್ಲಿಸಿ ಐಕ್ಯವನ್ನು ಪ್ರಸ್ಥಾಪಿಸಬೇಕೆಂದು ಈ ಗೊತ್ತುವಳಿಯಲ್ಲಿ ಪ್ರತಿಪಾದಿಸಲಾಗಿದೆ. ಪಂಡಿತ ಜವಾಹರಲಾಲರು ಈ ಗೊತ್ತನ್ನು ಮಂಡಿಸುವಾಗ, ಈ ಆಶಯದ ಭಾಷಣ ಮಾಡಿದರು. "೧೯೪೬ನೇ ವರ್ಷ ಬಿರುಗಾಳಿಯ ಕಷ್ಟನಷ್ಟಗಳ ಮತ್ತು ತ್ಯಾಗದ ವರ್ಷ. ಇದನ್ನೆಲ್ಲ ಹತ್ತಿಕ್ಕಲು ಅಧಿಕಾರಿಗಳು—ಬ್ರಿಟಿಶ್ ಮತ್ತು ಹಿಂದೀ ಅಧಿಕಾರಿಗಳು-ವಹಿಸಿದ ಪಾತ್ರವನ್ನು ನಾನೆಂದೂ ಮರೆಯಲಾರೆ. ಈ ಅಧಿಕಾರಿಗಳನ್ನು ಛಲಿಸಬೇಡಿರೆಂದು ವೈಸರಾಯರು ನನಗೊಮ್ಮೆ ಹೇಳಿದರು. ಅವರನ್ನು ಛಲಿಸುವ ಇಚ್ಛೆ ನನಗೇನೂ ಇಲ್ಲ. ಆದರೆ ೧೯೪೨ರಲ್ಲಿ ಅತ್ಯಾಚಾರವನ್ನೆಸಗಿದ ಅಧಿಕಾರಿಗಳನ್ನು ಅವರು ಬ್ರಿಟಿಶ್‌ರಿರಲಿ, ಹಿಂದೀಯರಿರಲಿ ಹಾಗೆಯೇ ಬಿಡಲಾರೆವು. ಅಧಿಕಾರಿಗಳನ್ನು ನಾವು ಅವಲಂಬಿಸಬೇಕಾಗುವದೆಂಬುದು ನಮಗೆ ಗೊತ್ತಿದೆ ಆದರೆ ಅವರನ್ನು ಸನ್ಮಾರ್ಗಕ್ಕೆ ಹಚ್ಚುವದು ಅವರು ಅಡ್ಡಹಾದಿಗೆ ಬಳಸದಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯವಾಗಿದೆಂದು ಜವಾಹರರು ಸ್ಪಷ್ಟಪಡಿಸಿದರು. ವಿಶೇಷತಃ ಬ್ರಿಟಿಶ ಅಧಿಕಾರಿಗಳು ಮುಸ್ಲಿಂ ಲೀಗಿನವರ ಸಹಾನುಭೂತಿ ಪಡೆಯಲು ಹೆಣಗುತಿರುವರು. ಮುಸ್ಲಿಂ ಲೀಗಿನ ಸದಸ್ಯರಂತೆಯೆ ಅವರು ವರ್ತಿಸುತಿರುವರು. ಮುಸ್ಲಿಂ ಲೀಗು ಮತ್ತು ಬ್ರಿಟಿಶ ಅಧಿಕಾರಿಗಳು ಇನ್ನೂ ಮಧ್ಯಯುಗದಲ್ಲಿಯೆ ಇರುವರು ಈ ನಾಲ್ಕೈದು ತಿಂಗಳ ಅನುಭವ ನೋಡಿದರೆ ಬ್ರಿಟಿಶ್ ಅಧಿಕಾರಿಗಳ ಮನಪರಿವರ್ತನವಾಗಿಲ್ಲೆಂದು ಹೇಳಬೇಕಾಗುವದು. ಈ ಪರಿಸ್ಥಿತಿ ಎಷ್ಟು ದಿನ ನಡೆಯುತ್ತದೆಂಬುದನ್ನು ನೋಡಬೇಕಾಗಿದೆ. ಬ್ರಿಟಿಶ ಅಧಿಕಾರಿಗಳು ಹಿಂದುಸ್ತಾನದಿಂದ ಹೊರಡಲು ಸಿದ್ಧತೆ ತೋರಿಸುತಿರುವಾಗಲೆ ಇಲ್ಲಿಯ ಕಾರ್ಯಕ್ರಮಗಳಿಗೆ ಅಡ್ಡಿಮಾಡುವ ಧೋರಣ ಸ್ವೀಕರಿಸುವರೆಂದು ಮುಂತಾಗಿ ಹೇಳಿದರು. ಪಂಡಿತ ಪಂತರು ಸ್ವಲ್ಪೇ ಆದರೂ ಒಳ್ಳೆ ಆವೇಶಯುಕ್ತ ಭಾಷಣ ಮಾಡಿ ಈ ಗೊತ್ತುವಳಿಗೆ ಬೆಂಬಲ ಕೊಟ್ಟರು. ಸರ್ವಾನುಮತದಿಂದ ಗೊತ್ತುಗಳಿ ಸ್ವೀಕೃತವಾಯಿತು.



ಆಚಾರ್ಯ ಕೃಪಲಾನಿಯವರು



ಸರದಾರ ವಲ್ಲಭಭಾಯಿ ಪಟೇಲ ಮತ್ತು ಪಂಡಿತ ಜವಾಹರಲಾಲರು

### ಸರದಾರ ಪಟೇಲರು

ಅನಂತ ಸರದಾರ ವಲ್ಲಭಭಾಯಿ ಪಟೇಲರು ಎರಡನೆ ಗೊತ್ತುವಳಿಯನ್ನು ಮಂಡಿಸುತ್ತ ಒಳ್ಳೆ ಆವೇಶಯುಕ್ತ ಭಾಷಣಮಾಡಿ ಮುಸ್ಲಿಂ ಲೀಗಿಗೆ ಎಚ್ಚರಿಕೆಯನ್ನು ಕೊಟ್ಟರು. ನಡುಗಾಲ ಸರಕಾರದ ಬಗ್ಗೆ ಕಾಂಗ್ರೆಸ ಕಾರ್ಯಸಮಿತಿ ಮತ್ತು ಅಖಿಲಭಾರತ ಕಾಂಗ್ರೆಸ್ ಸಮಿತಿ ಕಾಲಕಾಲಕ್ಕೆ ಮಾಡಿದ ಗೊತ್ತುವಳಿಗೆಳಿಗೆ ಬೆಂಬಲ ಕೊಡುವದೆ ಸರದಾರರ ಗೊತ್ತುವಳಿಯ ಆಶಯವಾಗಿತ್ತು. ಕಾಯಿದೆಯನ್ನು ಬದಲಿಸುವದು ಕಠಿನವಾಗಿದ್ದರೂ ಈ ನಡುಗಾಲ ಸರಕಾರಕ್ಕೆ ವಸಾಹತ ಸ್ವರಾಜ್ಯದ ಸ್ಥಾನಮಾನಗಳಿವೆ. ಇಲ್ಲಿ ಸಂಯುಕ್ತ ಹೊಣೆಗಾರಿಕೆಯಿದೆ. ಇದು ಮಂತ್ರಿಮಂಡಲವೇ ಆಗಿದೆಂದು ಮುಂತಾದ ಆಶ್ವಾಸನ ಪಡೆದು ಈ ನಡುಗಾಲ ಸರಕಾರ ರಚಿಸಿದಾಗಿದೆಂದು ಸರದಾರರು ಸ್ಪಷ್ಟಪಡಿಸಿದರು. ಮುಸ್ಲಿಂ ಲೀಗಿನ ಬಗ್ಗೆ ಹೇಳುತ್ತ ಸರದಾರರು ವೈಸರಾಯರು ಜವಾಹರಲಾಲರಿಗೆ ಬರೆದ ಪತ್ರದ ಉಲ್ಲೇಖ ಮಾಡಿದರು. ಕಾಂಗ್ರೆಸನ್ನು ನಡುಗಾಲ ಸರಕಾರದಿಂದ ಹೊರದೂಡಬೇಕೆಂದು ಇಷ್ಟೆಲ್ಲ ಸಾಹಸ ನಡೆದಿದೆ ಈ ಬಲೆಯಲ್ಲಿ ನಾವು ಬೀಳುವದಿಲ್ಲ- ನಡುಗಾಲ ಸರಕಾರದಲ್ಲಿ ಉಳಿದೇ ತೀರುವ ನಿರ್ಧಾರದಿಂದ ನಾವು ಅದರಲ್ಲಿ ಸೇರಿರುವೆವು. ಅದಕ್ಕೆ ರಾಜೀನಾಮೆ ಕೊಡುವ ಮನೀಷೆ ನಮಗಿಲ್ಲ. ನಮ್ಮನ್ನು ಕಿತ್ತೊಗೆದಾದರೂ ಹೊರಗೆ ಹಾಕಬೇಕು ಇಲ್ಲವೆ ಅಲ್ಲಿರುವದು ನಿರರ್ಥಕವೆಂದು ನಮ್ಮ ಮನವರಿಕೆ ಮಾಡಿಕೊಟ್ಟು ಹೊರದೂಡಬೇಕೆಂದು ಅವರು ಹೇಳಿದರು. ಪಂಡಿತ ನೆಹರುರವರನ್ನು ಉಪಾಧ್ಯಕ್ಷರೆಂದು ಕರೆಯುವುದಕ್ಕೆ ಲೀಗಿನವರು ಆಕ್ಷೇಪಿಸುತ್ತಾರೆ. ಮಂತ್ರಿಮಂಡಳದಲ್ಲಿ ಉಪಾಧ್ಯಕ್ಷರಿಗೆ ವಿಶಿಷ್ಟ ಸ್ಥಾನಮಾನಗಳೇನೂ ಇಲ್ಲೆಂದು ಲೀಗ ಧುರೀಣರ ಹೇಳಿಕೆ. ಹೀಗಾಗಿದ್ದರೆ ಒಮ್ಮೆ ಹಿಂದು ಒಮ್ಮೆ ಮುಸಲ್ಮಾನ ಹೀಗೆ ಸರತಿಯ ಮೇಲೆ ಉಪಾಧ್ಯಕ್ಷರನ್ನಾರಿಸಬೇಕೆಂದು ಲೀಗು ಏಕೆ ಆಗ್ರಹ ತೊಡಬೇಕು? ಜಗತ್ತಿನಲ್ಲೆಲ್ಲ ನೆಹರು ಮಂತ್ರಿಮಂಡಳ ಇಲ್ಲವೆ ಕಾಂಗ್ರೆಸ್ ಮಂತ್ರಿಮಂಡಳವೆಂದು ಪ್ರಸಿದ್ಧಿ ಪಡೆದಿದೆಂಬುದು ಸ್ಪಷ್ಟವಿದೆ. ಪಾಕಿಸ್ತಾನ ಶಕ್ತಿಯಿಂದ ಇಲ್ಲವೆ ರಕ್ತಪಾತದಿಂದ ದೊರೆಯದು. ಈ ಸಾಧನದಿಂದ ಪಾಕಿಸ್ತಾನಗಳಿಸಬಯಸಿದರೆ ಹಿಂದುಸ್ತಾನದಲ್ಲಿ ಶಾಂತಿ ಉಳಿಯಲಾರದು. ಮುಂಬಯಿ ಗೊತ್ತುವಳಿಯನ್ನು ರದ್ದುಪಡಿಸುವದು ಮುಸ್ಲಿಂಲೀಗಿನ ಕರ್ತವ್ಯ. ಅದು ಶಕ್ಯವಿರದಿದ್ದರೆ ನಡುಗಾಲ ಸರಕಾರದಲ್ಲಿ ಮುಸ್ಲಿಂ ಲೀಗಿಗೆ ಸ್ಥಾನವೇ ಉಳಿಯಲಾರದೆಂದು. ಸರದಾರರು ಸ್ಪಷ್ಟಪಡಿಸಿದರು. ಶ್ರೀ ಕೇಸಕರರು ಬೆಂಬಲ ಕೊಟ್ಟರು. ಶ್ರೀಮತಿ ಅರುಣಾ ಅಸಫಅಲ್ಲಿ, ಹಕೀಮ ಅಬ್ದುಲ್ ಜಲಾಲ, ನಾದವಿಯವರು ಗೊತ್ತುವಳಿಯನ್ನು ವಿರೋಧಿಸಿದರು. ಸರದಾರರು ಸಮರ್ಪಕ ಉತ್ತರ ಕೊಟ್ಟ ಬಳಿಕ ಗೊತ್ತುವಳಿ ಸ್ವೀಕೃತವಾಯಿತು.

### ಸರ್ವತಂತ್ರ ಸ್ವತಂತ್ರ ಹಿಂದುಸ್ತಾನ

ಅನಂತರ ಆಚಾರ್ಯ ನರೇಂದ್ರದೇವರು ಹಿಂದುಸ್ತಾನ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿದೆಂಬಾಶಯದ ಗೊತ್ತುವಳಿಯನ್ನು ಮಂಡಿಸಿದರು, ಈ ಗೊತ್ತುವಳಿ ಸ್ವೀಕೃತವಾದ ಬಳಿಕ ಅಧಿವೇಶನ ಮರುದಿನಕ್ಕೆ ಮುಂದರಿಯಿತು.

### ಸಂಸ್ಥಾನ ಸಮಸ್ಯೆ

೨೪ನೇ ತಾರೀಕು ಮಧ್ಯಾಹ್ನ ಅಧಿವೇಶನ ಮತ್ತೆ ಮುಂದೆ ಸಾಗಿತು. ಡಾ. ಪಟ್ಟಾಭಿ ಸೀತಾರಾಮಯ್ಯನವರು ಸಂಸ್ಥಾನ ವಿಷಯಕ ಗೊತ್ತುವಳಿಯನ್ನು ಮಂಡಿಸಿದರು. ಬಳವಂತರಾಯ ಮೇಥಾ ಇವರು ಈ ಗೊತ್ತುವಳಿಗೆ ಬೆಂಬಲಕೊಡುತ್ತ ರಾಜಕೀಯಖಾತೆಯ ಧೋರಣವನ್ನು ಕಟುವಾಗಿ ಟೀಕಿಸಿದರು. ಸೂಚನೆ ಸ್ವೀಕೃತವಾಯಿತು.

### ಕಾಂಗ್ರೆಸ್ ಘೋಷಣ ಪತ್ರ


ಅನಂತರ ಜಯಪ್ರಕಾಶ ನಾರಾಯಣರು ಕಾಂಗ್ರೆಸ್ ಘೋಷಣೆ ವಿಷಯಕ ಗೊತ್ತುವಳಿ ಮಂಡಿಸಿದರು. ಕಾಂಗ್ರೆಸ್ ಚುನಾವಣೆ ಘೋಷಣೆಯಲ್ಲಿಯ ಸೂಚನೆಗಳ ಜೊತೆಗೆ ಆಗಸ್ಟ ಗೊತ್ತುವಳಿಯ ತತ್ವಗಳನ್ನು ಸೇರಿಸಬೇಕೆಂದು ಮಥುರಾಪ್ರಸಾದ ಮಿಶ್ರರು ತಿದ್ದುಪಡಿ ಸೂಚಿಸಿದರು. ಈ ತಿದ್ದುಪಡಿಯೊಂದಿಗೆ ಗೊತ್ತುವಳಿ ಸ್ವೀಕೃತವಾಯಿತು.

### ಜಾತೀಯ ಪರಿಸ್ಥಿತಿ

ಅನಂತರ ಡಾ. ರಾಜೇಂದ್ರ ಪ್ರಸಾದರ ಜಾತೀಯ ಪರಿಸ್ಥಿತಿಯ ಸಂಬಂಧದ ಗೊತ್ತುವಳಿ ಸ್ವೀಕೃತವಾಯಿತು. ಕಾಂಗ್ರೆಸ್ ಘಟನಾ ತಿದ್ದುಪಡಿಯ ಮಸೂದೆ ಅಧ್ಯಕ್ಷರಿಂದ ಮಂಡಿಸಲ್ಪಟ್ಟು ಸ್ವೀಕೃತವಾಯಿತು. ದಕ್ಷಿಣ ಅಫ್ರಿಕಾ, ಪೂರ್ವ ಅಫ್ರಿಕಾ ಮತ್ತು ಇಂಡೋನೇಶಿಯದ ಸಂಬಂಧದಲ್ಲಿ ಕಾಂಗ್ರೆಸ್ಸು, ಮೂರು ಗೊತ್ತುವಳಿಗಳನ್ನು ಸ್ವೀಕರಿಸಿತು. ಅಧ್ಯಕ್ಷರೆ ಇವನ್ನು ಮಂಡಿಸಿದ್ದರು. ಅಧ್ಯಕ್ಷರ ಸಮಾರೋಪ ಭಾಷಣದ ನಂತರ ಕಾಂಗ್ರೆಸ ಅಧಿವೇಶನ ಮುಕ್ತಾಯವಾಯಿತು.



ಕಾಂಗ್ರೆಸ್ ಮಂಟಪದಲ್ಲಿ ಪಂಡಿತ ಪಂತ, ಪಂಡಿತ ಜವಾಹರಲಾಲ ನೆಹರು, ಖಾನ ಅಬ್ದುಲ್ ಗಫರ ಖಾನರು.



ಮಿರತ ಪ್ಯಾರೆಲಾಲ ಶರ್ಮಾನಗರ ಮಂಟಪ ಮತ್ತು ಮುಖಂಡರ ಶಿಬಿರದ ಮಹಾದ್ವಾರ.

ಫೋಟೋ— ನಮ್ಮ ಸ್ವಂತ ಫೋಟೋಗ್ರಾಫರ ಶ್ರೀ ನಾರಾಯಣರಾವ ಕುಲಕರ್ಣಿ ವಿಜಾಪುರ.





## ಸೈನ್ಯದ ಲೆಕ್ಕ

ಪ್ರಬಲ ರಾಷ್ಟ್ರಗಳೊಳಗಿನ ವೈಷಮ್ಯ ಇದೀಗ ಯುಕ್ತರಾಷ್ಟ್ರ ಸಂಘದ ರಾಜಕೀಯ ಸಮಿತಿಯಲ್ಲಿ ಮೊಲಟೋವರ ಒಂದು ಗೊತ್ತುವಳಿಯ ಸ್ವರೂಪದಲ್ಲಿ ಮೈದೋರಿದೆ. ಯುಕ್ತರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ಪ್ರತಿಯೊಂದೂ (೧) ಅಶತ್ರು ರಾಷ್ಟ್ರಗಳಲ್ಲಿಟ್ಟ ಸೈನ್ಯಗಳ ಲೆಕ್ಕವೆಷ್ಟು (೨) ಹಿಂದಿನ ಶತ್ರು ರಾಷ್ಟ್ರಗಳ ಪ್ರದೇಶದಲ್ಲಿ ಎಲ್ಲೆಲ್ಲಿ ಮಿತ್ರರಾಷ್ಟ್ರಗಳ ಸೈನ್ಯಗಳಿವೆ ಮತ್ತು (೩) ಮೇಲೆ ಹೇಳಿದ ಪ್ರದೇಶಗಳಲ್ಲಿ ಯುಕ್ತರಾಷ್ಟ್ರಸಂಘದ ಸದಸ್ಯರ ವಿಮಾನ ಮತ್ತು ನೌಕಾ ನಿಲ್ದಾಣಗಳೂ ರಕ್ಷಣ ದಲಗಳೂ ಎಲ್ಲೆಲ್ಲಿ ಇವೆ. ಇವುಗಳ ಮೊನ್ನೆ ನವಂಬರ ೧ನೇ ದಿನದ ಸ್ಥಿತಿಗತಿಯ ಲೆಕ್ಕವನ್ನು ಒಂದು ತಿಂಗಳೊಳಗಾಗಿ ಭದ್ರತಾ ಮಂಡಲಕ್ಕೆ ಒಪ್ಪಿಸಬೇಕೆಂಬುದೇ ರಶಿಯನ್ ವಿದೇಶಮಂತ್ರಿಯ ಗೊತ್ತುವಳಿ. ರಶಿಯನ್ನರ ಈ ಗೊತ್ತುವಳಿಯ ಉದ್ದೇಶ ನಿಚ್ಚಳವಾಗಿಯೆ ಇದೆ. ಪೂರ್ವ ಯುರೋಪಿನಲ್ಲಿ ತನ್ನ ಸೈನ್ಯಬಲದಿಂದ ಕಬ್ಬಿಣದ ಪಡದೆಯನ್ನು ಹಾಕಿ ಜನರನ್ನು ತನ್ನ ರಾಜಕೀಯ ತತ್ವಗಳಿಗೆ ಬಲಾತ್ಕಾರದಿಂದ ಪರಿವರ್ತಿಸುತಿದೆಯೆಂಬ ಆರೋಪವನ್ನು ಸೋವಿಯಟ್ ಸರಕಾರದ ಮೇಲೆ ಹೊರಿಸುತ್ತಿರುವವರ ಹುಳುಕನ್ನು ಬಯಲಿಗೆಳೆಯಲೆಂದೇ ಈ ಗೊತ್ತುವಳಿ ಹೊರಟಿದೆ. ಹಾಗಾದರೆ ಆಂಗ್ಲೋ ಅಮೇರಿಕನ್ನರು, ಮುಖ್ಯವಾಗಿ ಇಂಗ್ಲಂಡು ಇದರಿಂದ ಬಹಳ ಅಪವಾದಕ್ಕೆ ಗುರಿಯಾಗುವದು. ಗ್ರೀಸ, ಪಾಲಿಸ್ತಾನ, ಇಜಿಪ್ತ, ಹಿಂದುಸ್ತಾನ, ಇರಾಕ, ಬ್ರಹ್ಮದೇಶ, ಮಲಯಾ, —ಏಕೆ ತನ್ನ ಮಾತೃಭೂಮಿಯಲ್ಲದ ಅಸಂಖ್ಯ ಸ್ಥಳಗಳಲ್ಲಿ ಸಾಮ್ರಾಜ್ಯ ರಕ್ಷಣೆ ಹಾಗು ಹಿತಸಂಬಂಧ ರಕ್ಷಣೆಗಾಗಿ ಆದಿಟ್ಟರುವ ಸೇನೆಯ ಲೆಕ್ಕವನ್ನು ನೋಡಿ ಯಾರ ಕಣ್ಣೂ ಹಾರದಿರದು. ಉದ್ದೇಶವೇನೇ ಇರಲಿ, ಇದೊಂದು ಅತಿ ಯೋಗ್ಯ ಸೂಚನೆಯೆಂದು ಯಾರಿಗೂ ಅನಿಸೀತು. ಯುಗೋಸ್ಲಾವಿಯಾ, ಹಿಂದುಸ್ತಾನ, ಫ್ರಾನ್ಸ, ಪೋಲಂಡ, ಚೀನ, ಝೆಕೊಸ್ಲೊವಾಕಿಯಾಗಳ ಬೆಂಬಲ ಇದಕ್ಕೆ ದೊರೆಯಿತು. ಆದುದರಿಂದ ಬ್ರಿಟಿಶರ ಮನಸು ಹಳುಹುಳು ಎನಿಸಿ ಅವರು ಸೋವಿಯಟ್ ಪ್ರತಿನಿಧಿಗಳ ಕೈಕಾಲು ನಡುಗಿಸಲು ಗೊತ್ತುವಳಿಗೊಂದು ಉಪಸೂಚನೆ ತಂದರು. ಹಿಂದಿನ ಶತ್ರು ರಾಷ್ಟ್ರಗಳಲ್ಲಿಟ್ಟಿರುವ ಪ್ರತಿಯೊಬ್ಬರ ಸೈನ್ಯ ಮೊದಲಾದವುಗಳ ಹಾಗು ಸ್ವದೇಶದಲ್ಲಿರುವ ಆಯಾ ರಾಷ್ಟ್ರದ ಸೈನ್ಯದ ಲೆಕ್ಕವನ್ನೂ ಒಪ್ಪಿಸಬೇಕು- ಎಂದು ಮಾತ್ರವಲ್ಲ, ಲೆಕ್ಕವನ್ನು ಪರಿಶೀಲಿಸಿ ತಾಳೆ ನೋಡಲು ಅವಶ್ಯ ಉಪಾಯಗಳನ್ನೂ ಕೈಕೊಳ್ಳಬೇಕೆಂದು. ಇದರಿಂದ ಸೋವಿಯಟ್ ಸೈನ್ಯದ ಗುಟ್ಟೆಲ್ಲ ರಟ್ಟಾದೀತೆಂದು ಅವರ ಆಶೆ. ಶತ್ರು ರಾಷ್ಟ್ರಗಳಲ್ಲಿಟ್ಟ ಸೈನ್ಯದ ಲೆಕ್ಕವನ್ನೊಪ್ಪಿಸುವದಕ್ಕೆ ಮೊಲೊಟೋವರು ಸಮ್ಮತಿ ಕೊಟ್ಟಿದ್ದಾರೆ. ಇನ್ನುಳಿದ ಬ್ರಿಟಿಶ ಉಪಸೂಚನೆಗಳ ಬಗ್ಗೆ ಚರ್ಚೆ ನಡೆದಿದೆ.

## ದ. ಆಫ್ರಿಕಾ ಪ್ರಶ್ನೆ

ರಾಜಕೀಯ ಮತ್ತು ಕಾಯಿದೆ ಸಮಿತಿಯ ಮುಂದೆ ಚರ್ಚಿಸಲ್ಪಡುತಿರುವ ದ. ಆಫ್ರಿಕಾ ಹಿಂದೀಯರ ಬಗ್ಗೆ ಹಿಂದುಸ್ತಾನದ ಪ್ರತಿನಿಧಿಗಳು ಮಂಡಿಸಿದ ಗೊತ್ತುವಳಿಯನ್ನು ಯಾವ ನೀತಿ ನ್ಯಾಯದ ತಳಹದಿಯಿಂದಲೂ ವಿರೋಧಿಸಲಾರದ ಜ. ಸ್ಮಟ್ಸರು ಹಿಂದುಸ್ತಾನವನ್ನು ತುಚ್ಛೀಕರಿಸುವ ಮತ್ತು ಯುಕ್ತರಾಷ್ಟ್ರಗಳಿಗೆ ಬೆದರಿಕೆ ಹಾಕುವ ಹಾದಿ ಹಿಡಿದರು. ಹಿಂದುಸ್ತಾನದ ಜಾತೀಯ ಕಲಹ, ಹಿಂದುಗಳಲ್ಲಿಯ ಜಾತಿಭೇದ, ಅಸ್ಪೃಶ್ಯತೆ ಮುಂತಾದ ಹಲವು ಕಲಂಕಗಳನ್ನು ಎತ್ತಿಹಿಡಿದು ಹಿಂದುಸ್ತಾನದಿಂದ ದ. ಆಫ್ರಿಕೆಗೆ ಬಂದವರಲ್ಲಿ ಹೆಚ್ಚಿನ ಅಂಶ ಅಸ್ಪೃಶ್ಯರೆಂದೂ ಅವರಿಗೆ ಹಿಂದುಸ್ತಾನದಲ್ಲಿರುವದಕ್ಕಿಂತ ಹೆಚ್ಚು ಸೌಕರ್ಯ ದ. ಆಫ್ರಿಕೆಯಲ್ಲಿದೆಯೆಂದೂ ಅವರು ವಾದಿಸಿದರು. ಇದಲ್ಲದೆ ಇದು ದಕ್ಷಿಣ ಆಫ್ರಿಕೆಯ ಅಂತರಿಕ ಪ್ರಶ್ನೆ; ಇದರಲ್ಲಿ ಕೈಹಾಕಲು ಯುಕ್ತರಾಷ್ಟ್ರಗಳಿಗೆ ಅಧಿಕಾರವಿಲ್ಲ— ಒಂದು ವೇಳೆ ಯುಕ್ತರಾಷ್ಟ್ರ ಸಂಘ ಇದರಲ್ಲಿ ಕೈಹಾಕಿದರೆ ಅದರಿಂದ ಭಯಂಕರ ಪರಿಣಾಮವಾಗುವದು. ಪ್ರತಿಯೊಂದು ರಾಷ್ಟ್ರದ ಒಳ ಆಡಳಿತದಲ್ಲಿ ಕೈಯಿಕ್ಕುವ ಪ್ರಸಂಗ ಬಂದು ಒಂದೊಂದೇ ರಾಷ್ಟ್ರ ಸಂಘದಿಂದ ಹೊರಬಿದ್ದು ಹೋಗಿ ಸಂಘ, ದುರ್ಬಲವಾದೀತು. ಇತ್ಯಾದಿಯಾಗಿ ಬೆದರಿಕೆ ಹಾಕಿದರು. ಹಿಂದುಸ್ತಾನದ ಪ್ರತಿನಿಧಿಗಳಲ್ಲೊಬ್ಬರಾದ ಸರ್ ರೇಝಾಅಲಿಯವರು ಸ್ಮಟ್ಸರ ಛಿದ್ರಾನ್ವೇಷಣಕ್ಕೆ ಕೊಟ್ಟ ಉತ್ತರದಲ್ಲಿ ದಕ್ಷಿಣ ಆಫ್ರಿಕೆಯ ಹಿಂದೀಯರಿಗೆ ಹಿಂದುಸ್ತಾನದಲ್ಲಿರುವ ಹರಿಜನರಿಗಿರುವ ಹಕ್ಕುಬಾಧ್ಯತೆಗಳನ್ನು ಕೊಟ್ಟರೆ ಸಾಕೆಂದು ಅಹ್ವಾನವಿತ್ತಿದ್ದಾರೆ. ಶ್ರೀಮತಿ ವಿಜಯಲಕ್ಷ್ಮಿಯವರು ಸ್ಮಟ್ಸರ ವಾದವನ್ನು ಒಂದೊಂದಾಗಿ ಖಂಡಿಸಿದರು. ದ. ಆಫ್ರಿಕೆಯ ಪ್ರತಿನಿಧಿ ನಿಕೊಲಸರು ಸಿಟ್ಟಿಗೆದ್ದು, ಹಿಂದೀ ಪ್ರತಿನಿಧಿಗಳ ವಾದ ಅವರಷ್ಟೇ ಮಿಥ್ಯೆಯೆಂದು ಅಸಭ್ಯವಾಗಿ ನುಡಿದರು. ಇದರಿಂದ ಶ್ರೀಮತಿ ಪಂಡಿತರಿಗೂ ನಿಕೊಲಸರಿಗೂ ಚಕಮಕಿಯಾಗಿ ಅಧ್ಯಕ್ಷರು ನಿಕೊಲಸರನ್ನು ಗದರಿಸಬೇಕಾಯಿತು.

ಈ ಪ್ರಶ್ನೆಯನ್ನು ಅಂತರ್‌ರಾಷ್ಟ್ರೀಯ ನ್ಯಾಯಾಲಯದ ಮುಂದೆ ತರಬೇಕೆಂದು ಕೆನಡಾದ ಸೂಚನೆ ಬಂದಿದೆ.

ಸ್ಮಟ್ಸರನ್ನು ದಾರಿಗೆ ತರಲು ಹಿಂದೀಯರು ನೈಋತ್ಯ ಆಫ್ರಿಕೆಯನ್ನು ಯುಕ್ತರಾಷ್ಟ್ರ ಸಂಘದ ನೇರವಾದ ಆಳಿಕೆಗೆ ತರಬೇಕೆಂದು ಒಂದು ಗೊತ್ತುವಳಿಯನ್ನು ತಂದಿದ್ದಾರೆ.

ಇತ್ತ ಯುಕ್ತರಾಷ್ಟ್ರಸಂಘದಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ಸ್ಮಟ್ಸರು ಹಿಂದೀ ವಿರೋಧಿ ಕಾಯದೆಗಳನ್ನು ಹಿಂತೆಗೆಯದಿದ್ದರೆ ಹಿಂದೀಯರು ಸಾಮೂಹಿಕವಾಗಿ ಸತ್ಯಾಗ್ರಹ ಹೂಡುವರೆಂದು ದ. ಆ. ಹಿಂದೀ ಸತ್ಯಾಗ್ರಹ ಮಂಡಲದವರು ಎಚ್ಚರಿಕೆ ಕೊಟ್ಟಿದ್ದಾರೆ.

## ಅಮೇರಿಕೆಯಲ್ಲಿ ಕಲ್ಲಿದ್ದಲಿ ಸಂಪು

ವೈಯಕ್ತಿಕ ಸಾಹಸದ ಸ್ವರ್ಣಭೂಮಿಯಾದ ಅಮೇರಿಕೆಯಲ್ಲಿ ದೊಡ್ಡ ಕಲ್ಲದ್ದಲಿ ಬಿಕ್ಕಟ್ಟೊಂದುತ್ಪನ್ನವಾಗಿದೆ. ಒಂದು ಲಕ್ಷ ಜನ ಕಲ್ಲಿದ್ದಲಿ ಗಣಿ ಕೂಲಿಕಾರರು ಒಂದು ವಾರದಿಂದ ಸಂಪು ಹೂಡಿದ್ದಾರೆ. ಇದರಿಂದ ರಾಷ್ಟ್ರದ ಕಲ್ಲಿದ್ದಲಿ ಉತ್ಪನ್ನದಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಕಡಿಮೆಯಾಗಿಬಿಟ್ಟಿದೆ. ಸರಕಾರ ಕಲ್ಲದ್ದಲಿ ಗಣಗಳನ್ನು ಕೈವಶ ಮಾಡಿಕೊಂಡದ್ದರಿಂದ ಹೊಸ ಕೆಲಸದ ಶರ್ತುಗಳ ಒಪ್ಪಂದವಾಗಬೇಕೆಂದು ಕೂಲಿಕಾರರ ಮುಂದಾಳಾದ ಪ್ರಸಿದ್ಧ ಜಾನ್ ಲುಯಿಸನು ಹಟ ಹಿಡಿದನು. ಕೂಲಿಕಾರರ ಹೆಚ್ಚಿನ ಕೂಲಿಯ ಬೇಡಿಕೆಯಿಂದ ಒದಗಿದ ಬಿಕ್ಕಟ್ಟಿನ ಕಾರಣದಿಂದಲೇ ಸರಕಾರ ಗಣಿಗಳನ್ನು ವಶಪಡಿಸಿಕೊಂಡಿತು. ಅಲ್ಲದೆ ಸರಕಾರ ವಶಪಡಿಸಿಕೊಂಡ ಗಣಗಳ ಕೂಲಿಕಾರರ ಹಳೆಯ ಒಪ್ಪಂದವೇ ಉಳಿಯುವದೆಂದೂ ಈ ಒಪ್ಪಂದ ಪೂರೈಸದಿರುವದ ಅಪರಾಧವೆಂದೂ ಸಾರಿತು. ಆದರೆ ಲುಯಿಸನು ಈ ಕಾಯದೆಯನ್ನು ಲೆಕ್ಕಿಸದೆ ಸಂಪಿನ ಅಜ್ಞೆ ಹೊರಡಿಸಿದ್ದಾನೆ. ಇದರಿಂದ ಒದಗಿದ ಪರಿಸ್ಥಿತಿಯಲ್ಲಿ ಟ್ರೂಮನ್ನರ ಸರಕಾರ ಕೂಲಿಕಾರರೊಡನೆ ನಿರ್ದಾಕ್ಷಿಣ್ಯವಾಗಿ ನಡೆದುಕೊಳ್ಳುವದೆಂದು ತಿಳಿಯುತ್ತದೆ. ಕೂಲಿಕಾರರನ್ನು ಹಣ್ಣುಮಾಡಿ ಸಂಪು ಮುರಿಯುವದಲ್ಲದೆ ಲುಯಿಸನಿಗೆ ಕಾಯಿದೆ ಮುರಿದ ಸಲುವಾಗಿ ಶಿಕ್ಷೆ ಕೊಡಿಸಲು ಅವನ ಮೇಲೆ ಕಟ್ಲೆ ಹೂಡಲಾಗಿದೆ. ಆದರೆ ಲುಯಿಸನು ದಿಟ್ಟ; ಜಗ್ಗುವವನಲ್ಲ.

## ಆಂಗ್ಲೋ--ಇಜಿಪ್ಶನ್ ಒಪ್ಪಂದ

ಅಂಗ್ಲೊ-ಇಜಿಪ್ಶನ್ ಒಪ್ಪಂದದ ಪುನರ್ವಿಮರ್ಶೆಗಾಗಿ ಇಜಿಪ್ಶನ್ ಮುಖ್ಯ ಮಂತ್ರಿ ಸಿದ್ದಿಕಿ ಪಾಶಾ ಮತ್ತು ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರೊಳಗೆ ಒಂದು ಒಪ್ಪಂದವಾಗಿದೆ. ಆದರೆ ಸೂಚನೆಗಳಿಗೆ ಈ ಒಪ್ಪಂದದ ಪುನರ್ವಿಮರ್ಶೆಗಾಗಿ ನೇಮಿಸಲ್ಪಟ್ಟ ಇಜಿಪ್ಶನ್ ಪ್ರತಿನಿಧಿ ಮಂಡಲದ ವಿರೋಧವೊದಗಿತು. ಈ ಮೊದಲೇ ಈ ಭಾಗದಲ್ಲಿ ಹೇಳಿರುವಂತೆ ನೆರೆಹೊರೆಯಲ್ಲಿ ಗಂಡಾಂತರ ಪ್ರಸಂಗವುಂಟಾದಾಗ ಉಭಯತರು ಕೂಡಿ ನಡೆಯಬೇಕು; ಸುಡಾನು ಇಜಿಪ್ತದಿಂದ ಪ್ರತ್ಯೇಕವಾಗಿರಬೇಕು ಎಂಬೀ ಮುದ್ದೆಗಳಿಂದ ಇಜಿಪ್ತದ ಸ್ವಾತಂತ್ರ್ಯಕ್ಕೂ ನೀಲ ಕಣಿವೆಯ ಐಕ್ಯಕ್ಕೂ ಭಂಗ ಬರುವದರಿಂದಲೇ ಪ್ರತಿನಿಧಿ ಮಂಡಲದ ಬಹುಸಂಖ್ಯಾಕರು ಅದನ್ನು ವಿರೋಧಿಸಿದರು. ಆದ್ದರಿಂದ ಆ ಮಂಡಲವನ್ನೇ ವಿಸರ್ಜಿಸಲಾಗಿದೆ. ಸಿದ್ದಿಕಿ ಪಾಶಾರು ಇಜಿಪ್ಶನ್ ಪಾರ್ಲಮೆಂಟಿನ ಗುಪ್ತ ಅಧಿವೇಶನದಲ್ಲಿ ಈ ಹೊಸ ಒಪ್ಪಂದದ ಕರಾರುಗಳನ್ನಿಟ್ಟದ್ದು ಅದು ಅಲ್ಲಿ ಅಂಗೀಕೃತವಾಗುವ ಸಂಭವವಿದೆ. ಆದರೆ ಸಿನೇಟಿನಲ್ಲಿ ಅದು ಪಾಸಾಗುವ ಆಶೆ ಕಡಿಮೆ. ಇದೀ ದೇಶದಲ್ಲಿ ಸಿದ್ದಿಕಿ ಬೆವಿನ್ ಕರಾರುಗಳಿಗೆ ಪ್ರಚಂಡ ವಿರೋಧವಿದ್ದು ಕಾಯಿರೋದಲ್ಲಿ ಭಯಂಕರ ಗಲಭೆಗಳಾದವು. ಸಿದ್ದಿಕಿ ಪಾಶಾರು ಇಜಿಪ್ತದ ಸ್ವಾತಂತ್ರ್ಯವನ್ನೇ ಮಾರಿದರೆಂದು ವಫ್ದ ಪಕ್ಷದವರೂ ತೀವ್ರಗಾಮಿಗಳೂ ಕೂಗಿಕೊಳ್ಳುತಿದ್ದಾರೆ.

## ಚೀನದಲ್ಲಿ ಅಂತರ್ಯುದ್ಧ

ಚೀನದ ರಾಷ್ಟ್ರೀಯ ಸಭೆಯನ್ನು ಚಿಯಾಂಗರು ನವೆಂಬರ ೧೫ಕ್ಕೆ ಸೇರಿಸಿದ್ದರೂ ಕಮ್ಯುನಿಸ್ಟರೂ ಪ್ರಜಾತಂತ್ರ ಪಕ್ಷದವರೂ ಅದನ್ನು ಬಹಿಷ್ಕರಿಸಿದ್ದರಿಂದ ಚಿಯಾಂಗರ ಪ್ರತಿಗಾಮಿ ಬೆಂಬಲಿಗರ ಸಂತೆಯಾಯಿತದು. ಒಪ್ಪಂದ ಎಲ್ಲ ಆಸೆಗಳನ್ನು ಬಿಟ್ಟುಕೊಟ್ಟು ಕಮ್ಯುನಿಸ್ಟ್ ಪ್ರತಿನಿಧಿಗಳು ಯೆನಾನಕ್ಕೆ ತೆರಳಿದರು. ಚಿಯಾಂಗರೀಗ ಕಮ್ಯುನಿಸ್ಟರನ್ನು ಪೂರ್ತಿ ನಿರ್ನಾಮ ಮಾಡಲು ಯೆನನಾದ ಮೇಲೆಯೇ ಚತುರ್ಮುಖ ದಂಡಯಾತ್ರೆಯನ್ನು ಕೈಕೊಳ್ಳುವ ಸಿದ್ಧತೆ ನಡೆಸಿದ್ದಾರೆ. ಇತ್ತ ಕಮ್ಯುನಿಸ್ಟರು ಶಾನ್ಸಿಪ್ರಾಂತದಲ್ಲೂ ಮಂಚೂರಿಯನಾದಲ್ಲಿಯೂ ದೊಡ್ಡ ದಾಳಿ ಪ್ರಾರಂಭಿಸಿದ್ದಾರೆ. ಮುಕ್ಡೆನ್ ಬಂದರವನ್ನು ಸೋವಿಯೆಟ್ ಸೈನ್ಯ ಬಿಟ್ಟು ಹೋದೊಡನೆ ಕಮ್ಯುನಿಸ್ಟರೇ ಆಕ್ರಮಿಸಿದ್ದಾರೆ.

---

ಜಾತೀಯ ದುರ್ಘಟನೆಗಳ ಸಂಬಂಧದಲ್ಲಿ ಕಲಕತ್ತೆಯ ೧೯೪ ಭಾಗಗಳ ಮೇಲೆ ೨೨ ಸಾವಿರ ರೂಪಾಯಿ ಸಾಮೂಹಿಕ ದಂಡ ಹೇರಲಾಗಿದೆ. ಒಟ್ಟು ಈ ವರೆಗಿನ ಸಾಮೂಹಿಕ ದಂಡ ೫೨೦೦೦ ರೂಪಾಯಿ ಆಗಿದೆ.

ಕಲಕತ್ತೆಯ ಅಜಾದ ಪತ್ರಿಕೆಯ ಮುದ್ರಕರು ಹಾಗು ಪ್ರಕಾಶಕರಿಂದ ಬೇರೆ ಬೇರೆ ವರ್ಗದವರಲ್ಲಿ ದ್ವೇಷ ಹುಟ್ಟಿಸುವ ಆಕ್ಷೇಪಾರ್ಹ ಲೇಖ ಪ್ರಕಟಿಸಿದರೆಂದು ೨೦೦೦ ರೂಪಾಯಿ ಜಾಮೀನ ಬೇಡಿದ್ದಾರೆ.

# 'ಸ್ವಾತಂತ್ರ್ಯದ ಸದುಪಯೋಗ ಮಾಡಿಕೊಳ್ಳೋಣ'

[ ಮೊದಲನೆಯ ಪುಟದಿಂದ ಮುಂದರಿದುದು ]

ಎಷ್ಟೋ ಸಮಸ್ಯೆಗಳುಂಟಾಗುತ್ತಿದ್ದಿಲ್ಲ. ಅದುದರಿಂದ ಅರಾಷ್ಟ್ರೀಯ ಮತ್ತು ಅಪ್ರಜಾಸತ್ತಾತ್ಮಕ ಒಪ್ಪಂದಗಳನ್ನು ಒಲವು- ಒತ್ತಾಯದಿಂದ ಮಾಡಿಕೊಳ್ಳದಂತೆ ನಮ್ಮ ನಾಡಹಿರಿಯರು ಸ್ವತಃ ದಕ್ಷರಾಗುಳಿಯುವದಲ್ಲದೆ ತಮ್ಮ ಅಜ್ಞಗಾವಲಿನಿಂದ ರಾಷ್ಟ್ರವನ್ನೂ ಕಾಪಾಡುವರೆಂದು ಆಶಿಸುತ್ತೇನೆ.

ನಾನು ಇತ್ತೀಚೆಗೆ ಪೂರ್ವ ಬಂಗಾಲ ಮತ್ತು ಬಿಹಾರದಲ್ಲಿ ಸಂಚರಿಸಿದ್ದೇನೆ. ಅಲ್ಲಿ ನಡೆದ ಸಂಗತಿಗಳನ್ನು ಮುಚ್ಚಿಡುವದು ಅಪರಾಧವೇ ಸರಿ; ಸಾರ್ವಜನಿಕ ಕರ್ತವ್ಯಪರಾಙ್ಮುಖತೆಯನ್ನೂ ತೋರಿಸಿದಂತಾಗುವದು. ಬಂಗಾಲದಲ್ಲಿ ಹತ್ಯಾಕಾಂಡ ನಡೆಸಿದವರು ಒತ್ತಾಯದಿಂದ ಪಾಕಿಸ್ತಾನ ಸ್ಥಾಪಿಸಬಹುದೆಂದು ಜನತೆಯ ಮನಗಾಣಿಸಲು ಪ್ರಯತ್ನಿಸಿರುತ್ತಾರೆ. ಬಲಾತ್ಕಾರದಿಂದ ಜಾತೀಯ ಸಮಸ್ಯೆ ಬಿಡಿಸಬಹುದೆಂದು ಒಮ್ಮೆ ಜನರ ತಲೆಯಲ್ಲಿ ಹೊಕ್ಕರೆ, ಅದು ಹಿಂದುಸ್ತಾನಕ್ಕಲ್ಲದೆ ಸಂಬಂಧಿಸಿದ ಜಾತಿಗಳಿಗೂ ಅನಿಷ್ಟವಾಗಿ ಪರಿಣಮಿಸದಿರದು.

ಬಲಾತ್ಕಾರದಿಂದ ಜಾತಿ ಜಾತಿಗಳಲ್ಲಿನ ಭೇದ ನಿವಾರಿಸುವದು ಶಕ್ಯವಿಲ್ಲೆಂದು ನಾನು ಎಚ್ಚರಿಸುವದಾದರೆ, ಬಿಹಾರದಲ್ಲಿ ನಡೆದಂತೆ ಸೇಡಿನಿಂದಲೂ ಕಾರ್ಯಸಾಧಿಸುವಲ್ಲೆಂದು ಎಚ್ಚರಿಸಬೇಕಾಗುವದು. ಎರಡು ತಪ್ಪುಗಳು ಒಂದನ್ನೊಂದು ನಾಶಮಾಡಲಾರವು. ಮೂಲ ದಾಳಿ ತಪ್ಪಿತಸ್ಥರ ಮೇಲಾದರೂ ಸೇಡು ನಿರಪರಾಧಿಗಳನ್ನು ಪೀಡಿಸದಿರದು. ಏನಾದರೂ ಇಂಥ ಗಲಭೆಗಳಲ್ಲಿ ಕಷ್ಟಕ್ಕೊಳಗಾಗುವವರು ಬಡವರು ಮತ್ತು ನಿಃಸಹಾಯರು. ಪ್ರಚೋದಕರು ಪಾರಾಗುತ್ತಾರೆ. ಇಂತು ಯಾದವೀ ಕಲಹದಲ್ಲಿ ಹಿಂಸೆಯನ್ನು ಅನಿರ್ಬಂಧವಾಗಿ ಉಪಯೋಗಿಸಿದರೆ, ಕೊನೆಗೆ ಆಟಂಬಾಂಬಿನಂಥ ಶಕ್ತಿಯುತ್ಪನ್ನವಾಗಿ ಹಿಂದು ಮುಸಲ್ಮಾನರಿಬ್ಬರನ್ನೂ ನಾಶಮಾಡುವದು.

## ಆಂತರಿಕ ಶಾಂತಿ

ಬಂಗಾಲದಲ್ಲಿ ಕೇಂದ್ರವು ಕೈಹಾಕದ್ದರಿಂದ ಪ್ರಾಂತಗಳು ಪೂರ್ಣಸ್ವತಂತ್ರವಾದಂತಾಗಿದ್ದವು. ಪಕ್ಕದಲ್ಲಿರುವ ಬಿಹಾರವು ಬಂಗಾಲ ಸರಕಾರಕ್ಕೆ ಪತ್ರ ಬರೆದು ಕಲಕತ್ತೆಯಲ್ಲಿಯ ಬಿಹಾರಿಗಳ ಮೇಲಾದ ಅತ್ಯಾಚಾರಗಳನ್ನು ಖಂಡಿಸಬೇಕಾಗಿತ್ತು. ಬಂಗಾಲ ಸರಕಾರದ ಪ್ರೋತ್ಸಾಹದಿಂದಲೆ ಎಂಬಂತೆ ಕಾಣುವ ಪ್ರಚೋದನೆಯಿಂದ ಅಲ್ಲಿ ಹಿಂದುಗಳ ಮೇಲಾಗುವ ಅತ್ಯಾಚಾರಗಳ ಪ್ರತಿಕ್ರಿಯೆ ಬಿಹಾರದಲ್ಲಾಗಬಹುದೆಂದೂ ಸರಕಾರವು ಎಷ್ಟೇ ಸದುದ್ದೇಶದಿಂದ ಪ್ರಯತ್ನಿಸಿದರೂ ಜನತೆ ಕೇಳದಂತಾಗಬಹುದೆಂದೂ ಎಚ್ಚರಿಸಬೇಕಾಗಿತ್ತು. ಬಿಹಾರದ ಹಿಂದುಗಳು ಸಹ ಚಳವಳಿ ಹೂಡಿ ತಮ್ಮ ಸರಕಾರವು ಬಂಗಾಲಕ್ಕೆ ಪತ್ರ ಬರೆಯುವಂತೆ ಒಪ್ಪಿಸಬೇಕಾಗಿತ್ತು. ಈ ಮಾರ್ಗ ಸರಿಯಾದುದು. ಆಂತರಿಕ ಶಾಂತಿಯ ಹೊಣೆ ಹೊರಲು ಕೇಂದ್ರವು ತಪ್ಪಿದರೆ ಪ್ರಾಂತಗಳು ಈ ವಿಷಯವನ್ನು ಕೈಕೊಳ್ಳಬೇಕು. ಹಾಗಾದಲ್ಲಿ ಜನರು ರೊಚ್ಚಿಗೆದ್ದು ಸೇಡು ತೀರಿಸಿಕೊಳ್ಳುವದನ್ನು ತಪ್ಪಿಸಿ ಪ್ರಾಂತ ಪ್ರಾಂತಗಳಲ್ಲಿ ನೆಮ್ಮದಿಯನ್ನುಂಟು ಮಾಡಬಹುದು. ಈಗ ತಲೆದೋರಿದ ಹಿಂಸೆ ಮತ್ತು ಸೇಡು ಹಾಗೆಯೇ ಮುಂದೆ ಸಾಗಿದರೆ, ಮುಸ್ಲಿಂ ಲೀಗು ಮನಸು ಮಾಡಿದರೂ ತನ್ನ ಅನುಯಾಯಿಗಳನ್ನು ಅಂಕೆಯಲ್ಲಿಟ್ಟುಕೊಳ್ಳಲಾರದು. ಕಾಂಗ್ರೆಸು ಪ್ರಜರ ಪ್ರಾಣರಕ್ಷಣೆಗೆ ಇದುವರೆಗೆ ಶಕ್ತಿಮೀರಿ ಪ್ರಯತ್ನಿಸಿದ್ದರೂ ಕೊನೆಯಲ್ಲಿ ಅದರ ಹಿಡಿತವೂ ಸಡಿಲಾಗಬಹುದು. ಆಗ ಹಿಂದುಸ್ತಾನವು ಎರಡು ಸಶಸ್ತ್ರ ಶಿಬಿರಗಳಾಗಿ ವಿಭಾಗಿಸಲ್ಪಡುವದು. ಮತ್ತು ಬ್ರಿಟಿಶರು ತಮ್ಮ ಬಂದೂಕುಗಳ ಸಹಾಯದಿಂದ ಉಭಯತರನ್ನೂ ಹತ್ತಿಕ್ಕುವರು. ಇದರ ಪರಿಣಾಮವೇನಾಗಬಹುದು ಗೊತ್ತೆ? ಹಿಂದೀ ಸ್ವಾತಂತ್ರ್ಯವು ಅನಿಯಮಿತ ಮುಂದೆ ಬೀಳುವದು.

## ಕೂಡಿ ಬಾಳಲು ಕಲಿಯಬೇಕು

ನಾವು ಸ್ವಾತಂತ್ರ್ಯಕ್ಕೆ ಅರ್ಹರಾಗಬೇಕಾದರೆ ಕೂಡಿ ಬಾಳಲು ಕಲಿಯಬೇಕು. ಉಭಯತರು ಪರಸ್ಪರರ ಭಾವನೆಗಳನ್ನು ಮನ್ನಿಸಬೇಕು. ಹಿಂದು ಮತ್ತು ಮುಸಲ್ಮಾನ ಅಲ್ಪಸಂಖ್ಯಾಕರು ದೇಶದಲ್ಲೆಲ್ಲ ಹಬ್ಬಿರುವರು. ಬಹುಸಂಖ್ಯಾಕರು ಬುದ್ಧಿ ಕಳೆದುಕೊಂಡು ಅಲ್ಪಸಂಖ್ಯಾಕರ ಮೇಲೆ ಶಸ್ತ್ರ ಎತ್ತಿದರೆ ಪೋಲೀಸ ಮತ್ತು ಸೈನ್ಯ ಕಾವಲನ್ನು ಎಷ್ಟು ಒದಗಿಸಿದರೂ ಅವರನ್ನು ರಕ್ಷಿಸುವದು ಸಾಧ್ಯವಿಲ್ಲ. ಮುಸ್ಲಿಂ ಬಹುಸಂಖ್ಯಾಕ ಪ್ರಾಂತದಲ್ಲಿ ಹಿಂದುಗಳ ಮತ್ತು ಹಿಂದು ಬಹುಸಂಖ್ಯಾಕ ಪ್ರಾಂತಗಳಲ್ಲಿ ಮುಸಲ್ಮಾನರ ವಿತ್ತ ಜೀವಿತಗಳು ಸುರಕ್ಷಿತವಾಗುಳಿಯದಿದ್ದರೆ ಈ ದೇಶದಲ್ಲಿ ನಾಗರಿಕ ಜೀವನವೇ ಕಠಿನವಾಗುವದು. ಜಿನ್ನಾರ ಪಾಕಿಸ್ತಾನವು ಸಹ ಈ ಸಮಸ್ಯೆಯನ್ನು ಬಿಡಿಸಲಾರದು. ಯಾಕಂದರೆ ಅಲ್ಲಿ ಅಲ್ಪಸಂಖ್ಯಾಕರಿಗೆ ರಕ್ಷಣೆಯ ಅಭಯವಿಲ್ಲ. ಮುಸಲ್ಮಾನರು ತಮಗೊಪ್ಪಿದಂತೆ ಧರ್ಮಪ್ರಧಾನವಾದ ರಾಜ್ಯ ಸ್ಥಾಪಿಸಿಕೊಳ್ಳಬಹುದು. ಆದರೆ ಅದನ್ನು ಹಿಂದುಗಳ ತಲೆಯ ಮೇಲೆ ಬಲಾತ್ಕಾರದಿಂದ ಹೇರಲಾರರು. ಮುಸಲ್ಮಾನರು ಕೇಳುವ ಸ್ವಯಂನಿರ್ಣಯದ ಹಕ್ಕು ಉಳಿದ ಅಲ್ಪಸಂಖ್ಯಾಕರಿಗೂ ಬೇಕು. ಅವರಿಗೂ ಅಷ್ಟು ಹಕ್ಕಿದೆ. ಮುಸ್ಲಿಂಲೀಗು ಜಾತಿ, ತತ್ವದನ್ವಯ ಪಾಕಿಸ್ತಾನ ಕೇಳುತ್ತಿದ್ದರೆ, ಅದರ ಪರಿಣಾಮ ಪ್ರತಿಕ್ರಿಯೆಗಳನ್ನೂ ಎದುರಿಸಬೇಕು. "ಹಬ್ಬ ಹಸನಾಗಬೇಕು, ಹಣ ವೆಚ್ಚವಾಗಬಾರದು" ಎಂದು ಬಯಸುವದು ಶುದ್ಧ ತಪ್ಪು.

## ಸಂಸ್ಥಾನ ಸಮಸ್ಯೆ

ಹಿಂದು-ಮುಸ್ಲಿಂ ಸಮಸ್ಯೆಯಿಂದ ನಮಗೆ ತಲೆನೋವಾಗಿದ್ದರೆ ಸಂಸ್ಥಾನ ಸಮಸ್ಯೆ ಅದಕ್ಕೂ ಹೆಚ್ಚು ಭೀಕರವಾಗಿದೆ. ಹಿಂದುಸ್ತಾನದ ದೃಷ್ಟಿಯಿಂದ ಇಡಿಯಾಗಿ ವಿಚಾರಿಸಿದರೆ ಇದು ಅಷ್ಟೇನೂ ಕಠಿನವಲ್ಲ. ಹಿಂದುಸ್ತಾನವು ಅರ್ಧ ಸ್ವತಂತ್ರವಾಗಿ ಇನ್ನರ್ಧ ದಾಸ್ಯದಲ್ಲುಳಿಯಲಾರದೆಂದೂ ಸ್ವತಂತ್ರ ಹಿಂದುಸ್ತಾನದಲ್ಲಿ ತಮಗೆ ಸ್ಥಾನವಿಲ್ಲ. ಹಾಗೂ ಮೊದಲಿನಂತೆ ನಿರಂಕುಶ ಅಧಿಕಾರ ನಡೆಸುವದು ಶಕ್ಯವಿಲ್ಲೆಂದೂ ನರೇಂದ್ರರು ಅರಿಯಬೇಕು. ಸಂಸ್ಥಾನ ಪ್ರಜರು ಇಮ್ಮಡಿ ದಾಸ್ಯವನ್ನನುಭವಿಸಬೇಕಾಗಿದೆ. ಅವರ ತಲೆಯ ಮೇಲೆ ಮೆಣಸು ಅರೆಯುವ ನರೇಂದ್ರರು ಸ್ವತಃ ಗುಲಾಮರಿರುವರು. ಆದರೆ ಈ ಗುಲಾಮರಿಗೆ ಅದರಲ್ಲಿಯೇ ಸುಖವಿರುವದರಿಂದ ಅದನ್ನು ಗಮನಿಸುವದಿಲ್ಲ.

ಅಸ್ಪೃಶ್ಯತೆಯ ಕಲಂಕವಾದರೂ ನಮ್ಮ ರಾಷ್ಟ್ರದ ಸ್ವಾತಂತ್ರ್ಯ, ಪ್ರಗತಿಗಳಿಗೆ ಕಡಿಮೆ ಗಂಡಾಂತರದ್ದಾಗಿಲ್ಲ. ಈ ಅನ್ಯಾಯದ ವಿರುದ್ಧ ಸುಧಾರಕರು ಹಿಂದೂ ಜಾತಿಯನ್ನು ಎಚ್ಚರಗೊಳಿಸಲು ಸಾಕಷ್ಟು ಚಳವಳಿ ಮಾಡಿದ್ದಾರೆ. ಇನ್ನು ಅದರ ನಿವಾರಣೆಗೆ ಕಾಯಿದೆಗಳನ್ನು ಮಾಡಬೇಕು. ಪ್ರಾಂತಿಕ ಸರಕಾರಗಳು ಅಸ್ಪೃಶ್ಯತೆಯ ಬಹಿರಂಗ ಪ್ರದರ್ಶನವನ್ನು ದಂಡನಾರ್ಹವಾಗಿ ಮಾಡಬೇಕು.

## ಘಟನಾ ಸಮಿತಿ

ಸ್ವತಂತ್ರ ಹಿಂದುಸ್ತಾನದ ರಾಜ್ಯಘಟನೆಯನ್ನು ರಚಿಸಲು ನಾವು ಬೇಗನೆಸೇರುವವರಿದ್ದೇವೆ. ಅದು ಪ್ರಜಾಸತ್ತಾತ್ಮಕ ಸಂಯುಕ್ತ ರಾಜ್ಯಘಟನೆಯಾಗುವದು. ಆರ್ಥಿಕ ಕ್ಷೇತ್ರದಲ್ಲಿಯಂತೆ ರಾಜಕೀಯದಲ್ಲಿಯೂ ಅಧಿಕಾರವನ್ನು ಕೇಂದ್ರೀಕರಿಸಿದರೆ ಸ್ವಾತಂತ್ರ್ಯಕ್ಕೆ ಅದು ಮುಳುವಾಗದಿರದು. ಅದುದರಿಂದ ಸ್ವತಂತ್ರ ಹಿಂದುಸ್ತಾನದಲ್ಲಿ ಪ್ರಾಂತಗಳಿಗೆ ಶಕ್ಯವಿದ್ದಷ್ಟು ಸ್ವಾತಂತ್ರ್ಯ ಕೊಡಲಾಗುವದು. ಆದರೆ ನಮ್ಮ ಕೆಲವು ಪ್ರಾಂತಗಳು ಯುರೋಪದಲ್ಲಿಯ ಕೆಲವು ರಾಷ್ಟ್ರಗಳಷ್ಟು ವಿಸ್ತಾರವಿರುತ್ತವೆ. ಪ್ರಾಂತಗಳಲ್ಲಿ ಸಹ ಹದಮೀರಿ ಅಧಿಕಾರ ಕೇಂದ್ರೀಕೃತವಾಗದಂತೆ ನಾವು ನೋಡಿಕೊಳ್ಳಬೇಕು.

## ಕಾಂಗ್ರೆಸಿಗರ ಕರ್ತವ್ಯ

ಪರಕೀಯ ಸಾಮ್ರಾಜ್ಯದ ವಿರುದ್ಧ ನಾವು ಹೂಡಿದ ಸ್ವಾತಂತ್ರ್ಯ ಹೋರಾಟದಲ್ಲಿ ಕೆಲವು ಹೊಸ ಶಸ್ತ್ರಗಳನ್ನು ಶೋಧಿಸಿದ್ದೇವೆ; ಮತ್ತು ಉಪಯೋಗಿಸಿದ್ದೇವೆ. ಮುಂದೆ ನಮಗೆ ಸಹ ಅವು ಉಪಯೋಗಬೀಳಬಹುದು. ಸ್ವಾತಂತ್ರ್ಯ ಧ್ಯೇಯವನ್ನು ಮುಂದರಿಸಲು ಅವುಗಳನ್ನು ಸಿದ್ಧಗೊಳಿಸಿದ್ದೇವೆ. ಈಗ ಮಂತ್ರಿಗಳನ್ನು ಮತ್ತು ಶಾಸನ ಸಭೆಗಳನ್ನು ಬದಲಿಸುವ ಅಧಿಕಾರ ನಮ್ಮ ಕೈಯಲ್ಲಿರುವದರಿಂದ ನಮ್ಮ ಹಳೇ ಶಸ್ತ್ರದ ಉಪಯೋಗ ಅವಶ್ಯವಾಗಲಿಕ್ಕಿಲ್ಲ. ನಮ್ಮ ಮಂತ್ರಿಗಳನ್ನು ಟೀಕಿಸುವಾಗ ನಾವು ಎಚ್ಚರದಿಂದಿರಬೇಕು. ಮಂತ್ರಿಗಳು ಅನೇಕ ಸಮಸ್ಯೆಗಳನ್ನು ಬಿಡಿಸಬೇಕಾಗಿರುವದರಿಂದ ಅವರಿಗೆ ನಮ್ಮ ಸಹಾನುಭೂತಿ ಅವಶ್ಯವಿದೆ. ಅನೇಕ ಕಾರ್ಯಗಳನ್ನು ಅನತಿಕಾಲದಲ್ಲಿಯೇ ಪೂರೈಸಬೇಕಾಗಿದೆ. ಸ್ವಾತಂತ್ರ್ಯದ ಬಗ್ಗೆ ಅತ್ಯಾತುರರಾಗಿರುವದರಿಂದ ಅದು ದೊರೆತೊಡನೆ ನಮ್ಮ ಅಡಚಣಿಗಳೆಲ್ಲ ದೂರಾಗುವವೆಂದು ಅನೇಕರು ನಂಬಿದ್ದಾರೆ. ಈ ಆತುರತೆಯಲ್ಲಿ ಮಂತ್ರಿಗಳಿಗಿರುವ ಕಷ್ಟನಷ್ಟಗಳನ್ನು ಕೂಡ ನಾವು ಮರೆಯಬಹುದು. ಹೀಗೆ ನಾವು ಅವಸರ ಮಾಡಿದರೆ ರಾಷ್ಟ್ರೀಯ ಸರಕಾರ ಕೆಲಸ ಮತ್ತಷ್ಟು ಕಠಿನವಾಗುತ್ತದೆ. ಅದುದರಿಂದ ನಮ್ಮ ಟೀಕೆಗಳು ವಿಧಾಯಕವಾಗಿರಬೇಕು; ವಿಘಾತಕವಾಗಿರಬಾರದು. ಇದುವರೆಗೆ ಆಡಳಿತದಲ್ಲಿ ತುಂಬಿರುವ ಕೊಳೆಯನ್ನು ಮೊದಲು ತೊಳೆದು ಸ್ವಚ್ಛಮಾಡುವದಕ್ಕೆ ಅವರಿಗೆ ಸಾಕಷ್ಟು ಅವಕಾಶ ಕೊಡಬೇಕು.

ಅದರಂತೆ ಅಧಿಕಾರದಲ್ಲಿದ್ದ ಕಾಂಗ್ರೆಸ ಪ್ರತಿನಿಧಿಗಳು ಸಹ ತಾವು ಪ್ರಜರ ಸೇವಕರು, ಒಡೆಯರಲ್ಲವೆಂಬುದನ್ನು ಮರೆಯತಕ್ಕದ್ದಲ್ಲ. ಅಧಿಕಾರಕ್ಕೇರಲು ಸಹಾಯ ಮಾಡಿದ ಏಣಿಯನ್ನು ಅವರು ಒದ್ದು ಹಾರಿಸಲಾರರು. ಅವರು ಕಾಂಗ್ರೆಸ್ಸಿಗೆ ತನ್ಮೂಲಕ ಜನತೆಗೆ ನಿಷ್ಠರಾಗುಳಿಯಲಿ. ಅವರಿಂದಲೇ ಇವರಿಗೆ ಶಕ್ತಿ. ಅದುದರಿಂದ ಜನತಾ ಜನಾರ್ದನನ ಸೇವೆ ಇವರ ಪ್ರಥಮ ಕರ್ತವ್ಯ. ಈ ಕರ್ತವ್ಯ ಪಾಲನೆಯಲ್ಲಿ ಅಧಿಕಾರಿಗಳು ಇವರನ್ನು ಸುಂಗಂಡೆಯೂ ದಕ್ಷರಾಗಬೇಕು.

## ವಿದೇಶ ಧೋರಣೆ

ಅಂತರರಾಷ್ಟ್ರೀಯ ಶಸ್ತ್ರಸನ್ಯಾಸ, ಶಾಂತಿ, ಸಹಕಾರ ಮತ್ತು ಮುಚ್ಚುಮರೆಯಿಲ್ಲದ ರಾಜಕಾರಣ—ಇವು ಕಾಂಗ್ರೆಸ್ಸಿನ ಗುರಿ. ಸೌಹಾರ್ದ ಮತ್ತು ಸಹಕಾರದ ತಳಹದಿಯ ಮೇಲೆ ನವನುನ್ನಂತರ ಸ್ಥಾಪಿಸುವದು ಒಳ್ಳೆಯದೆಂದು ನಮ್ಮ ಮತ. ಸ್ವತಂತ್ರ ಮತ್ತು ಸಮಾನಾಧಿಕಾರವುಳ್ಳ ರಾಷ್ಟ್ರಗಳ ಅಂತರರಾಷ್ಟ್ರೀಯ ಸಂಘಟನೆಯಿಂದ ಈ ಉದ್ದೇಶವನ್ನು ಸಾಧಿಸಬಹುದೆಂದು ನಮ್ಮ ವಿಶ್ವಾಸ. ಸಾಮ್ರಾಜ್ಯಲಾಲಸೆ ಇರುವವರೆಗೆ ನಾವು ಬೇಕಾದಂಥ ಬಲಿಷ್ಠ ಸಂಸ್ಥೆಯನ್ನು ಸ್ಥಾಪಿಸಿದರೂ ಅದು ಸ್ವಾರ್ಥಸಾಧನೆಯಲ್ಲಿ ಮುರಿದು ಮುಗ್ಗರಿಸುವದರಲ್ಲಿ ಸಂಶಯವಿಲ್ಲ. ಅಂಥ ಸಂಸ್ಥೆ ನ್ಯಾಯದ ಭದ್ರ ತಳಹದಿಯ ಮೇಲೆ ನಿಲ್ಲದೆ ಪಾಶವೀ ಶಕ್ತಿಯಿಂದ ಮಾತ್ರ ಬಾಳಬಲ್ಲದು. ಪ್ರಮುಖತ್ರಯ, ಪ್ರಮುಖ ಚತುಷ್ಟಯ, ಅಥವಾ ಪ್ರಮುಖ ಪಂಚಕವು ಯಾವಾಗಲೂ ಅದರ ಆಧಾರಸ್ತಂಭರಾಗುವರು. ಆಶ್ರಿತ ಮತ್ತು ಅಸ್ವತಂತ್ರ ರಾಷ್ಟ್ರಗಳಿರುವವರೆಗೆ ಕಚ್ಚಾಟ, ಕದನ ತಪ್ಪಿದ್ದಲ್ಲ. ರಾಷ್ಟ್ರಗಳು ಹೃದಯಪರಿವರ್ತನೆ ಮಾಡಿಕೊಂಡು ತಮ್ಮ ಆಶೆ, ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆಗಳನ್ನು ಪರಿಮಿತಿಗೊಳಿಸಿಕೊಳ್ಳಬೇಕು. ಇದು ಸಾಧ್ಯವಾಗಿ ರಾಷ್ಟ್ರ ರಾಷ್ಟ್ರಗಳು ಪರಸ್ಪರ ವ್ಯವಹಾರದಲ್ಲಿ ನ್ಯಾಯಪ್ರಿಯ ಧೋರಣವನ್ನನುಸರಿಸಿದರೆ, ಮುಂದಿನ ಕೆಲಸ ಹಗುರಾಗುವದು. ರಾಷ್ಟ್ರಗಳು ಚಿಕ್ಕವಿರಲಿ, ದೊಡ್ಡವಿರಲಿ ಅಥವಾ ಅಂತರರಾಷ್ಟ್ರೀಯ ಆದಿಷ್ಟ ವಸಾಹತುಗಳಿರಲಿ, ಅವುಗಳಿಗೆಲ್ಲ ಸಮಾನ ಮತಾಧಿಕಾರವಿದ್ದಂಥ ಅಂತರರಾಷ್ಟ್ರೀಯ ಸಂಘ ಅವಶ್ಯವೆಂದು ಹಿಂದುಸ್ತಾನದ ಅಭಿಪ್ರಾಯವಿದೆ. ಆಂತರಿಕ ರಾಜಕಾರಣದಲ್ಲಿಯಂತೆ ಅಂತರರಾಷ್ಟ್ರೀಯದಲ್ಲಿ ಸಹ ಹಿಂದುಸ್ತಾನವು ವ್ಯಕ್ತಿಯ ಇಲ್ಲವೆ ರಾಷ್ಟ್ರಗಳ ಸರ್ವಾಧಿಕಾರಿತ್ವವನ್ನು ವಿರೋಧಿಸುವದು.

## ಪರಾಜಿತ ರಾಷ್ಟ್ರಗಳನ್ನು ವಿರೋಧಿಸಬೇಡಿರಿ

ಬುದ್ಧಿ ಕಲಿಸಲು ಪರಾಜಿತ ರಾಷ್ಟ್ರಗಳನ್ನು ವಿಚ್ಛೇದಿಸುವ ಧೋರಣೆಯನ್ನು ಕಾಂಗ್ರೆಸು ವಿರೋಧಿಸುತ್ತದೆ. ಅವು ಪುನಃ ತಮ್ಮ ಕಾಲ ಮೇಲೆ ನಿಂತು ಸಾಮಾನ್ಯ ರಾಜಕೀಯ ಮತ್ತು ಆರ್ಥಿಕ ಜೀವನ ಸಾಗಿಸುವಂತೆ ಸಹಾಯ ಮಾಡಬೇಕು. ಸ್ವತಂತ್ರ ಹಿಂದುಸ್ತಾನವು ನೆರೆಯರಾಷ್ಟ್ರಗಳೊಡನೆ ಈಗಿನಕ್ಕಿಂತ ಹೆಚ್ಚು ಸೌಹಾರ್ದ ಸಂಬಂಧವಿಟ್ಟುಕೊಳ್ಳುವದು. ಅಲ್ಲದೆ ತನ್ನದೇ ಆದ ವಿದೇಶ ಧೋರಣವನ್ನನುಸರಿಸುವದು. ಸಾಮ್ರಾಜ್ಯ ಮಹತ್ವಾಕಾಂಕ್ಷೆ ನಮಗಿಲ್ಲ. ನಮ್ಮ ಸ್ವಾತಂತ್ರ್ಯದ ಮೇಲೆಯೇ ನಮಗೆ ಲಕ್ಷ. ಇಲ್ಲಿ ಮತ್ತು ಹೊರನಾಡುಗಳಲ್ಲಿ ನಮ್ಮವರು ಸುಖದಿಂದಿದ್ದು ಆತ್ಮವಿಕಾಸ ಮಾಡಿಕೊಳ್ಳುವಂತಾದರೆ ಸಾಕು. ನಮಗೆ ಶತ್ರುಗಳಿಲ್ಲ. ಬ್ರಿಟನು ಈಗ ಪಶ್ಚಾತ್ತಾಪ ಪಟ್ಟು ತನ್ನ ಪ್ರಭುತ್ವವನ್ನು ಹಿಂತೆಗೆದುಕೊಂಡರೆ ಅದರ ಹಿಂದಿನ ತಪ್ಪುಗಳನ್ನು ಮರೆಯುವೆವು.

## ಪರರೊಡನೆ ಸೌಹಾರ್ದಸಂಬಂಧ

ಪರಕೀಯ ರಾಷ್ಟ್ರಗಳು ಪರರ ಸ್ವಾತಂತ್ರ್ಯದಲ್ಲಿ ಕೈಹಾಕದೆ ತಮ್ಮ ಮನಸಿಗೆ ಬಂದಂತೆ ತಮ್ಮ ರಾಜ್ಯಘಟನೆ ರಚಿಸಿಕೊಳ್ಳುವದಕ್ಕೆ ನಮ್ಮ ಒಪ್ಪಿಗೆ ಇದೆ. ರಶಿಯದ ಕಮ್ಯೂನಿಸ್ಟಪ್ರಯೋಗ, ಬ್ರಿಟನದ ಪ್ರಜಾಸತ್ತಾತ್ಮಕ ಸಾಮ್ಯವಾದದ ಚರೀಕ್ಷೆ ಮತ್ತು ಅಮೇರಿಕೆಯ ವ್ಯಕ್ತಿಸಾಹಸದ ಪರಿಣಾಮ ಇವುಗಳನ್ನು ನಾವು ನಿರೀಕ್ಷಿಸುವೆವು. ಇವಾವುಗಳನ್ನೂ ನಾವು ಅನುಕರಿಸದಿದ್ದರೂ ಪ್ರತಿಯೊಂದರಿಂದ ಪಾಠ ಕಲಿಯುವೆವು. ಸಮಾನತೆ ಮತ್ತು ಪರಸ್ಪರ ಹಕ್ಕುಗಳಿಗೆ ಮನ್ನಣೆಯ ತತ್ವದ ಮೇಲೆ ಈ ರಾಷ್ಟ್ರಗಳೊಡನೆ ಸೌಹಾರ್ದ ಸಂಬಂಧವನ್ನಿಟ್ಟುಕೊಳ್ಳುವೆವು.

ಹಿಂದುಸ್ತಾನವು ಸಕಲ ರಾಷ್ಟ್ರಗಳೊಡನೆ ಸ್ನೇಹ ಸಂಬಂಧವಿಟ್ಟುಕೊಳ್ಳುವದಾದರೂ ಏಶಿಯಾ ಮತ್ತು ಆಸ್ಟ್ರೇಲಿಯಗಳೊಡನೆ ನಮ್ಮ ಸಂಬಂಧ ಅತ್ಯಂತ ಗಾಢವಾಗುವದರಲ್ಲಿ ಸಂಶಯವಿಲ್ಲ. ಹಿಂದುಸ್ತಾನ ಹಾಗೂ ಚೀನ ಮತ್ತು ಜಪಾನಗಳ ನಡುವೆ ಸಾಂಸ್ಕೃತಿಕ ಸಂಬಂಧವಿದೆ. ಈಗಿನ ಸಾಮ್ರಾಜ್ಯದ ಬಿಸಿಲ್ಗುದುರೆಯಿಂದಿಳಿದು ಪ್ರಜಾಸತ್ತಾತ್ಮಕ ಹಾದಿಗೆ ಹತ್ತಿದ ಕೂಡಲೆ ಜಪಾನದ ಸ್ನೇಹ ಬೆಳಸುವೆವು. ಇಂಡೋನೇಶಿಯ ಮತ್ತು ಪೂರ್ವಾಂತ್ಯ ದ್ವೀಪಗಳೊಡನೆ ಸಹ ಹಿಂದುಸ್ತಾನವು ಸಾಂಸ್ಕೃತಿಕ ಸಂಬಂಧ ಸ್ಥಾಪಿಸಬೇಕಾಗುವದು. ಹಿಂದುಸ್ತಾನ ಮತ್ತು ಆಸ್ಟ್ರೇಲಿಯಗಳ, ಪರಸ್ಪರ ಬಳಕೆಯಿಂದ ಲಾಭ ಹೊಂದಬಹುದಲ್ಲದೆ ಹಾನಿಯಾಗಲಾರದು. ಮಧ್ಯ ಏಶಿಯಾ ಮತ್ತು ಮಧ್ಯಪೂರ್ವ ರಾಷ್ಟ್ರಗಳೊಡನೆಯೂ ನಮ್ಮ ಸಾಂಸ್ಕೃತಿಕ ಸಂಬಂಧವಿದ್ದು ಅದನ್ನು ಪುನಃ ವೃದ್ಧಿಗೊಳಿಸಬೇಕಾಗುವದು. ಸೋವಿಯಟ್ ರಶಿಯದೊಡನೆ ನಮ್ಮ ಸ್ನೇಹ ನಿಕಟವಾಗಬೇಕು. ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಈಗ ಪ್ರಾರಂಭವಾದ ಸ್ನೇಹವನ್ನೂ ಬೆಳಸಿಕೊಂಡು ಬರಬೇಕು.

## ಪರಕೀಯರು ನಮ್ಮ ರಾಷ್ಟ್ರದಲ್ಲಿ ಕೈಹಾಕತಕ್ಕದ್ದಲ್ಲ

ನಮ್ಮ ರಾಷ್ಟ್ರೀಯ ಸಾರ್ವಭೌಮತ್ವವು ಅತ್ಯಂತ ಪೂಜ್ಯವಸ್ತುವೆಂದು ನಾವು ಹೇಳಿಕೊಳ್ಳುವದಿಲ್ಲ. ಸಮತೆಯ ತತ್ವದ ಮೇಲೆ ಜಾಗತಿಕ ಶಾಂತಿ ಮತ್ತು ಸಹಕಾರ ಸ್ಥಾಪನೆಗೆ ಹಿಂದುಸ್ತಾನವು ತನ್ನ ಕೆಲವು ಹಕ್ಕುಗಳನ್ನು ಬಿಟ್ಟುಕೊಡುವದಾದರೂ ಪರರು ನಮ್ಮ ರಾಷ್ಟ್ರದಲ್ಲಿ ಕೈಹಾಕುವದನ್ನು ಎಂದೂ ಸಹಿಸದು. ಅದು ಬ್ರಿಟಿಶ್ ಸೈನ್ಯವೆ ಆಗಲಿ, ಪರಕೀಯ ಅಪಪ್ರಚಾರಕರೇ ಆಗಲಿ, ಅಥವಾ ಪೋರ್ತುಗೀಜ ಮತ್ತು ಫ್ರೆಂಚ ವಸಾಹತುಗಳೇ ಇರಲಿ, ನಮ್ಮ ರಾಷ್ಟ್ರದ, ನಮ್ಮ ಜನರ ಮೂಲಭೂತ ಸ್ವಾತಂತ್ರ್ಯವನ್ನು ಅವರು ಅಪಹರಿಸಲಾರರು. ಬ್ರಿಟಿಶರು ಹಿಂದುಸ್ತಾನದಿಂದ ಹೊರಟು ಹೋಗುವದಾದರೆ—ಹಾಗೆ ಅವರು ವಚನ ಕೊಟ್ಟಿರುತ್ತಾರೆ—ಗೋಮಾಂತಕವು ಸಾವಿರಾರು ಮೈಲುಗಳಾಚೆ ಇರುವ ಪೋರ್ತುಗಾಲದ ಅಂಗವೆನ್ನುವದು ಹಾಸ್ಯಾಸ್ಪದವೇ ಸರಿ.





# ಕರ್ಮವೀರ ಹರಿಜನ ಪುರವಣಿ

## ಪ್ರಥಮ ಪಾಠ

ನೌಖಾಲಿ ಜಿಲ್ಹಾ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಎನ್. ಸಿ. ಇನಾರ್ಸಿಯವರು ಡಿಬನ್‌ಬಾರಿ (ದತ್ತಪಾರಾ) ಯಲ್ಲಿ ಗಾಂಧೀಜಿಯವರ ಸಾಯಂಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತ ಅರ್ಥಪೂರ್ಣವಾದ ಮಾತನ್ನೊಂದು ಹೇಳಿದರು. ಭೂಕಂಪ, ನೆರೆಹಾವಳಿ ಇಲ್ಲವೆ ಬೇರೆ ಪಿಡುಗುಗಳಂಥ ನೈಸರ್ಗಿಕ ಅನಾಹುತಗಳಲ್ಲಿನ ಅನೇಕರಿಗೆ ಅವಶ್ಯವಿದ್ದಂತೆ ದೊಂಬಿಗಳ ನಂತರವೂ ಅನೇಕ ಜನರಿಗೆ ಆಶ್ರಯದ ಅವಶ್ಯಕತೆಯಿರುವುದಲ್ಲದೆ ಆಹಾರ, ಬಟ್ಟೆ, ವಸತಿ, ಪ್ರಥಮ ಚಿಕಿತ್ಸೆಯ ಸಹಾಯ ಮೊದಲಾದವುಗಳು ಅವಶ್ಯವಾಗಿವೆ. ಇವೆಲ್ಲಕ್ಕಿಂತ ಹೆಚ್ಚು ಮಹತ್ವದ್ದೆಂದರೆ ಧೈರ್ಯ. ಧೈರ್ಯ ಎಲ್ಲ ಸದ್ಗುಣಗಳಿಗೆ ತಳಹದಿಯಾಗಿರುವುದು. ಸದ್ಯದ ಪ್ರಸಂಗದಲ್ಲಿ ಗಾಂಧೀಜಿಯವರು ನೌಖಾಲಿಯನ್ನು ಸಂದರ್ಶಿಸಿದ್ದಕ್ಕಿಂತ ಹೆಚ್ಚು ಸಮಯೋಚಿತ ಸಂಗತಿ ಬೇರೊಂದಿರಲಿಲ್ಲವೆಂದರವರು. ಅನ್ನ ಮೊದಲಾದ ಬೇರೆ ಪರಿಹಾರ ವಸ್ತುಗಳಂತೆ ಧೈರ್ಯವನ್ನೇನು ಸೀದಾ ಪದಾರ್ಥವೆಂದು ಹಂಚುವದು ಶಕ್ಯವಿಲ್ಲ. ಹೃದಯಾಂತರಾಳದಲ್ಲಿಯೆ ಅದನ್ನು ಪ್ರತಿಷ್ಠಿತ ಮಾಡಬೇಕಾಗುತ್ತದೆ. ಗಾಂಧೀಜಿಯವರಿಗಿಂತ ಬೇರೆ ಯಾರು ಇದನ್ನು ಹೆಚ್ಚು ಚೆನ್ನಾಗಿ ಮಾಡಬಲ್ಲರು?

### ಒಂದೇ ಮಾರ್ಗ

ತಿಪ್ಪೆರಾ ಜಿಲ್ಹೆಯಲ್ಲಿ ಕಾಲಿಡುವ ಮೊದಲೆ ಗಾಂಧೀಜಿಯವರಿಗೆ ಅದರ ಅರಿವಿದ್ದಿತೆಂಬುದರ ವಿಚಾರ ಅವರಿಗಿರಲಿಕ್ಕಿಲ್ಲ. ಚಾಂದಪುರದಲ್ಲಿ ನವಂಬರ ೭ನೇ ದಿನಾಂಕ ಮುಂಜಾನೆ "ಕಿವಿ" ಉಪಹಾರ ಗಾಡಿಯಲ್ಲಿ ದಿವಂಗತ ಬಾಬೂ ಹರದಯಾಳ ನಾಗರ ಮಗ ಮತ್ತು ಬೇರೆ ಬೇರೆ ಪರಿಹಾರ ಸಂಸ್ಥೆಗಳ ಪ್ರತಿನಿಧಿಗಳಾದ ೩೦—೪೫ ಜನ ಕಾರ್ಯಕರ್ತರು ಅವರನ್ನು ಭೆಟ್ಟಿಯಾದಾಗ ಪ್ರಥಮ ಪಾಠವನ್ನು ಹೇಳಿಕೊಡಲಾಯಿತು. ಯಾವನೊಬ್ಬ ಮನುಷ್ಯನನ್ನು ಒತ್ತಾಯದಿಂದ ಧರ್ಮಾಂತರಿಸುವುದು ಇಲ್ಲವೆ ಯಾವಳೊಬ್ಬ ಹೆಣ್ಣುಮಗಳನ್ನು ಹಿಡಿಸಿಕೊಂಡು ಹೋಗಿ ಅತ್ಯಾಚಾರವೆಸಗುವದು ನನ್ನ ಸ್ವಭಾವಕ್ಕೆ ವಿರುದ್ಧವಾಗಿದೆಂದು ಗಾಂಧೀಜಿ ಅವರಿಗೆ ಹೇಳಿದರು. ಈ ಬಗೆಯ ಅಪಮಾನಕ್ಕೆ ಅವಕಾಶ ಕೊಡುವೆವೆಂದು ನಮಗೆ ಎಲ್ಲಿಯ ವರೆಗೆ ಎನಿಸುವದೊ ಅಲ್ಲಿಯ ವರೆಗೆ ನಾವು ಇಂಥ ಅಪಮಾನಕ್ಕೆ ತುತ್ತಾಗತಕ್ಕವರೆ. ಪೋಲೀಸ ಇಲ್ಲವೆ ಸೈನಿಕರ ರಕ್ಷಣೆಯಿಲ್ಲದೆ ನಾವು ಬಾಳಲಾರೆವೆಂದು ಹೇಳಿದರೆ ಯುದ್ಧ ಪ್ರಾರಂಭವಾಗುವ ಮೊದಲೆ ಪರಾಜಯವನ್ನು ಒಪ್ಪಿಕೊಂಡದ್ದು ನಿಶ್ಚಿತವಾಗುವದು. ಹೇಡಿಗಳನ್ನು ಜಗತ್ತಿನಲ್ಲಿ ಯಾವ ಪೋಲೀಸರು ಇಲ್ಲವೆ ಸೈನಿಕರು ರಕ್ಷಿಸಲಾರರು. ಸಾವಿರಾರು ಜನರು ಕೆಲ ಜನರನ್ನು ಇಂದು ಹೆದರಿಸುತ್ತಿರುವುದರಿಂದ ಅವರೇನು ಮಾಡಬಲ್ಲರೆಂದು ನೀವು ಕೇಳುತ್ತಿರುವಿರಿ. ನಿಃಸಹಾಯಕರೆಂದೆನಿಸಿದರೆ ಪ್ರಚಂಡ ಜನಸಮುದಾಯವನ್ನು ಕೂಡ ಕೆಲವೆ ವ್ಯಕ್ತಿಗಳು ಹೆದರಿಸಬಲ್ಲರು. ಸಂಖ್ಯಾಬಲದಿಂದ ಕಡಮೆ ಇದ್ದುದು ನಿಮ್ಮ ತೊಂದರೆಗೆ ಕಾರಣವಲ್ಲ. ಆದರೆ ನಿಮ್ಮಲ್ಲುಂಟಾದ ನಿಃಸಹಾಯತೆಯ ಭಾವನೆ ಮತ್ತು ಪರರನ್ನವಲಂಬಿಸುವ ವೃತ್ತಿಯೇ ಇದಕ್ಕೆಲ್ಲ ಕಾರಣ. ಇದಕ್ಕುಪಾಯವೂ ನಿಮ್ಮ ಹತ್ತರವೆ ಇದೆ. ಪೂರ್ವ ಬಂಗಾಲದಿಂದ ಸಾಮೂಹಿಕವಾಗಿ ಹೊರಟು ಹೋಗಬೇಕೆಂಬ ನಿಮ್ಮ ವಿಚಾರವನ್ನು ವಿರೋಧಿಸುತಿರುವುದಕ್ಕೂ ಇದು ಕಾರಣ. ನಿರ್ಬಲತೆಗೆ ಇಲ್ಲವೆ ನಿಃಸಹಾಯತೆಗೆ ಅದೇನು ಉಪಾಯವಲ್ಲ.

"ಪೂರ್ವ ಬಂಗಾಲ ಈ ಬಗೆಯ ಸ್ಥಾನಾಂತರಕ್ಕೆ ವಿರುದ್ಧವಿದೆ" ಎಂದು ಅವರು ಉತ್ತರಿಸಿದರು.

"ಅವರು ಊರು ಬಿಟ್ಟು ಹೋಗತಕ್ಕದ್ದಲ್ಲ" ಗಾಂಧೀಜಿ ಮುಂದುವರಿದರು. "೨೦೦೦೦ ಸಶಕ್ತ ಜನರು ಅಹಿಂಸಾತ್ಮಕವಾಗಿ ಶೂರ ಮನುಷ್ಯರಂತೆ ಮರಣಕ್ಕೆ ಸಿದ್ಧರಾಗುವದು ಇಂದು ಅಡುಗಲಜ್ಜಿ ಕತೆಯಂತೆ ತೋರಬಹುದು. ಆದರೆ ೨೦೦೦೦ ಜನಸಂಖ್ಯೆಯಲ್ಲಿ ಪ್ರತಿಯೊಬ್ಬ ಸಶಕ್ತ ಮನುಷ್ಯ ಶೂರ ಸೈನಿಕರಂತೆ ಪ್ರತ್ಯಕ್ಷ ಯುದ್ಧದಲ್ಲಿ ಮರಣಹೊಂದುವದು ಅಡುಗಲಜ್ಜಿ ಕತೆಯಾಗಲಾರದು. ಥರ್ಮೋಪಿಲಿಯ ನಿರ್ಮಾತರಾದ ಲಿಯಾನಡಸ್ ಅರಸನ ೫೦೦ ಜನ ಅಮರ ವೀರರಂತೆ ಅವರು ಅಮರರಾಗಿ ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆಯುವರು. ಅನಂತರ ಥರ್ಮೋಪಿಲಿಯಶೂರರ ಸಮಾಧಿಯಮೇಲೆ ಕೊರೆಯಲ್ಪಟ್ಟ ಮೃತ್ಯುಲೇಖವನ್ನು ಅವರುಲ್ಲೇಖಿಸಿದರು.

"ದಾರಿಗನೇ, ಇಲ್ಲಿ ನಿನ್ನಮಕ್ಕಳು ಮಲಗಿರುವರೆಂದು ಸ್ಪಾರ್ಟಳಿಗೆ ಹೇಳು.

ಅವಳ ಅಜ್ಞೆ ಹಾಗಿದ್ದಿತು ನಾವು ಅದನ್ನು ಪಾಲಿಸಿದೆವು."

### ತಪ್ಪು ಕೇಳಿಕೆ

"ವಿಶಾಲ ಬಂಗಾಲದಲ್ಲಿ ಆದೊಂದೇ ಕರಾರಿನಿಂದ ನೀವು ಇರಬಲ್ಲಿರೆಂದು ನಾನು ಉಚ್ಚವಾಗಿ ಘೋಷಿಸಬಯಸುತ್ತೇನೆ" ಎಂದು ಮುಂದುವರಿದರು ಗಾಂಧೀಜಿ.

"ಹಿಂದೂ ಅಧಿಕಾರಿಗಳು, ಹಿಂದೂ ಪೋಲೀಸರು, ಹಿಂದೂ ಸೈನಿಕರುಬೇಕೆಂದು ನೀವು ಕೇಳುವಿರಿ. ಇದು ತಪ್ಪು ಕೇಳಿಕೆ. ಹಿಂದೆ ಹಿಂದೂ ಅಧಿಕಾರಿಗಳು, ಹಿಂದೂ ಪೋಲೀಸರು ಹಿಂದೂ ಸೈನಿಕರೇ ಸುಲಿಗೆ, ಕೊಳ್ಳಿ, ಅತ್ಯಾಚಾರ, ಅಪಹರಣ ಮೊದಲಾದ ಕೃತ್ಯಗಳನ್ನು ಮಾಡಿರುವರೆಂಬುದನ್ನು ನೀವು ಮರೆಯುತ್ತೀರಿ. ಕಾಶೀವಾಡ್ನನನ್ನ ನಿವಾಸಸ್ಥಳ. ಅಲ್ಲಿ ಸಣ್ಣ ಸಣ್ಣ ರಾಜ್ಯಗಳಿವೆ. ಮಾನವ ಸ್ವಭಾವ ಎಷ್ಟೊಂದು ಅವನತಿಸ್ಥಿತಿಯನ್ನು ಮುಟ್ಟಬಹುದೆಂಬುದನ್ನು ನಾನು ನಿಮಗೆ ಬಣ್ಣಿಸಿ ಹೇಳಲಾರೆ. ಕೆಲ ರಾಜ್ಯಗಳಲ್ಲಿಹೆಣ್ಣು ಮಕ್ಕಳ ಮರ್ಯಾದೆ ಸುರಕ್ಷಿತವಾಗಿರುವದಿಲ್ಲ.. ಅಲ್ಲಿ ಒಡೆಯನೇನು ಪುಂಡನಿಲ್ಲ. ಯೋಗ್ಯ ರೀತಿಯಿಂದ ನೇಮಿಸಲ್ಪಟ್ಟ ಸದ್ಗೃಹಸ್ಥನಿರುವನು.

"ವೈಯಕ್ತಿಕ ಅವನತಸ್ಥಿತಿಯ ಉದಾಹರಣೆಗಳಿವು. ಇಲ್ಲಿ ಸಾಮೂಹಿಕ ರೀತಿಯಲ್ಲಿ ಇದೆಲ್ಲ ನಡೆದಿದೆ.

"ಆದರೆ ಅಲ್ಲಿ ವ್ಯಕ್ತಿಯೊಬ್ಬನೇ ಇದರಲ್ಲಿರುವದಿಲ್ಲ. ಅವನ ಬೆನ್ನುಹಿಂದೆ ಅವನ ಸಣ್ಣ ಸಂಸ್ಥಾನದ ಯಂತ್ರವೇ ಇರುವದು."

### ಅಲ್ಪ ಸಂತುಷ್ಟಿ

"ಸಮಾನಸ್ಕಂಧರು ಕೂಡ ಅವರನ್ನು ನಿಷೇಧಿಸುವರು. ಆದರೆ ಇಲ್ಲಿ ಮುಸಲ್ಮಾನರು ಇಂಥ ಕೃತಿಗಳನ್ನು ನಿಷೇಧಿಸುವದಿಲ್ಲ."

"ನಾನು ಇಲ್ಲಿಗೆ ಬಂದಂದಿನಿಂದ ಸಹೀದ ಸುರ್‍ಹವರ್ದಿಯವರನ್ನು ಹಿಡಿದುಕೊಂಡು ಎಲ್ಲರೂ ಇದನ್ನು ಖಂಡಿಸಿದ್ದನ್ನೇ ನಾನು ಕೇಳುತಿರುವೆನು ಬೇರೆ ಏನನ್ನೂ ಇಲ್ಲ. ನಿಷೇಧಾತ್ಮಕ ಶಬ್ದಗಳು ನಿಮ್ಮ ಕಿವಿಗಳಲ್ಲಿ ನಿನಾದ ಮಾಡುತಿರಬಹುದು. ಆದರೆ ಅವುಗಳಿಂದ ಆ ದುರ್ದೈವೀ ಹೆಣ್ಣುಮಕ್ಕಳಿಗೆ ಸಮಾಧಾನವಾಗಲಾರದು. ಮನೆಮಾರುಗಳನ್ನು ಕಳೆದುಕೊಂಡ ಹೆಣ್ಣುಮಕ್ಕಳು ಒತ್ತಾಯದಿಂದ ಅಪಹರಿಸಲ್ಪಟ್ಟ ಧರ್ಮಾಂತರಿಸಲ್ಪಟ್ಟ ಮತ್ತು ಮದುವೆ ಮಾಡಲ್ಪಟ್ಟ ಹೆಣ್ಣುಮಕ್ಕಳು ಈ ನಿಷೇಧ ಶಬ್ದಗಳಿಂದ ಸಮಾಧಾನ ಹೊಂದಲಾರರು."

"ಹಿಂದುಗಳಿಗೆಷ್ಟು ನಾಚಿಕೆಗೇಡು ಮುಸಲ್ಮಾನರಿಗೆಷ್ಟು ಅಗೌರವ" ಎಂದು ಉದ್ಗರಿಸಿದರು ಮಹಾತ್ಮರು. "ಇಲ್ಲ. ಶಾಂತಿಯಲ್ಲಿ ನಾನು ನಿಮ್ಮನ್ನು ಬಿಟ್ಟು ಹೋಗಬಯಸುವದಿಲ್ಲ.

'ಈ ಮನುಷ್ಯ ನಮ್ಮನ್ನು ಬಿಟ್ಟು ಎಂದು ಓಡುವನು, ಎಂದು ನೀವು ಈಗ ನಿಮ್ಮ ಮನಸಿನಲ್ಲಿ ವಿಚಾರ ಮಾಡುತಿರಬಹುದು. ಆದರೀ ಮನುಷ್ಯ ಹೋಗುವದಿಲ್ಲ. ನಿಮ್ಮ ಅಮಂತ್ರಣದಿಂದ ಅವನು ಬಂದಿರುವದಿಲ್ಲ. ಪೂರ್ವ ಬಂಗಾಲದಲ್ಲಿಯ ಅವನ ಕೆಲಸ ಯಶಸ್ವಿಯಾದ ಬಳಿಕ ನಿಮ್ಮ ಆಶೀರ್ವಾದಗಳನ್ನು ಪಡೆದೇ ಅವನು ಹೋಗತಕ್ಕವನು."

'ಪಾಕಿಸ್ತಾನ ಯೋಜನೆಯು ಅವರ ಒಂದು ಅಂಗವಿದು' ಎಂದು ಶಿಷ್ಯಮಂಡಳದವರೊಬ್ಬರು ನುಡಿದರು.

"ಇದು ಹುಚ್ಚುಚ್ಚಾರ. ಈಗ ಅವರು ಅದನ್ನು ಕಂಡುಹಿಡಿದಿರುವರು. ಬೇಗನೆ ಅವರಿಗೆ ಅದರಿಂದ ವಾಕರಿಕೆ ಬರುವದು. ಈಗಾಗಲೆ ಅವರಿಗೆ ಹಾಗೆ ಎನಿಸಹತ್ತಿದೆ"

"ಹಾಗಿದ್ದರೆ ಅವರು ಇಲ್ಲಿಗೆ ಬಂದು ಪರಿಸ್ಥಿತಿಯನ್ನೇಕೆ ಸರಿಪಡಿಸುವದಿಲ್ಲ ?"

"ಆ ಪರಿಸ್ಥಿತಿಯೂ ಬರುವದು. ಕಾಯಿಲೆ ಕೇವಲ ಗಂಡಾಂತರವನ್ನು ನಿದರ್ಶಿಸುತ್ತದೆ. ವಾಸಿಯಾಗುವ ಮೊದಲು ರೋಗೋಪಶಮನ ನಡೆಯಲಿಕ್ಕೆ ಬೇಕು." ನಾನು ನೈಸರ್ಗಿಕ ಚಿಕಿತ್ಸಕನೆಂಬುದು ನಿಮಗೆ ಗೊತ್ತಿದೆ. ಎಂದು ಅವರು ಬೊಳ್ಳನೆ ನಕ್ಕರು. ಎಲ್ಲರೂ ಇದರಲ್ಲಿ ಸಹಕರಿಸಿದರು.

### ಸಂಖ್ಯೆಯ ಹೇತ್ವಾಭಾಸ

"ಸಮುದ್ರದಲ್ಲಿಯ ಕೆಲ ಬಿಂದುಗಳಂತೆ ನಾವಿರುವೆವು ಇಲ್ಲಿ" ಎಂದು ಮತ್ತೊಬ್ಬ ಗೆಳೆಯ ಮಾತು ಮುಂದುವರಿಸುತ್ತ ನುಡಿದನು.

ಗಾಂಧೀಜಿ ಉತ್ತರಿಸಿದರು. "ಪೂರ್ವ ಬಂಗಾಲದಲ್ಲಿ ಒಬ್ಬನೆ ಹಿಂದು ಇದ್ದರೂ ಅವನು ಮುಸಲ್ಮಾನರ ಮಧ್ಯದಲ್ಲಿರುವ ಧೈರ್ಯವನ್ನು ತೋರಿಸಬೇಕೆಂದು ನನ್ನ ಮನೀಷೆ. ಜೀವ ಕೊಡುವ ಪ್ರಸಂಗ ಬಂದರೆ ಶೂರನಂತೆ ಅವನು ಮರಣ ಹೊಂದಲೆಂದು ನನ್ನ ಅಪೇಕ್ಷೆ. ಗುಲಾಮನಂತೆ ಇರಲು ಅವನು ನಿರಾಕರಿಸಬೇಕು. ಹೋರಾಟ ನಡೆಸದೆ ಮರಣ ಹೊಂದುವ ಅಹಿಂಸಾತ್ಮಕ ಶಕ್ತಿ ಅವನಲ್ಲಿರಲಿಕ್ಕಿಲ್ಲ. ಆದರೆ ಅನ್ಯಾಯಕ್ಕೆ ಅವಕಾಶ ಕೊಡದೆ ಮನುಷ್ಯನಂತೆ ಹೋರಾಡುತ್ತಲೆ ಮರಣ ಹೊಂದುವ ಧೈರ್ಯ ಅವನಲ್ಲಿದ್ದರೆ ಅವರ ಪ್ರಸಂಶೆಗೆ ಅವನು ಪಾತ್ರನಾಗುವನು."

ಎಂಥ ಕ್ರೂರ ಮತ್ತು ಕಠಿನ ಹೃದಯದ ಮನುಷ್ಯನೂ "ಶೂರ ಮನುಷ್ಯನನ್ನು ಹೊಗಳದೆ ಇರಲಾರನು. ಪುಂಡ ಮನುಷ್ಯನು ಕೂಡ ಎಣಿಸುವಷ್ಟು ನಿರ್ಘೃಣ ಮನುಷ್ಯನಿರುವದಿಲ್ಲ. ಸದ್ಗುಣಗಳು ಅವನಲ್ಲಿಯೂ ಇರುವವು."

ಈ ಮೊದಲು ವಾದವನ್ನು ಪ್ರಾರಂಭಿಸಿದ ಮನುಷ್ಯನ ಸಂಶಯವಿನ್ನೂ ನಿವಾರಣೆಯಾಗಲಿಲ್ಲ. "ಪುಂಡನಲ್ಲಿ ವಿವೇಕವೇ ಇರುವದಿಲ್ಲ" ಎಂದನವನು.

"ಆದರೆ ಶೌರ್ಯ ಅವನಿಗೆ ಗೊತ್ತುಂಟು" ಎಂದು ಉತ್ತರಿಸಿದರು ಗಾಂಧೀಜಿ. "ತನಗಿಂತ ನೀವು ಶೂರರಿರುವಿರೆಂದು ಅವನಿಗೆ ಗೊತ್ತಾದರೆ ಅವನು ನಿಮಗೆ ಮರ್ಯಾದೆ ಕೊಡಹತ್ತುವನು."

### ಶಸ್ತ್ರಾಗಾರ ದಾಳಿಯ ಪರಂಪರೆ

"ಸದ್ಯದ ಚರ್ಚೆಯ ಉದ್ದೇಶಕ್ಕಾಗಿ ಶಸ್ತ್ರಾಸ್ತ್ರಗಳ ಉಪಯೋಗ ಮಾಡಬೇಡಿರೆಂದು ನಾನು ನಿಮಗೆ ಹೇಳಿರುವದಿಲ್ಲೆಂಬುದನ್ನು ನೀವು ಕಂಡುಹಿಡಿದಿರಬಹುದು" ಎಂದು ಮುಂದುವರಿದರು ಗಾಂಧೀಜಿ.

"ಶಸ್ತ್ರಾಸ್ತ್ರಗಳನ್ನು ನಾನು ನಿಮಗೆ ಪೂರಯಿಸಲಾರೆನು. ಚಿತಗಾಂಗ ಶಸ್ತ್ರಾಗಾರ ಲೂಟಿಗಾರರಿಗೆ ಶಸ್ತ್ರಗಳನ್ನು ಪೂರಯಿಸುವದು ನನ್ನ ಕೆಲಸವಲ್ಲ" ಎಂದು ಅವರನ್ನು ನಗೆಯಾಡುತ್ತ ಗಾಂಧೀಜಿ ನುಡಿದರು. ಶಸ್ತ್ರಾಗಾರ ಲೂಟಿ ಮಾಡಿದ ಮನುಷ್ಯರ ಸಹಾಯಕ್ಕೆ ಹೆಚ್ಚು ಜನ ಬಾರದಿದ್ದುದು ಅತ್ಯಂತ ವಿಷಾದಕರಸಂಗತಿಯು. ಅವರ ಶೌರ್ಯ ಏಕಪಕ್ಷೀಯವಾಗಿದ್ದಿತು. ಎರಡನೆಯವರನ್ನು ಅದು ಪ್ರೇರೇಪಿಸಲಿಲ್ಲ."

ಅನಂತರ ಚಿತಗಾಂಗ ಶಸ್ತ್ರಾಗಾರ ದಾಳಿಯ ಗುಂಪಿನ ಬಗ್ಗೆ ಚರ್ಚೆ ಪ್ರಾರಂಭವಾಯಿತು.

"ಹಾಗಾಗದಿದ್ದುದೇನು ಆಶ್ಚರ್ಯವಲ್ಲ. ಅವರು ನಿಷೇಧಿಸಲ್ಪಟ್ಟಿರು" ಎಂದು ಅವರಲ್ಲೊಬ್ಬರು ಉತ್ತರಿಸಿದರು.

"ಯಾರಿಂದ? ನಾನು ಅವರನ್ನು ನಿಷೇಧಿಸಿರಬಹುದು; ಆ ಮಾತು ಬೇರೆ"

"ಜನರೂ ಅವರನ್ನು ನಿಷೇಧಿಸಿದರು. ನಾನು ದಾಳಿಗಾರರಲ್ಲೊಬ್ಬನು"

ಆ "ಜನರು ನಿಷೇಧಿಸಲಿಲ್ಲ. ನೀನು ಶಸ್ತ್ರಾಸ್ತ್ರ ದಾಳಿಗಾರನಲ್ಲ. ಇಲ್ಲವೆ ಇದೆಲ್ಲವನ್ನು ಹೇಳಲಿಕ್ಕೆ ನೀನು ಇಲ್ಲಿ ಇರಬಾರದಿತ್ತು. ಈ ಘಟನೆಗಳ ಸಾಕ್ಷಿ ನುಡಿಯುವದಕ್ಕಾಗಿ ಅವರಲ್ಲಿಷ್ಟೊಂದು ಜನ ಜೀವಂತ ಉಳಿದುದು ಅತ್ಯಂತ ದುಃಖದಾಯಕ ಸಂಗತಿಯೆಂದು ನನಗನಿಸುತ್ತದೆ. ಆ ದಾಳಿಯನ್ನು ಮಾಡಿದಾಗಿನಂತೆ ಸದ್ಯದ ಗಂಡಾಂತರ ಪ್ರಸಂಗದಲ್ಲಿ ಅವರು ಅಷ್ಟೇ ನಿರ್ಭೀತಿಯನ್ನು ಮತ್ತು ಧೈರ್ಯವನ್ನು ತೋರಿಸಿ ಮರಣವನ್ನು ಎದುರಿಸಿದ್ದಾದರೆ ಇತಿಹಾಸದಲ್ಲಿ ಅವರು ಶೂರರೆಂದು ಪ್ರಖ್ಯಾತಿಯನ್ನು ಪಡೆಯುತಿದ್ದರು. ಆದರೆ ಈಗ ಅವರು ಇತಿಹಾಸದ ಪುಟದಲ್ಲಿ ಸಣ್ಣದೊಂದು ಟಿಪ್ಪಣಿಯನ್ನು ಜೋಡಿಸಿರುವರು. ಶಸ್ತ್ರಾಸ್ತ್ರಗಳ ಉಪಯೋಗವನ್ನೆಲ್ಲ ಮರೆತುಬಿಡಿರೆಂದು ನನ್ನ ಶೌರ್ಯದ ಮಾದರಿಯನ್ನನುಸರಿಸಿರೆಂದು ಈಗಲೆ ನಾನು ನಿಮಗೆ ಕೇಳಿಕೊಳ್ಳುವದಿಲ್ಲೆಂದು ನಾನು ಆಗಲೆ ಹೇಳಿದ್ದು ನಿಮಗೆ ಗೊತ್ತಿರಬಹುದು. ನನ್ನ ಬಗ್ಗೆಯೂ ನಾನು ಅದನ್ನು ಮಾಡಿರುವದಿಲ್ಲ. ಪೂರ್ವ ಬಂಗಾಲದಲ್ಲಿ ಇದನ್ನು ವರೆಗೆ ಹಚ್ಚಬೇಕೆಂದು ನಾನಿಲ್ಲಿಗೆ ಬಂದಿರುವೆನು. ಶೌರ್ಯದ ಪರಂಪರಾಗತ ಮಾದರಿಯನ್ನು ನೀವು ಅನುಸರಿಸಬೇಕೆಂದು ನನ್ನಬಯಕೆ. ಅಮರ್ಯಾದೆ ಮತ್ತು ಅವಮಾನದ ಪ್ರಸಂಗಗಳಲ್ಲಿ ಧೈರ್ಯದಿಂದ ಮತ್ತು ನಿರ್ಭೀತಿಯಿಂದ ಮರಣವನ್ನೆದುರಿಸಲು ಸಿದ್ಧರಾಗಬೇಕೆಂದು ನೀವು ಸ್ತ್ರೀ ಪುರುಷರನ್ನು ಪ್ರೇರೇಪಿಸಲು ಸಮರ್ಥರಾಗತಕ್ಕದ್ದು. ಆಗಹಿಂದುಗಳು ಪೂರ್ವ ಬಂಗಾಲದಲ್ಲಿ ಇರಬಲ್ಲರು. ಇಲ್ಲದಿದ್ದರೆ ಅದು ಶಕ್ಯವಾಗಲಾರದು. ಎಷ್ಟೆಂದರೂ ಮುಸಲ್ಮಾನರು ನಮ್ಮವರೆ. ನಮ್ಮ ಅವರ ರಕ್ತ, ಅಸ್ಥಿಗಳು ಒಂದೇ ಇರುವವು.

"ಇಲ್ಲಿ ಮುಸಲ್ಮಾನ ಹಿಂದುಗಳ ಪ್ರಮಾಣ ೭ಕ್ಕೆ ಒಂದು ಇದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ನಾವು ಇಲ್ಲಿ ಇರಬೇಕೆಂದು ನೀವು ಹೇಗೆ ಅಪೇಕ್ಷಿಸುವಿರಿ ?"

"ಹಿಂದುಸ್ತಾನ ಬ್ರಿಟಿಶ್‌ರ ವಶಕ್ಕೆ ಬಂದಾಗ ಯುರೋಪಿಯನ್ ಸೈನಿಕರು ಕೇವಲ ೭೦೦೦೦ ಜನರಿದ್ದರು. ಹಿಂದೀಯರು ೩೩ ಕೋಟಿ ಇದ್ದರು."

"ನಮ್ಮಲ್ಲಿ ಶಸ್ತ್ರಾಸ್ತ್ರಗಳಿಲ್ಲ. ಸರಕಾರದವರು ತಮ್ಮ ಶಸ್ತ್ರಾಸ್ತ್ರಗಳಿಂದ ಅವರನ್ನು ಬೆಂಬಲಿಸುತ್ತಾರೆ."

"ದಕ್ಷಿಣ ಅಫ್ರಿಕೆಯಲ್ಲಿ ಹಿಂದೀಯರಿಗೆ ಎಷ್ಟೋ ಅಡಚಣೆಗಳಿದ್ದವು. ಯುರೋಪಿಯನ್‌ರು ಮತ್ತು ನಿಗ್ರೋಗಳು ಪ್ರಚಂಡ ಸಂಖ್ಯಾಕರಾಗಿದ್ದರು. ಹಿಂದೀಯರು ಕೇವಲ ಅಲ್ಪ ಪ್ರಮಾಣದಲ್ಲಿದ್ದರು. ಯುರೋಪಿಯನ್‌ರ ಹತ್ತರ ಶಸ್ತ್ರಾಸ್ತ್ರಗಳಿದ್ದವು. ನಮ್ಮ ಹತ್ತರ ಏನೂ ಇರಲಿಲ್ಲ. ಅದುದರಿಂದ ನಾವು ಸತ್ಯಾಗ್ರಹಾಸ್ತ್ರವನ್ನು ಹಿರಿದೆವು. ದಕ್ಷಿಣ ಅಫ್ರಿಕೆಯಲ್ಲಿ

—೮ ನೇ ಪುಟ ನೋಡಿರಿ.

## ಪ್ರಥಮ ಪಾಠ

(೭ನೆಯ ಪುಟದಿಂದ)

ಇಂದು ಬಿಳಿಯರು ಹಿಂದೀಯರಿಗೆ ಮರ್ಯಾದೆ ಕೊಡುತ್ತಾರೆ. ಝುಲು ಜನರು ಎಷ್ಟೇ ಶರೀರ ಸೌಷ್ಟವ ಪಡೆದಿದ್ದರೂ ಅವರಿಗೆ ಹಿಂದೀಯರಷ್ಟು ಗೌರವವಿಲ್ಲ;"

"ಎಂದರೆ ನಾವೂ ಹೇಗಾದರೂ ಮಾಡಿ ಶಸ್ತ್ರಾಸ್ತ್ರಗಳಿಂದ ಹೋರಾಡತಕ್ಕದ್ದಲ್ಲವೆ?" ಕೊನೆಗೆ ಕೇಳಿದ ಆ ಗೆಳೆಯ.

"ಹೇಗಾದರೂ ಅಲ್ಲ" ಉತ್ತರಿಸಿದರು ಗಾಂಧೀಜಿ "ಹಿಂಸೆಯಲ್ಲಿಯೂ ನೀತಿರೀತಿಗಳಿವೆ- ಉದಾಹರಣಾರ್ಥವಾಗಿ ನಿಃಸಹಾಯಕರಾದ ವೃದ್ಧ ಸ್ತ್ರೀಪುರುಷರನ್ನು, ಮಕ್ಕಳನ್ನು ಕೊಲ್ಲುವದರಲ್ಲಿ ಶೌರ್ಯವೇನೂ ಇಲ್ಲ. ಅದರೆ ಅದು ಅತ್ಯಂತ ಹೇಡಿತನವು. ಪ್ರಾಣ ಹೋದರೂ ಚಿಂತೆಯಿಲ್ಲ ಅಂಥವರನ್ನು ರಕ್ಷಿಸುವದರಲ್ಲಿ ಪೌರುಷವಿದೆ. ಇಂಥ ಪೌರುಷ ಕೃತ್ಯಗಳ ಉದಾಹರಣೆಗಳು ಪ್ರಾರಂಭ ಕಾಲದ ಮುಸಲ್ಮಾನ ಇತಿಹಾಸದಲ್ಲಿ ಬೇಕಾದಷ್ಟಿವೆ. ಮತ್ತು ಇವುಗಳಿಗೆಲ್ಲ ಇಸ್ಲಾಮು ಹೆಚ್ಚು ಪ್ರಖ್ಯಾತವಿದೆ."

### ಶೌರ್ಯ ಅಥವಾ ಪಾಶವೀ ವೃತ್ತಿ

"ಹಿಂದುಗಳು ಆಕ್ರಮಕ ಧೋರಣವನ್ನು ವಹಿಸಲು ನೀವು ಅಪ್ಪಣೆ ಕೊಡುವಿರಾ?"

ಬಿಹಾರಿಗಳು ಹಾಗೆ ಮಾಡಿ ತಾವಷ್ಟೆ ಅಪಕೀರ್ತಿಯನ್ನು ಹೊಂದಲಿಲ್ಲ; ಹಿಂದುಸ್ತಾನಕ್ಕೂ ಕಲಂಕ ತಂದರು. ಹಿಂದುಸ್ತಾನದ ಸ್ವಾತಂತ್ರ್ಯದ ಗಡಿಯಾರವನ್ನು ಅವರು ಹಿಂದೆ ಸರಿಸಿದರು. ಬಿಹಾರದ ಬಗ್ಗೆ ಮಾತಾಡುವ ಅಧಿಕಾರ ನನಗಿದೆ. ಬಂಗಾಲಕ್ಕಿಂತ ಬಿಹಾರ ನನಗೆ ಹತ್ತಿರದ್ದಾಗಿ ಎನಿಸುತ್ತದೆ. ಚಂಪಾರಣ್ಯದಲ್ಲಿ ಅಹಿಂಸಾತಂತ್ರದ ಪ್ರಯೋಗ ಮಾಡುವ ಸುದೈವ ನನ್ನದಾಗಿತ್ತು. ಬಿಹಾರದಲ್ಲಿಯ ಅತ್ಯಾಚಾರದಿಂದ ಮುಸಲ್ಮಾನರು ಥಣ್ಣಗಾಗಿರುವರೆಂದು ಹೇಳುವದನ್ನು ನಾನು ಕೇಳಿದ್ದೇನೆ. ಸದ್ಯಕ್ಕೆ ಅವರು ಭಯಭೀತರಾಗಿರುವರೆಂದು ಅವರರ್ಥ. ಒಂದು ಆಟದಲ್ಲಿ ಇಬ್ಬರು ಆಡಬಲ್ಲರೆಂಬುದನ್ನು ಅವರು ಮರೆಯುತ್ತಾರೆ. ನಮ್ಮ ದಾಸ್ಯಶೃಂಖಲೆಯಲ್ಲಿ ಬಿಹಾರವು ಒಂದು ಕೊಂಡಿಯನ್ನು ಕೂಡಿಸಿದೆ. ಬಿಹಾರದಲ್ಲಿಯ ಘಟನೆಗಳ ಪುನರಾವೃತ್ತಿಯಾದರೆ ಅಥವಾ ಬಿಹಾರದಲ್ಲಿಯ ಮನೋವೃತ್ತಿಯಲ್ಲಿ ಬದಲಾವಣೆಯಾಗದಿದ್ದರೆ ನಿಮ್ಮ ಡಾಯರಿಯಲ್ಲಿ ನನ್ನ ಈ ಶಬ್ದಗಳನ್ನು ಬರೆದಿಟ್ಟುಕೊಳ್ಳಿರಿ. "ಹಿಂದುಸ್ತಾನ ಅನತಿ ಕಾಲದಲ್ಲಿಯೆ ಪ್ರಬಲ ಮೂರು ರಾಷ್ಟ್ರಗಳ ಅಧೀನದಲ್ಲಿ ಬರುವದು ಅವುಗಳಲ್ಲೊಂದು ಬಹುಶಃ ಆದೇಶಕ ರಾಷ್ಟ್ರವಾಗುವದು. ಹಿಂದುಸ್ತಾನದ ಸ್ವಾತಂತ್ರ್ಯ ಇಂದು ಬಂಗಾಲ ಮತ್ತು ಬಿಹಾರದಲ್ಲಿ ಗಂಡಾಂತರಕ್ಕೊಳಗಾಗಿದೆ."

ಕಾಂಗ್ರೆಸ್ಸಿಗರು ಜಾಣತನದಿಂದ ಅಧಿಕಾರದ ಉಪಯೋಗ ಮಾಡುವರು ಅದರ ದುರುಪಯೋಗ ಮಾಡುವದಿಲ್ಲ. ಎಂಬ ವಿಶ್ವಾಸದಿಂದ ಬ್ರಿಟಿಶರು ಕಾಂಗ್ರೆಸ್ಸಿನಕೈಯಲ್ಲಿ ಅಧಿಕಾರಕೊಟ್ಟರು ಮಾತ್ರ ಆದರೆ ಅದರ ಮೇಲಿನ ಪ್ರೇಮದಿಂದಲ್ಲ. ಅದುದರಿಂದ ಪಂ. ಜವಾಹರಲಾಲರಿಗೆ ತಮ್ಮ ಕಾಲ್ಕೆಳಗಿನ ಮಣ್ಣು ಜಾರುತಿದೆಂದೆನಿಸಹತ್ತಿದೆ. ಆದರೆ ಅವರು ಹಾಗೆ ಆಗಗೊಡಲಾರರು. ಅಂತೆಯೇ ಅವರು ಬಿಹಾರದಲ್ಲಿರುವರು. ಅವಶ್ಯವಿದ್ದಷ್ಟು ದಿನ ತಾವು ಅಲ್ಲಿ ಇರುವದಾಗಿ ಹೇಳಿರುವರು." "ಬಿಹಾರಿಗಳು ಹೇಡಿಗಳಂತೆ ವರ್ತಿಸಿದರು" ಗಾಂಧೀಜಿಯವರು ನಿಟ್ಟುಸಿರು ಬಿಡುತ್ತ ನುಡಿದರು. "ಶಸ್ತ್ರಾಸ್ತ್ರಗಳನ್ನುಪಯೋಗಿಸಬೇಕಾದರೆ ಅವುಗಳ ಯೋಗ್ಯ ಉಪಯೋಗ ಮಾಡಿರಿ. ಅವುಗಳ ದುರುಪಯೋಗ ಮಾಡಬೇಡಿರಿ. ಬಿಹಾರ ತನ್ನ ಶಸ್ತ್ರಾಸ್ತ್ರಗಳ ಸದುಪಯೋಗ ಮಾಡಲಿಲ್ಲ. ಬಿಹಾರಿಗಳಿಗೆ ಸೇಡು ತೀರಿಸಿಕೊಳ್ಳುವದೆ ಆಗಿದ್ದರೆ ಅವರು ನೌಖಾಲಿಗೆ ಹೋಗಿ ಎಲ್ಲರೂ ಮರಣಹೊಂದಬೇಕಾಗಿತ್ತು. ಸಾವಿರಾರು ಜನ ಹಿಂದುಗಳು ಕೂಡಿ ತಮ್ಮೊಳಗಿದ್ದ ಮುಸಲ್ಮಾನ ಕೆಲವೆ ಸ್ತ್ರೀ ಪುರುಷ ಮಕ್ಕಳ ಮೇಲೆ ಏರಿಹೋಗುವದು ಸೇಡುತೀರಿಸಿಕೊಳ್ಳುವದಲ್ಲ;ಆದರೆ ಪಾಶವೀ ವೃತ್ತಿಯು. ಅಶಕ್ತ ಮತ್ತು ನಿಃಸಹಾಯಕರನ್ನು ರಕ್ಷಿಸುವದು ಶಸ್ತ್ರಾಸ್ತ್ರಗಳಿದ್ದವರ ಕರ್ತವ್ಯ ಮತ್ತು ಹೊಣೆ. ಬಿಹಾರಿಗಳು ತಮ್ಮ ಮಧ್ಯದಲ್ಲಿರುವ ಮುಸಲ್ಮಾನರಿಗೆ ತಮ್ಮ ಪ್ರಾಣವನ್ನು ಗಣಕ್ಕೆ ಹಚ್ಚಿಕೂಡ, ಸಂಪೂರ್ಣ ಸುರಕ್ಷಿತತೆಯ ಆಶ್ವಾಸನ ಕೊಟ್ಟದ್ದಾದರೆ ಪೂರ್ವ ಬಂಗಾಲದಲ್ಲಿಯ ಹಿಂದುಗಳಿಗೆ ಅತ್ಯಂತ ಸಹಾಯವನ್ನು ಸಲ್ಲಿಸಿದಂತಾಗುತಿತ್ತು. ಅವರ ಉದಾಹರಣೆಯು ಸತ್ಪರಿಣಾಮವಾಗುತಿತ್ತು. ಸದ್ಯದ ಹುಚ್ಚಾಚ್ಚಾರ ಮಾಯವಾಗಿರುವ ಈ ಪ್ರಸಂಗದಲ್ಲಿ ಯೋಗ್ಯ ಪಶ್ಚಾತ್ತಾಪದಿಂದ ಈಗಲೂ ಅವರು ಹಾಗೆ ಮಾಡಬಲ್ಲರೆಂದು ನನಗೆ ವಿಶ್ವಾಸವಿದೆ. ಅದು ಹೇಗೇ ಇರಲಿ, ನಾನು ನನ್ನ ಪ್ರಾಣದ ಬೆಲೆ ಇದು ಎಂದು ಭಾವಿಸುತ್ತೇನೆ. ನಾನು ಬದುಕಬೇಕೆಂದಿದ್ದರೆ ಅವರು ಅದನ್ನು ಪೂರೈಸಲಿ—

ಕಾಜಿರಖಿಲ್ ಪ್ಯಾರೇಲಾಲ

೧೭-೧೧-೧೯೪೬

## ವಿವೇಕ ಬುದ್ಧಿಗೆ ಬಿನ್ನಹ

ನವಂಬರ ೧೦ ನೇ ದಿನಾಂಕ ದತ್ತಪಾರಾದಲ್ಲಿ ಸಾಯಂ ಪ್ರಾರ್ಥನೆಯ ಕಾಲಕ್ಕೆ ಗಾಂಧೀಜಿಯವರು ಹಿಂದುಸ್ತಾನಿಯಲ್ಲಿ ಮಾಡಿದ ಭಾಷಣದ ಪಾಠವಿದು—

ನೀವು ನಂಬಿರಿ ಬಿಡರಿ, ನಾನು ಹಿಂದು ಮತ್ತು ಮುಸಲ್ಮಾನರಿಬ್ಬರ ಸೇವಕನೂ ಇರುವೆನೆಂದು ನಿಮ್ಮ ಮನವರಿಕೆ ಮಾಡಿ ಕೊಡಬಯಸುತ್ತೇನೆ. ಪಾಕಿಸ್ತಾನದ ವಿರುದ್ಧ ನಾನು ಇಲ್ಲಿಗೆ ಬಂದಿರುವದಿಲ್ಲ. ಹಿಂದುಸ್ತಾನದ ಇಬ್ಭಾಗ ಆಗುವದೇ ಇದ್ದರೆ ನಾನು ಅದನ್ನು ತಪ್ಪಿಸಲಾರೆನು ಆದರೆ ಬಲುಮೆಯಿಂದ ನೀವು ಪಾಕಿಸ್ತಾನವನ್ನು ಸ್ಥಾಪಿಸಲಾರಿರೆಂದು ನಿಮಗೆ ನಾನು ಹೇಳಬಯಸುತ್ತೇನೆ. ಇದೀಗ ಮಾಡಿದ ಭಜನೆಯಲ್ಲಿ ಕವಿಯು ಪರಮಾತ್ಮನನ್ನು ವೇದಾಂತಿಯ ಸ್ಪರ್ಶಮಣಿಗೆ ಹೋಲಿಸಿರುವನು. ಪ್ರಸಿದ್ಧವಾಗಿರುವ ಸ್ಪರ್ಶಮಣಿಯು ಕಬ್ಬಿಣವನ್ನು ಸುವರ್ಣವನ್ನಾಗಿ ಪರಿವರ್ತಿಸುತಿತ್ತೆಂದು ಹೇಳಲಾಗುತ್ತದೆ. ಅದು ಸದಾಕಾಲ ಇಷ್ಟವಲ್ಲ. ಉದಾಹರಣಾರ್ಥವಾಗಿ ಅದರ ಸ್ಪರ್ಶದಿಂದ ರೇಲ್ವೆ ಹಳಿಗಳೆಲ್ಲ ಬಂಗಾರವಾಗಿ ಪರಿಣಮಿಸಿದರೆ ಉಗಿಬಂಡಿಗಳು ಅವುಗಳ ಮೇಲೆ ಓಡಾಡಲಾರವು. ಆದರೆ ಪರಮಾತ್ಮನ ಸ್ಪರ್ಶದಿಂದ ಆತ್ಮ ಪರಿಶುದ್ಧವಾಗುತ್ತದೆ. ಅದು ಯಾವಾಗಲೂ ಇಷ್ಟವಾದುದು.

"ಆ ಸ್ಪರ್ಶಮಣಿ ನಮ್ಮೆಲ್ಲರ ಹೃದಯದಲ್ಲಿದೆ. ಮುಸಲ್ಮಾನ ಬಂಧುಗಳಿಗೆ ನಾನು ಹೇಳಬಯಸುವದಿಷ್ಟೇ, ಅವರು ಒಂದೇ ಜನಾಂಗದವರೆಂದು ಇರಲಿ ಇಲ್ಲದೆ ದ್ವಿಜನಾಂಗದವರಾಗಿರಲಿ ಹಿಂದುಗಳೊಡನೆ ಮಿತ್ರತ್ವದಿಂದ ಅವರು ಇರಬೇಕು. ಹಾಗೆ ಇರಲು ಅವರು ಬಯಸುತಿರದಿದ್ದರೆ ಅವರು ಹಾಗೆ ಸ್ಪಷ್ಟವಾಗಿ ಹೇಳಿಬಿಡಬೇಕು. ಆ ಸಂದರ್ಭದಲ್ಲಿ ನಾನು ಪರಾಜಿತನಾದೆನೆಂದು ಒಪ್ಪಿಕೊಂಡು ಬಿಡುತ್ತೇನೆ. ಪರಿಹಾರ ಕೇಂದ್ರಗಳಲ್ಲಿರುವವರು ಬಹಳ ದಿನಗಳ ವರೆಗೆ ಅಲ್ಲಿಯೇ ಉಳಿಯಲಾರರು. ಸರಕಾರದವರು ಅವರಿಗೆ ಅನ್ನ ಕೊಡುತ್ತ ಸಾಗಲಾರರು. ಮತ್ತು ಅವರಿಗೆ ಸಿಕ್ಕುತ್ತಿರುವ ಅನ್ನವಾದರೂ ಎಂತಹದು? ಮನುಷ್ಯನು ಬದುಕಲು ಸಾಕಾಗುವಷ್ಟು ಧಾನ್ಯಗಳ ಅರ್ಧಕ್ಕಿಂತ ಕಡಮೆ ಧಾನ್ಯ ಅವರಿಗೆ ದಿನಾಲು ಕೊಡಲಾಗುತ್ತಿದೆ. ಮೀನು ಸಿಕ್ಕುವದಿಲ್ಲ, ಪಲ್ಲೆ ಕಾಯಿಯಿಲ್ಲ. ಕೊಡುವ ಧಾನ್ಯಕ್ಕೆ ಪೂರಕವಾಗುವಂಥ ಬೇರೆ ಯಾವುದನ್ನೂ ಕೊಡಲಾಗುವದಿಲ್ಲ. ಬಹಳ ದಿನಗಳ ವರೆಗೆ ಇಷ್ಟರಿಂದ ಅವರು ಬದುಕುವದು ಶಕ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ಮುಸಲ್ಮಾನರು ತಮ್ಮ ಹಳ್ಳಿಗಳಲ್ಲಿ ಹಿಂದುಗಳಿರಬಾರದೆಂದು ಬಯಸುತಿದ್ದರೆ ಹಿಂದುಗಳು ಬೇರೆ ಕಡೆ ಗುಳೆ ಹೋಗಲಿಕ್ಕೆ ಬೇಕಾಗುವದು.

"ಪೂರ್ವ ಬಂಗಾಲದಲ್ಲಿಯ ಪ್ರತಿಯೊಬ್ಬ ಹಿಂದು ಹೊರಟುಹೋದರೂ ಪೂರ್ವ ಬಂಗಾಲದಲ್ಲಿಯ ಮುಸಲ್ಮಾನರ ಮಧ್ಯದಲ್ಲಿಯೇ ನಾನು ಇರುವೆನು. ಅವರು ಕೊಟ್ಟದ್ದನ್ನು ಮತ್ತು ನ್ಯಾಯ್ಯಸಮ್ಮತವಾಗಿ ಯಾವದನ್ನು ನಾನು ತೆಗೆದುಕೊಳ್ಳಬೇಕೋ ಅದನ್ನು ತಿನ್ನುತ್ತ ಇಲ್ಲಿಯೇ ಉಳಿಯುವೆನು. ಹೊರಗಿನಿಂದ ನಾನು ನನ್ನ ಆಹಾರವನ್ನು ತರಿಸುವದಿಲ್ಲ. ನನಗೇನೂ ಮೀನ ಮಾಂಸ ಬೇಕಿಲ್ಲ. ಸ್ವಲ್ಪ ಹಣ್ಣು, ಪಲ್ಲೆ ಕಾಯಿ, ಆಡಿನ ಹಾಲು ಇಷ್ಟು ಮಾತ್ರ ನನಗೆ ಸಾಕು. ಆಡಿನ ಹಾಲು ಮತ್ತು ಧಾನ್ಯ ತೆಗೆದುಕೊಳ್ಳಲು ಪರಮಾತ್ಮನ ಆದೇಶವಾದಾಗಲೆ ನಾನು ಅವನ್ನು ತೆಗೆದುಕೊಳ್ಳುವೆನು. ಈಗ ಅವುಗಳನ್ನು ಬಿಟ್ಟುಗೊಟ್ಟರುವೆನು. ಬಿಹಾರದಲ್ಲಿ ಹಿಂದುಗಳು ತಾವು ಮಾಡಿದ್ದರ ಬಗ್ಗೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸುವವರೆಗೆ ನಾನು ಅವನ್ನು ಮತ್ತೆ ತೆಗೆದುಕೊಳ್ಳುವದಿಲ್ಲ.

"ಸಾವಿರಾರು ಹಿಂದುಗಳು ನೂರು ಜನ ಮುಸಲ್ಮಾನರನ್ನು ಸುತ್ತುಗಟ್ಟುವದು ಇಲ್ಲವೆ ಸಾವಿರಾರು ಮುಸಲ್ಮಾನರು ನೂರು ಹಿಂದುಗಳನ್ನು ಮುತ್ತುವದು ಮತ್ತು ಅವರನ್ನು ಛಲಿಸುವದೇನೂ ಶೌರ್ಯವಲ್ಲ. ಹೇಡಿತನವು. ಶಿಷ್ಟಸಮ್ಮತ ಹೋರಾಟದಲ್ಲಿ ಎರಡು ಪಕ್ಷಗಳ ಸಂಖ್ಯೆ ಸಮವಾಗಿರತಕ್ಕದ್ದು. ಹೋರಾಟದ ಬಗ್ಗೆ ಪೂರ್ವಸೂಚನೆ ಕೊಟ್ಟಿರಬೇಕು ಹೀಗೆ ಹೇಳಿದ ಮಾತ್ರಕ್ಕೆ ಹೋರಾಟವನ್ನು ಎತ್ತಿ ಹಿಡಿಯುತ್ತೇನೆಂದು ಅರ್ಥವಲ್ಲ. ಹಿಂದು ಮುಸಲಾನರು ಮಿತ್ರರಂತೆ ಇರಲಾರರು, ಪರಸ್ಪರರು ಸಹಕರಿಸಲಾರರು ಎಂದು ಹೇಳಲಾಗುತ್ತದೆ. ಯಾರೂ ಅದನ್ನು ನಂಬುವಂತೆ ನನ್ನ ಮನವಲಿಸಲಾರರು. ಆದರೆ ನಿಮ್ಮ ನಂಬಿಕೆ ಹಾಗೆ ಇದ್ದರೆ ನೀವು ಹಾಗೆ ಹೇಳಿರಿ. ಹಾಗಿದ್ದರೆ ಹಿಂದುಗಳಿಗೆ ತಿರುಗಿ ತಮ್ಮ ಮನೆಗಳಿಗೆ ಬನ್ನಿರೆಂದು ನಾನು ಕೇಳಿಕೊಳ್ಳುವುದಿಲ್ಲ. ಅವರು ಪೂರ್ವ ಬಂಗಾಲವನ್ನು ಬಿಟ್ಟುಬಿಡಲಿ. ಹಿಂದೂ ಮುಸಲ್ಮಾನರಿಬ್ಬರಿಗೂ ಅದು ನಾಚಿಗೆಗೇಡಾದ ಮಾತಾಗುವದು. ಆದರೆ ತದ್ವಿರುದ್ಧವಾಗಿಹಿಂದುಗಳು ನಿಮ್ಮಲ್ಲಿಯೇ ಇರಬೇಕೆಂದು ನೀವು ಬಯಸುತಿದ್ದರೆ ಸಂರಕ್ಷಣೆಗಾಗಿ ಸೈನಿಕರ ಸಹಾಯವನ್ನಪೇಕ್ಷಿಸಬೇಡಿರೆಂದು ಅವರಿಗೆ ಹೇಳಿರಿ. ಅವರ ಬದಲು ಮುಸಲ್ಮಾನ ಗೆಳೆಯರ ಸಂರಕ್ಷಣೆಯನ್ನೇ ನಂಬಿರೆಂದು ಹೇಳಿರಿ. ಅವರ ಹೆಣ್ಣು ಮಕ್ಕಳು ಅಕ್ಕ ತಂಗಿ ಮತ್ತು ತಾಯಿ ನಿಮ್ಮ ಹೆಣ್ಣು ಮಕ್ಕಳು ಅಕ್ಕತಂಗಿ ಮತ್ತು ತಾಯಿಯೆಂದು ಭಾವಿಸಿರಿ. ನಿಮ್ಮ ಜೀವವಿರುವ ವರೆಗೆ ಅವರ ಸಂರಕ್ಷಣೆ ಮಾಡಿರಿ. ನಿನ್ನೆಯ ದಿನ ಪರಿಹಾರ ಕೇಂದ್ರದಲ್ಲಿ ನಾನು ಅವರನ್ನುದ್ದೇಶಿಸಿ ಭಾಷಣ ಮಾಡಿದೆ. ಅದಾಮು ಮತ್ತು ಈವ ಇವರಿಂದಲೆ ಮಾನವ ಜಾತಿಯಲ್ಲ ಉತ್ಪನ್ನವಾಗಿದ್ದರಿಂದ ಎಲ್ಲರೂ ಒಂದೇ ಕುಟುಂಬದ ಪರಿವಾರದವರು. ಜನಾಂಗ ಜಾತಿ ಧರ್ಮ ಯಾವದೇ ಇದ್ದರು ನಾವೆಲ್ಲ ಅಪ್ತಬಂಧುಗಳೇ ಎಂದು ಜಿಲ್ಹಾ ಮ್ಯಾಜಿಸ್ಟ್ರೇಟ ಶ್ರೀ ಎನ್. ಸಿ. ಇನೆರ್ನಿಯವರು ಅವರಿಗೆ ಉಪದೇಶಿಸಿದರು. ಅದುದರಿಂದ ಎಲ್ಲರೂ ಬಾಂಧವರಂತೆ ಕೂಡಿಯೇ ಇರತಕ್ಕದ್ದು.

"ನಿನ್ನೆ ಸಾಯಂ ಪ್ರಾರ್ಥನಾ ಸಭೆಯ ನಂತರ ಒಬ್ಬನು ತನ್ನ ಹಳ್ಳಿಗೆ ಮರಳಿ ಬಂದಿರುವನೆಂದು ಹೇಳಲಾಗುತ್ತದೆ. ಮುಸ್ಲಿಂರಿಂದ ಅವನ ಮನೆ ಮುತ್ತಲ್ಪಟ್ಟದ್ದು ಅವನಿಗೆ ಕಂಡುಬಂತು. ತನ್ನ ಸಾಮಾನುಗಳನ್ನು ತೆಗೆದುಕೊಳ್ಳಲು ಕೂಡ ಅವನಿಗೆ ಬಿಡಲಿಲ್ಲ. (ಇದೆಲ್ಲ ನಿಜವಿದ್ದರೆ) ಮರಳಿ ಹಳ್ಳಿಗಳಿಗೆ ಹೋಗಿರೆಂದು ನಾನು ಅವರಿಗೆ ಹೇಗೆ ಹೇಳಲಿ. ನಾನು ಹೇಳಿದ್ದರ ಬ್ಗಗ್ಗೆ ನೀವು ವಿಚಾರ ಮಾಡಿರಿ. ಮತ್ತು ನಿಮಗೆ ನಿಜವಾಗಿ ಏನು ಎನಿಸುತಿದೆಂಬದನ್ನು ತಿಳಿಸಿರಿ. ಅದರಂತೆಯೇ ನಾನು ಹಿಂದುಗಳಿಗೆ ಉಪದೇಶಿಸುತ್ತೇನೆ.

ಹಿಂದುಗಳು ತಮ್ಮ ಮಧ್ಯದಲ್ಲಿ ಮತ್ತೆ ಬರಲಿ ಎಂದು ಹೇಳುವ ಅನೇಕ ಮುಸಲ್ಮಾನರಿರುವರೆಂದು ನನಗೆ ಹೇಳಲಾಗುತ್ತದೆ. ನನಗೂ ಈ ಹೇಳಿಕೆಯಲ್ಲಿ ನಂಬಿಕೆ. ಒಳ್ಳೆ ಮುಸಲ್ಮಾನರೆಲ್ಲ ಒಂದೇ ದನಿಯಿಂದ ಹೀಗೆ ಹೇಳಿ ಅದರಂತೆ ರ್ತಿಸವಹತ್ತಿದರೆ ಪುಂಡರೆಂದಿನಿಸಿಕೊಳ್ಳುವವರೆಲ್ಲ ನಿರ್ಪಾಲ್ಯರಾದಂತಾಗಿ ತಮ್ಮ ಮಾರ್ಗವನ್ನು ತಿದ್ದಿಕೊಳ್ಳುವರೆಂದು ನಾನು ನಿಮಗೆ ಹೇಳಬಯಸುತ್ತೇನೆ.

ಕಾಜಿರಖಿಲ್ —ಪ್ಯಾರೇಲಾಲ

೧೬—೧೧—೪೬

## ಮಹಾತ್ಮರ ಉಪದೇಶದ ಸುಪರಿಣಾಮ

ತಾ॥ ೨೬ಕ್ಕೆ ಮಹಾತ್ಮರ ಪ್ರಾರ್ಥನೆ ಸಭೆಯು ಶ್ರೀ ರಾಮಪುರದಲ್ಲಿ ನಡೆಯಿತು. ಮಹಾತ್ಮರು ಭಾಷಣ ಮಾಡುತ್ತ ಈ ರೀತಿ ಹೇಳಿದರು.

"ಹಳ್ಳಿಯಲ್ಲಿ ಉಳಿದವರೆಲ್ಲರೂ ಮುಸಲ್ಮಾನರಿದ್ದು ಹಿಂದುವೆಂದರೆ ನಿರಾಶ್ರಿತನಾದವನೊಬ್ಬನೇ ಇದ್ದರೂ ಅವನಿಗೂ ನಾನು ತಿರುಗಿ ಹೋಗಲು ಉಪದೇಶಿಸುವೆನು. ಸ್ತ್ರೀಯಾಗಲೀ ಇರಲಿ ಗಂಡಸರೇ ಇರಲಿ ಅವರು ಧೀರರಾಗ ಬೇಕಾದರ ಈ ತರದ ಧೈರ್ಯ ಅನಿವಾರ್ಯವಿರುವದು. ದೈವ ಪರೀಕ್ಷೆಯ ಔಚಿತ್ಯವನ್ನು ಪ್ರಶ್ನಿಸಿ ನನಗೆ ಅನೇಕರಿಂದ ಪತ್ರಗಳು ಬಂದಿವೆ. ಆದರೆ ನಾವು ಸ್ವಾಭಿಮಾನಿಗಳಾಗಬೇಕಾದರೆ ಇದು ಅವಶ್ಯವಿರುವದು ಸ್ತ್ರೀ ಹಾಗು ಪುರುಷರಲ್ಲಿ ನಾನು ಭೇದ ಎಣಿಸುವದಿಲ್ಲ. ಪುರುಷರಷ್ಟೇ ತಾವು ಸ್ವತಂತ್ರರಿರುವದಾಗಿ ಸ್ತ್ರೀಯರು ಭಾವಿಸಬೇಕು. ಶೌರ್ಯವನ್ನು ಪುರುಷರಿಗಷ್ಟೇ ಗುತ್ತಿಗೆ ಕೊಟ್ಟಿಲ್ಲ. ಪರರನ್ನವಲಂಬಿಸುವದು ಆತ್ಮರಕ್ಷಣೆಯೆನಿಸದು. ತಮ್ಮನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ ಜನರು ಸ್ವಾಭಿಮಾನವನ್ನೇ ಮರೆತು ಬಿಡಹತ್ತಿದ್ದಾರೆ. ತಮ್ಮ ಮಾನ ಹಾಗು ತಮ್ಮ ಆಸ್ತಿ ರಕ್ಷಣೆಗಾಗಿ ಜೀವ ಅರ್ಪಿಸಲು ಹಿಂದೆ ಮುಂದೆ ನೋಡುವವರು ಸ್ವರಾಜ್ಯ ಹಾಗು ಸ್ವದೇಶಿಗೆ ಅರ್ಹರಿರುವದಿಲ್ಲ. ನಿರಾಶ್ರಿತರು ತಮ್ಮ ಹಳ್ಳಿಗಳಿಗೆ ತಿರುಗಿ ಬಂದು ಬಹುಸಂಖ್ಯಾಕ ಮುಸಲ್ಮಾನರಲ್ಲಿ ನಿಶ್ಚಿಂತೆಯಿಂದ ಇರಬೇಕೆಂದು ಮಂತ್ರಿಗಳು ಉಪಮಂತ್ರಿಗಳು ಇಸ್ಲಾಂಹಾಗು ತಮ್ಮ ಗೌರವದ ದೃಷ್ಟಿಯಿಂದ ವಿನಂತಿಸಹತ್ತಿರುವರು. ಅವರ ಮಾತಿನಲ್ಲಿ ವಿಶ್ವಾಸವಿಟ್ಟು ತಿರುಗಿ ಹೋಗಬೇಕು. ವಿಶ್ವಾಸದಿಂದ ನಡೆಯುವವರು ಎಂದೂ ನಷ್ಟಕ್ಕೊಳಗಾಗರು. ಇಸ್ಲಾಮು, ಹಿಂದು ಮೊದಲಾದ ಯಾವದೇ ನಿಜವಾದ ಧರ್ಮದಲ್ಲಿ ಪುಂಡತನಕ್ಕೆ ಅವಕಾಶವಿಲ್ಲ."

ಮಹಾತ್ಮಾ ಗಾಂಧಿಯವರು ಶ್ರೀರಾಮಪೂರಕ್ಕೆ ಬಂದು ೨೬ಕ್ಕೆ ಒಂದು ವಾರವಾಯಿತು. ಹಳ್ಳಿಗರೊಡನೆ ಅವರು ಬೆಳಸಿಕೊಂಡ ಸಂಬಂಧ ಮುಸಲ್ಮಾನರ ಮನೆಗಳಿಗೆ ಹೋಗಿ ಭೆಟ್ಟಿಕೊಟ್ಟದುದು ಹಾಗು ಶಾಂತತೆ ಪ್ರಸ್ಥಾಪಿತವಾದ ಹೊರತು ನೌಖಾಲಿಯಿಂದ ತಿರುಗಿಹೋಗುವದಿಲ್ಲೆಂದು ಮೇಲಿಂದ ಮೇಲೆ ಹೇಳುತ್ತ ಬಂದಿದ್ದುದು ನಿರಾಶ್ರಿತರ ಶಿಬಿರಗಳಲ್ಲಿರುವ ಕೆಲವು ನಿರಾಶ್ರಿತರ ಮೇಲೆ ಒಳ್ಳೆ ಪರಿಣಾಮ ಉಂಟು ಮಾಡಿದಂತೆ ತೋರುವದು. ಜಿಲ್ಲೆಯನ್ನು ಬಿಟ್ಟು ಹೋಗಲು ಸಿದ್ಧತೆ ನಡೆಸಿದ ಕೆಲವರು ಈಗ ಆ ವಿಚಾರವನ್ನು ಬಿಟ್ಟುಗೊಟ್ಟು ಪ್ರತಿ ದಿವಸ ಹಗಲಿನಲ್ಲಿ ತಮ್ಮ ಹೆಂಗಸರನ್ನು ನಿರಾಶ್ರಿತರ ಶಿಬಿರದಲ್ಲಿಯೇ ಬಿಟ್ಟು ಮನೆಗಳಿಗೆ ಹೋಗಿ ಬರುತ್ತಿರುವರು. ಒಮ್ಮೊಮ್ಮೆ ರಾತ್ರಿಯನ್ನೂ ಅಲ್ಲಿಯೆ ಕಳೆಯುವರು. ರಾಮಗಂಜದಿಂದ ಶ್ರೀರಾಮಪುರ ವರೆಗಿನ ಹಾದಿಯ ಎರಡೂಬೀದಿಗಳಲ್ಲಿ ಕೆಲವರು ಈಗ ಮನೆಗಳನ್ನು ಪುನಃ ಕಟ್ಟಿಕೊಳ್ಳುವದನ್ನು ಪ್ರಾರಂಭಿಸಿದ್ದಾರೆ. ಮೊದಲಿನ ಮನೆಗಳು ಧ್ವಂಸವಾದ ಸ್ಥಳಗಳಲ್ಲಿಯೇ ಮುಸಲ್ಮಾನರು ಮನೆ ಕಟ್ಟಿಕೊಡುತ್ತಿರುವ ಉದಾಹರಣೆಗಳೂ ಮಹಾತ್ಮರ ಕಿವಿಗೆ ಬಂದಿರುವವು. ಆದರೆ ಸಮಸ್ಯೆಯು ಇನ್ನೂ ಗಡುಚಾಗಿರುವದು.

ಮಹಾತ್ಮಾ ಗಾಂಧಿಯವರು ೨೬ ರ ಸಂಜೆಯಲ್ಲಿ ಅಡ್ಡಾಡಲು ಹೋದಾಗ ಸಮೀಪದ ಹಳ್ಳಿಯ ದೇವಾಲಯದಲ್ಲಿಯ ಗಂಟೆಯ ಸಪ್ಪಳ ಕೇಳಬಂತು. ಗಲಭೆ ಸುರುವಾದಂದಿನಿಂದ ಗಂಟೆ ಸಪ್ಪಳ ಕೇಳಬಂದದು ಇದೇ ಮೊದಲನೆಯದೆಂದು ಹಳ್ಳಿಗರು ಮಹಾತ್ಮರಿಗೆ ತಿಳಿಸಿದರು.

## ಜವಾಹರಲಾಲ--ಬಲದೇವಸಿಂಗ ಲಂಡನಿಗೆ ಹೋಗುವರು

ಬ್ರಿಟಿಶ್ ಮುಖ್ಯಮಂತ್ರಿ ಅಟ್ಲಿಯವರೊಡನೆ ನಡೆದ ತಂತಿವಿಚಾರವಿನಿಮಯದ ಪರಿಣಾಮವಾಗಿ ಕಾಂಗ್ರೆಸ್ಸು ಲಂಡನ್ ಪರಿಷತ್ತಿಗೆ ಹೋಗಲು ನಿರ್ಧರಿಸಿದೆ. ಪಂಡಿತ ಜವಾಹರಲಾಲ ಮತ್ತು ಸರದಾರ ಬಲದೇವಸಿಂಗ ಇವರು ೩೦ ನೇ ದಿನಾಂಕ ಮಧ್ಯಾಹ್ನ ವೈಸರಾಯರ ಗೂಡ ಲಂಡನ್ನಿಗೆ ತೆರಳುವರೆಂದು ನಿಶ್ಚಿತವಾಗಿ ತಿಳಿಯುತ್ತದೆ. ಕಾರ್ಯದರ್ಶಿ ಮೊದಲಾದವರು ಕೂಡಿ ಒಟ್ಟಿಗೆ ೧೨ ಜನ ಲಂಡನಿಗೆ ಹೋಗುವರು. ಬ್ಯಾ. ಜಿನ್ನಾ ಕರಾಚಿಯಲ್ಲಿ ಇವರನ್ನು ಕೂಡಿಕೊಳ್ಳುವರು.



## ವಾರದ ಪತ್ರ

ನೌಖಾಲಿ ಜಿಲ್ಹೆಯಲ್ಲಿ ಇಂದು ಎಲ್ಲಿ ಹೋದರೂ ಪಚ್ಚಹಸುರಿನ ಭತ್ತದ ಗದ್ದೆಗಳು ಕಣ್ಣುಗಳನ್ನು ಸೂರೆಗೊಳ್ಳುವವು. ಈ ವರ್ಷ ಬಂದಂಥ ಸಮೃದ್ಧವಾದ ಪೈರು ಕಳೆದ ಹನ್ನೆರಡು ವರ್ಷಗಳಲ್ಲಿ ಬಂದಿದ್ದಿಲ್ಲ. ಆದರೆ ಪ್ರಕೃತಿಯ ಉದಾರತೆಯನ್ನು ಮನುಷ್ಯನ ಹಿಂಸ್ರ ಕ್ರೌರ್ಯ ಹಾಳು ಗೆಡಿದೆ. ತೆನೆಯೊಡೆದು ಕೊಯ್ಲಿಗೆ ಬಂದಿದೆ. ಕೊಯ್ದು ರಾಶಿಮಾಡಲು ಅದನ್ನು ಬಿತ್ತಿದವರು ಅಲ್ಲಿ ಇಲ್ಲ. ಕೆಲವರನ್ನು ಕೊಂದುಹಾಕಲಾಗಿದೆ. ಉಳಿದವರು ಸುರಕ್ಷಿತೆಗಾಗಿ ಬೇರೆ ಬೇರೆ ನಿರಾಶ್ರಿತ ಶಿಬಿರಕ್ಕೆ ಓಡಿಹೋಗಿದ್ದಾರೆ.

ನಿರಾಶ್ರಿತರ ಪುನರ್ನಿವೇಶದ ಪ್ರಶ್ನೆ ಅಧಿಕಾರಿಗಳನ್ನೂ ಬೇರೆ ಬೇರೆ ಪರಿಹಾರ ಸಂಸ್ಥೆಗಳನ್ನೂ ಸೇರಿಯೆ ಪೀಡಿಸುತ್ತದೆ. ಅವರು ತಮ್ಮ ತೌರೂರಿಗೆ ಮರಳಿದಿದ್ದರೆ ತಮ್ಮ ಭತ್ತದ ಹಾಗು ಅಡಿಕೆಯ ಪೈರನ್ನು ಕಳೆದುಕೊಳ್ಳಬಹುದು. ಅವರಿಲ್ಲದಾಗ ಉಳಿದವರು ಅದನ್ನು ಎತ್ತಿ ಹಾಕಿಬಿಡಬಹುದು. ಈ ಸಮಸ್ಯೆ ತೊಡಕಿನಿಂದ ಸುಕ್ಕುಸುಕ್ಕಾಗಿದೆ. ತಲೆಯ ಮೇಲೊಂದು ಸೂರು ಕೂಡ ಇಲ್ಲದೆ ಅವರು ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಉಳಿಯಲು ಮನೆ ಕೂಡ ಇಲ್ಲದವರಾಗಿದ್ದಾರೆ. ಹೊಟ್ಟೆಯ ಪಾಡಿಲ್ಲದೆ, ತಾವು ಹೋಗಬೇಕಾದರೂ ಎಲ್ಲಿ, ಎನ್ನುತ್ತಾರೆ ಅವರು. ಎಲ್ಲಕ್ಕೂ ಮಿಗಿಲಾಗಿ, ತಾವು ತಮ್ಮ ಹಳ್ಳಿಗಳಿಗೆ ಮರಳಿದರೆ ಅಲ್ಲಿ ಅವರು ನಿರ್ಭಯರಾಗಿರಬಹುದೆಂಬ ಭರವಸೆಯಾದರೂ ಏನು? ಈ ಭೀತಿಯ ವಾತಾವರಣವನ್ನು ತಿಳಿಗೊಳಿಸಿ ಪರಸ್ಪರ ವಿಶ್ವಾಸ ಸೌಹಾರ್ದಗಳನ್ನು ಪುನಃ ಸ್ಥಾಪಿಸುವದೇ ಸಮಸ್ಯೆಗಳ ಸಮಸ್ಯೆ.

### ಗೋಪೇರ ಭಾಗದ ದುರಂತ

ತಾ ೮ ಮುಂಜಾನೆ ಉಪಮಂತ್ರಿಗಳಾದ ನಸರುಲ್ಲಾ ಸಾಹೇಬ ಮತ್ತು ಅಬ್ದುರ್ರಶೀದ ಸಾಹೇಬರ ಸಂಗಡ ನೌಖಾಲಿಯ ಜಿಲ್ಹಾ ಮ್ಯಾಜಿಸ್ಟ್ರೇಟ ಹಾಗು ಪೋಲೀಸ ಸುಪರಿಂಟೆಂಡೆಂಟರಾದ ಶ್ರೀ ಮ್ಯಾಕಇನರ್ನಿಯವರಿಂದೊಡಗೂಡಿ ಚೌಮುಹಾನಿಯಿಂದ ಗೋಪೇರ ಭಾಗ ಗ್ರಾಮಕ್ಕೆ ಮೋಟಾರಿನಲ್ಲಿ ಬಂದರು. ಇಲ್ಲಿ ತುತ್ತತುದಿಯಲ್ಲಿ ಒಂದನ್ನೊಂದು ಚುಂಬಿಸುವಂತೆ ಕಾಣುವ ನಿಬಿಡವಾದ ಅಡಿಕೆ ಮರಗಳ ತೋಟಗಳ ಮರೆಯಲ್ಲಿ ಹಿಂದೂ ಕುಟುಂಬಗಳಿದ್ದ ಐದು ಗುಂಪಾದ ಗುಡಿಸಲುಗಳಿವೆ. ಅವುಗಳ ಸುತ್ತ ಅದರ ಇಪ್ಪತ್ತರಷ್ಟು ಮುಸ್ಲಿಂ ವಸತಿಗಳಿವೆ. ಈ ಹಿಂದೂ ಗುಡಿಸಲುಗಳಲ್ಲಿ ಒಂದು ಪಟವಾಡಿಯ ಮನೆಯುಂಟು. ರೇಶಿಮೆ ಬಟ್ಟೆಯಂಥ ಎಳೆ ಬಾಳೆಯ ಸುಳಿಗಳು ಅಚ್ಚನೀಲ ಆಕಾಶದಡಿಯಲ್ಲಿ ಕಮಾನುಗಳನ್ನು ರಚಿಸಿವೆ. ಪ್ರಕೃತಿ ಸೌಂದರ್ಯ ಎಲ್ಲೆಡೆಯಲ್ಲಿಯೂ ಮೆರೆಯುತಿದೆ. ಗಾಳಿ ತಂಪಾಗಿತ್ತು. ಆದರೆ ಕಣ್ಮುಂದೆ ಬಂದ ಮಾನವೀ ದೃಶ್ಯಮಾತ್ರ ರಕ್ತವನ್ನು ಹೆಪ್ಪುಗಟ್ಟಿಸುವಂತಿತ್ತು. ಅಲ್ಲಿ ಕೊಲೆಗಳಾಗಿದ್ದವು, ಕೊಳ್ಳೆಯ ಲೀಲೆ ಕಾಣುತಿತ್ತು. ದೇವರ ಗುಡಿಯನ್ನು ಮೈಲಿಗೆ ಮಾಡಲಾಗಿತ್ತು. ಕೊಲೆಯಾದವರನ್ನು ಅಂಗಳದ ಒಂದು ಮೂಲೆಯಲ್ಲಿ ಒಟ್ಟಿ ಸುಡಲಾಗಿತ್ತು. ಹಿಂದೊಮ್ಮೆ ರಕ್ತ ಮಾಂಸಮಯವಾಗಿದ್ದುದರ ಗರಿಕಿದಅವಶೇಷಗಳು ಭಯಾನಕವಾದ ಆ ದುರಂತದ ಸಾಕ್ಷಿಗಳಾಗಿ ತೋರುತ್ತಿದ್ದವು. ಕೆಲ ಮನೆಗಳ ಮೆಟ್ಟಿಲುಗಳಲ್ಲಿ ರಕ್ತದ ಕಲೆಗಳಿದ್ದವು. ಎಷ್ಟೋ ಮನೆಗಳ ಕಚ್ಚಾ ನೆಲವನ್ನು, ಹುದುಗಿಹುದಾದ ದ್ರವ್ಯವನ್ನೋ ಒಡವೆಗಳನ್ನೋ ಹುಡುಕಲೆಂದಿರಬೇಕು. ಅಗೆಯಲಾಗಿತ್ತು. ಮೃತ್ಯುವಿನ ದುರ್ಗಂಧ ಇನ್ನೂ ಇಲ್ಲಿ ಇಡುಗಿತ್ತು. ಅದೊಂದು ವಿಧ್ವಂಸದ ಚಿತ್ರವೇ ಆಗಿತ್ತು. ಆ ಮನೆಯಿಂದ ಮೂವರು ಹುಡುಗಿಯರು ಅಪಹರಿಸಲ್ಪಟ್ಟಿದ್ದರು. ಅವರಲ್ಲಿಬ್ಬರ ಪತ್ತೆ ಇನ್ನೂ ಹತ್ತಿದ್ದಿಲ್ಲ.

### ದತ್ತಪಾರಾ

ಸಂಜೆ ಹಿಂದಿರುಗುತ್ತ ಗಾಂಧೀಜಿ ದತ್ತಪಾರಾದ ದಿವಾನಬಾಡಿಯಲ್ಲಿ ತಡೆದರು. ಬುದ್ಧಿವಂತಿಕೆ, ಪ್ರಸಂಗಾವಧಾನಗಳೂ ಪೂರ್ವಪುಣ್ಯವೂ ಸೇರಿ ಅಲ್ಲಿಯ ದಿವಾನಜಿ ಕುಟುಂಬಕ್ಕೊದಗಿದಂಥ ಗತಿಯಿಂದ ಪಾರು ಮಾಡಿದ್ದವು. ಆ ಸ್ಥಳವೇ ಈಗ ಸುಮಾರು ೬೦೦೦ ನಿರಾಶ್ರಿತರನ್ನೊಳಗೊಂಡ ನಿರಾಶ್ರಿತ ಶಿಬಿರವಾಗಿ ಮಾರ್ಪಟ್ಟಿದೆ. ಗಾಂಧೀಜಿಯವರು ಜಿಲ್ಹೆಯ ಅಧಿಕಾರಿಗಳೊಡನೆ ನಿರಾಶ್ರಿತರನ್ನು ಅವರವರ ಊರುಗಳಿಗೆ ಕಳಿಸುವ ಪ್ರಶ್ನೆಯನ್ನು ಚರ್ಚಿಸಿದರು. ಕೆಲ ಸ್ಥಾನಿಕ ಮುಸ್ಲಿಂ ಲೀಗ್ ಸದಸ್ಯರೂ ಆಮಂತ್ರಿಸಲ್ಪಟ್ಟಿದ್ದು ಅವರೂ ಚರ್ಚೆಯಲ್ಲಿ ಭಾಗ ವಹಿಸಿದ್ದರು.

ಅಂದು ಸಂಜೆ ಗಾಂಧೀಜಿಯವರು ಹಿಂದೂ ಮುಸ್ಲಿಮರ ಸಭೆಯೊಂದರಲ್ಲಿ ಮಾತಾಡುತ ಹಿಂದೂಗಳು ತಮ್ಮ ಮನೆಗಳನ್ನು ಬಿಟ್ಟು ಓಡಿ ಹೋಗಬೇಕಾಗಿ ಬಂದದ್ದು ಹಿಂದೂ ಮುಸ್ಲಿಮರಿಬ್ಬರಿಗೂ ನಾಚಿಕೆಗೇಡೆಂದು ನುಡಿದರು. ಮುಸ್ಲಿಮರ ಭಯದಿಂದಲೇ ಹಿಂದುಗಳಿಗೆ ಓಡಿ ಹೋಗಬೇಕಾಗಿ ಬಂತೆಂಬುದು ಮುಸ್ಲಿಮರಿಗೆ ಲಜ್ಜಾವಹವಾಗಿದೆ. ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಭೀತಿಪ್ರದನೇಕಾಗಬೇಕು? ಈ ಪ್ರಕಾರ ಭೀತಿಯ ಕೈಯಲ್ಲಿ ಬುದ್ಧಿಯನ್ನು ಕೊಟ್ಟದ್ದು ಹಿಂದೂಗಳಿಗೇನು ಕಡಿಮೆ ನಾಚಿಕೆಯ ಸಂಗತಿಯಲ್ಲ. ಮನುಷ್ಯನು ಪರಮಾತ್ಮನೊಬ್ಬನಿಗಲ್ಲದೆ ಬೇರಾರಿಗೂ ಭಯಪಡತಕ್ಕದ್ದಲ್ಲೆಂದು ತಾವು ಯಾವಾಗಲೂ ಹೇಳುತ್ತ ಬಂದಿರುವದಾಗಿ ಗಾಂಧೀಜಿ ಹೇಳಿದರು. ತಮ್ಮೊಡನೆ ಬಂದಿದ್ದ ಸರಕಾರಿ ಅಧಿಕಾರಿಗಳೆಲ್ಲರಿಗೂ ಜನರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂಬ ಅಪೇಕ್ಷೆಯುಂಟೆಂದೂ ಅವರು ಹೇಳಿದರು. ಒಂದೇ ಸ್ಥಳದಲ್ಲಿ ಸಾವಿರಗಟ್ಟಿ ಜನರಿಗೆ ಅನ್ನ ವಸ್ತ್ರಗಳನ್ನೊದಗಿಸುವದು ಸರಕಾರಕ್ಕೆಷ್ಟೋ ಅಷ್ಟೇ ನಿರಾಶ್ರಿತರಿಗೂ ತ್ರಾಸದಾಯಕವಾದುದು. ತಮ್ಮ ಅಧಿಕಾರಕ್ಷೇತ್ರದಲ್ಲಿ ಇಂಥ ಸಂಗತಿಗಳು ಜರುಗಿದ್ದರಿಂದ ಅಧಿಕಾರಿಗಳಿಗೆ ನಾಚಿಕೆಯಾಗಿದೆ. ನೌಖಾಲಿ, ತಿಪ್ಪೇರಾಗಳಲ್ಲಿ ನಡೆದುದನ್ನೆಲ್ಲ ಮರೆತು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕೆಂದು ಅವರು ಕೇಳಿಕೊಂಡರು. ಅಂದ ಮಾತ್ರಕ್ಕೆ ಜನರು ಹೇಡಿಗಳಾಗಬೇಕೆಂದು ಅರ್ಥವಲ್ಲ. ಆದರೆ ಆಗಿ ಹೋದ ಅಪ್ರಿಯ ಸಂಗತಿಗಳನ್ನು ನೆನೆಯುತ್ತ ಕೂಡುವದರಲ್ಲಿ ಲಾಭವಿಲ್ಲ. ಈ ಭಾಗದ ಹಿಂದೂಗಳೂ ಮುಸ್ಲಿಮರೂ ಮತ್ತೆ ಪರಸ್ಪರ ಸ್ನೇಹಿತರಾಗಲೆಂದು ಪ್ರಾರ್ಥಿಸುತ್ತಿದ್ದೇನೆಂದು ಗಾಂಧೀಜಿಉಸುರಿದರು. ಹಿಂದುಗಳು ಬಹಳ ಸಂಕಷ್ಟಪಟ್ಟಿದ್ದಾರೆಂದೂ ಇನ್ನೂ ಅವರ ಸಂಕಷ್ಟ ಮುಗಿದಿಲ್ಲೆಂದೂ ಅವರು ಒಪ್ಪಿದರು. "ನಿದಾನ ಒಬ್ಬ ಸಜ್ಜನ ಮುಸ್ಲಿಮನೂ ಒಬ್ಬ ಸಜ್ಜನ ಹಿಂದುವೂ ಪ್ರತಿ ಹಳ್ಳಿಯಲ್ಲಿ ನಿಮ್ಮ ಸುರಕ್ಷಿತತೆಗೆ ಹೊಣೆಯಾಗಿ ನಿಂತು ನಿಮ್ಮನ್ನು ಕರೆಯಬಂದ ಹೊರತು ನಿಮ್ಮ ಹಳ್ಳಿಗಳಿಗೆ ಮರಳಿರೆಂದು ನಾನು ಹೇಳಲಾರೆ. ಅವಶ್ಯಕ ಭರವಸೆಯನ್ನು ಕೊಡಬಲ್ಲ ಹಿಂದೂ ಮುಸ್ಲಿಂ ಸಜ್ಜನರು ಈ ಭಾಗಗಳಲ್ಲಿ ಬೇಕಾದಷ್ಟು ಇರುವರೆಂದು ನನಗೆ ಖಚಿತವಾಗಿ ಗೊತ್ತಿದೆ."

ಸಭೆಯಲ್ಲೊಬ್ಬ ಮುಸ್ಲಿಮ ಗೆಳೆಯನು ಎದ್ದು ನಿಂತು ತಾವು ಈಗಾಗಲೆ ಅವರನ್ನು ನೋಡಿಕೊಳ್ಳುವದಾಗಿ ಭರವಸೆಕೊಟ್ಟಿದ್ದರೂ ಹಿಂದೂಗಳು ಕಿವಿಗೊಡಲೊಲ್ಲರೆಂದು ಹೇಳಿದನು. ಹಿಂದೂಗಳ ಅವಿಶ್ವಾಸದ ಮೂಲವನ್ನು ಅರಿತು ಅದನ್ನು ಹೋಗಲಾಡಿಸಲು ಮುಸ್ಲಿಮರು ಪ್ರಯತ್ನಿಸಬೇಕೆಂದು ಗಾಂಧೀಜಿ ಉತ್ತರವಿತ್ತರು. ಹಿಂದೂ ನಿರಾಶ್ರಿತ ಸಭಿಕನೊಬ್ಬನು ಎದ್ದು ಮುಸ್ಲಿಮರ ಭರವಸೆಯಲ್ಲಿ ಇನ್ನು ವಿಶ್ವಾಸವಿಡುವ ಬಗೆಯಾದರೂ ಹೇಗೆಂದು ಕೇಳಿದನು; ಉಪದ್ರವಸನ್ನಿಹಿತವಾಗಿದ್ದಾಗ ಅವರು ರಕ್ಷಣೆಯ ಅಶ್ವಾಸನೆ ಕೊಟ್ಟದ್ದರು. ಆದರೆ ಗಂಡಾಂತರ ಬಂದಮೇಲೆ ತಮ್ಮ ವಚನವನ್ನು ನಡೆಸಲು ತಪ್ಪಿದರು. ಇದಲ್ಲದೆ ತಾವು ಹೋಗಿ ಉಳಿದುಕೊಳ್ಳಬೇಕಾದರೂ ಎಲ್ಲಿ? ತಮ್ಮ ಸರ್ವಸ್ವವೂ ನಷ್ಟವಾಗಿದೆ. ಹೋಗಿ ತಾವು ಅಡವಿಯಲ್ಲಿ ಉಳಿದುಕೊಳ್ಳಬೇಕೆ? ಮತ್ತು ಹಿಂದೊಮ್ಮೆ ತಮ್ಮನ್ನು ಹಳ್ಳಿಯಲ್ಲಿದ್ದ ಐವತ್ತು ಜನ ಮುಸ್ಲಿಂ ಸಜ್ಜನರು ಕಾಪಾಡಲಾರದೆ ಹೋಗಿರುವಾಗ ಈಗ ಒಬ್ಬ ಮುಸ್ಲಿಮನು ರಕ್ಷಿಸಬಲ್ಲನೆಂದು ನಂಬುವದು ಹೇಗೆ? ಉತ್ತರ ಕೊಡುತ್ತ ಗಾಂಧೀಜಿ "ನಿಮ್ಮ ಗುಡಿಸಲುಗಳನ್ನು ಸರಕಾರವೇ ಮತ್ತೆ ಕಟ್ಟಿಸಿಕೊಡುವದು. ನೀವು ಮನೆಗೆ ಮರಳಿದಾಗ ನಿಮ್ಮ ಅನ್ನ ವಸ್ತ್ರಗಳನ್ನೂ ನೋಡಿಕೊಳ್ಳುವದು. ಹಿಂದೆ ಏನೇ ಜರಗಿರಲಿ, ಈಗ ಒಬ್ಬ ಸಜ್ಜನ ಮುಸ್ಲಿಂ ಮತ್ತು ಒಬ್ಬ ಸಜ್ಜನ ಹಿಂದೂವಿನ ರಕ್ಷಣೆಯ ಆಶ್ವಾಸನವಿದ್ದರೆ ಅದನ್ನು ನೀವು ನಂಬಬಹುದು. ಏಕೆಂದರೆ ಆದರ ಹಿಂದೆ ಆ ಹಳ್ಳಿಯಲ್ಲಿರುವ ಎಲ್ಲ ಮುಸ್ಲಿಮರ ಸಾಮೂಹಿಕ ಬೆಂಬಲ ಅದಕ್ಕಿದೆಯೆಂದು ಪರಿಗಣಿಸಬಹುದು," ಎಂದು ಉಪದೇಶಿಸಿದರು.

ಮರುದಿನ, ಒಳನಾಡಿನಲ್ಲಿರುವ ಇನ್ನೂ ಹೆಚ್ಚು ಸಂತ್ರಸ್ತವಾದ ಹಳ್ಳಿಗಳನ್ನು ಸಂದರ್ಶಿಸುವ ಸಲುವಾಗಿ, ಗಾಂಧೀಜಿ ದತ್ತಪಾರಾಕೆ ತಮ್ಮ ಶಿಬಿರವನ್ನು ತಂದು ಊರಿದರು. ಸಂಧ್ಯಾ ಪ್ರಾರ್ಥನೆಯ ತರುವಾಯ ಅವರು ದೊಡ್ಡ ಜನಸಂದಣಿಯಲ್ಲಿ ಭಾಷಣ ಮಾಡಿದರು. ಅದರಲ್ಲಿ ನೂರಕ್ಕೆಂಭತ್ತರಷ್ಟು ಮುಸ್ಲಿಮರೇ ಇದ್ದರು. ಅವರ ಭಾಷಣ ನೆರೆದವರ ಆತ್ಮಸಾಕ್ಷಿಯನ್ನುದ್ದೇಶಿಸಿದ ಉತ್ಕಂಠಿತ ನಿವೇದನೆಯಾಗಿತ್ತು. ವೇದಾಂತಿಯ ಸ್ಪರ್ಶ ಮಣಿಯನ್ನೂ ಮೀರಿದ ಪರಮಾತ್ಮನ ನಾಮಮಹಿಮೆಯ ಪಾವಕತೆಯನ್ನು ಅವರು ಬಣ್ಣಿಸಿದರು. "ನಿಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಿರಿ; ಹಿಂದುಗಳು ಮರಳಿ ಬಂದು ನಿಮ್ಮೆಲ್ಲರೊಡನೆ ಗೆಳೆಯರಂತೆ ನೆರೆಹೊರೆಯವರಾಗಿ ಬಾಳಬೇಕೆಂದು ನಿಮಗೆ ನಿಜವಾಗಿ ಇಚ್ಛೆಯುಂಟೇ ನೋಡಿಕೊಳ್ಳಿರಿ. ಅವರು ಬರಬೇಕೆಂದು ನಿಮಗೆ ಬಯಕೆಯಿದ್ದರೆ ನೀವು ಅವರ ಸುರಕ್ಷಿತತೆ ಸ್ವಾಭಿಮಾನಗಳಿಗೆ ಹೊಣೆ ನಿಲ್ಲಬೇಕು; ಅವರ ತಾಯಿ ತಂಗಿ ಮಕ್ಕಳನ್ನು ನಿಮ್ಮ ತಾಯಿ ತಂಗಿ ಮಕ್ಕಳಂತೆ ಕಾಣುವ ಭರವಸೆ ಕೊಡಬೇಕು. ಇಲ್ಲದಿದ್ದರೆ ಹಾಗೆಂದು ಸ್ಪಷ್ಟವಾಗಿ ಹೇಳಿಬಿಡಿರಿ; ಅಂದರೆ ಈ ದುರ್ದೈವಿ ನಿರಾಶ್ರಿತರನ್ನು ಬೇರೆಲ್ಲಾದರೂ ಗುಳೆಹೋಗಲು ಕೇಳಿಕೊಳ್ಳುವೆನು. ಆದರೆ ಸ್ವತಃ ನಾನು ಮಾತ್ರ ನಿಮ್ಮ ಹೃದಯ ಪರಿವರ್ತನೆಯಾಗುವವರೆಗೆ ನಿಮ್ಮ ಮಧ್ಯದಲ್ಲಿಯೇ ಉಳಿದುಕೊಳ್ಳುವವನು, ನೀವು ಒದಗಿಸಿದ್ದರ ಮೇಲೆ ಜೀವನ ಸಾಗಿಸತಕ್ಕವನು. ಮತ್ತು ಅವಶ್ಯವಿದ್ದರೆ ಇಲ್ಲೇ ಸಾಯತಕ್ಕವನು, ಎಂದು ಸಾರಿದರು. ಈ ಭಾಷಣದ ಪೂರ್ಣ ಪಾಠವನ್ನು ಇಲ್ಲೇ ಬೇರೆಡೆ ಕೊಡಲಾಗಿದೆ.

ಸಭೆಯ ಕೊನೆಯಲ್ಲಿ ಎಷ್ಟೋ ಲಿಖಿತ ಪ್ರಶ್ನೆಗಳು ಬಂದವು. ಅವುಗಳಲ್ಲೊಂದು ಹೀಗಿತ್ತು. ತಮ್ಮನ್ನು ಪೀಡಿಸಿದ ಪುಂಡರು ಇನ್ನೂ ನಿರಾತಂಕವಾಗಿ ಅಡ್ಡಾಡುತ್ತಿರುವಾಗ ನಿರಾಶ್ರಿತರು ಯಾವ ಧೈರ್ಯದಿಂದ ತಿರುಗಿ ಹೋಗಬೇಕು? ಪುಂಡರನ್ನು ಸೆರೆ ಹಿಡಿಯುವ ಕರ್ತವ್ಯ ಸರಕಾರದ್ದು. ಆದರೆ ಸರಕಾರವನ್ನು ಆದರ ಕರ್ತವ್ಯ ಮಾಡಲು ಆದರಷ್ಟಕ್ಕೆ ಬಿಟ್ಟು ಒಳ್ಳೆಯ ಮುಸ್ಲಿಮರು ಹೃತ್ಪೂರ್ವಕವಾಗಿ ಕರೆದರೆ ನಿರಾಶ್ರಿತರು ತಿರುಗಿ ಹೋಗಬೇಕೆಂದು ಗಾಂಧೀಜಿ ಸಲಹೆ ಕೊಟ್ಟರು.

### ಇನ್ನಷ್ಟು ಒಳನಾಡಿಗೆ

ತಾ. ೧೧ — ಗಾಂಧೀಜಿಯ ಮೌನ ದಿನ. ಆದರೂ ಅವರು ಲಕ್ಷ್ಮೀಪುರ ಠಾಣೆಯ ನೌಖೋಲಾ, ಸೋನಾಚಾಕ, ಖಿಲಪಾರಾ ಹಳ್ಳಿಗಳಿಗೆ ಭೆಟ್ಟಿಕೊಟ್ಟರು. ಒಂದಿಷ್ಟು ಮೋಟಾರಿನಲ್ಲಿ ಮತ್ತಷ್ಟು ಡೋಣಿಯಲ್ಲಿ ಪ್ರಯಾಣ ನಡೆಯಿತು. ಡೋಣಿಯ ಪ್ರಯಾಣ ಬಹಳ ತೊಡಕಿನದಾಗಿತ್ತು. ಪಾಚಿ, ಜಲಸಸ್ಯಗಳಿಂದ ತುಂಬಿ ಸಿಕ್ಕು ಸಿಕ್ಕಾಗಿದ್ದ ಹಳ್ಳಗಳಲ್ಲಿ ಡೋಣಿಯನ್ನು ಮುನ್ನಡೆಸುವದು ಬಹಳ ಕಠಿನವಾಯಿತು. ನೌಖೋಲಾದಲ್ಲಿ ೧೫ ವರ್ಷದ ಶಾಲೆಯ ಹುಡುಗನೊಬ್ಬನನ್ನೊಳಗೊಂಡು ಎಂಟು ಜನರ ಕೊಲೆಯಾಗಿತ್ತೆಂದು ತಿಳಿಯಿತು. ನಾಲ್ಕು ತಲೆಬುರುಡೆಗಳೂ ಸುಟ್ಟುಇದ್ದಲಿಯಾದ ಎಲುಬಿನ ತುಣುಕುಗಳು ಅಲ್ಲಲ್ಲಿ ಚದರಿ ಬಿದ್ದಿದ್ದವು. ಮನೆಗಳೆಲ್ಲವೂ ಸುಟ್ಟು ಸೂರೆಯಾಗಿದ್ದವೆನಬಹುದು. ಹುಡುಗನ ಕೊಲೆಯಾದ ಮನೆಯಲ್ಲಿ ಅವನ ಪುಸ್ತಕಗಳೂ ಅದೇ ಆಗ ಬರೆದಿದ್ದ ಲೇಖನ ಪುಸ್ತಕಗಳೂ ನೆಲದ ಮೇಲೆ ಅಸ್ತವ್ಯಸ್ತವಾಗಿ ಬಿದಿದ್ದವು. ಮನೆಗಳ ಸುತ್ತು ಮುತ್ತ ಇದ್ದ ತೆಂಗಿನ ಮರಗಳು ಸುಟ್ಟು ಹೋಗಿದ್ದವು. ಕೊಲ್ಲಲ್ಪಡದೆಯೂ ಓಡಿಹೋಗದೆಯೂ ಉಳಿದವರೆಲ್ಲರನ್ನೂ ಧರ್ಮಾಂತರಗೊಳಿಸಲಾಗಿದೆಯೆಂದೂ ತಿಳಿದು ಬಂತು. ಅವರಲ್ಲೊಬ್ಬನು ಕಿವುಡನೂ ಮೂಕನೂ ಆದವನು ಕರುಣಾಜನಕ ಸಂಜ್ಞೆಗಳಿಂದ ಒಂದು ಅರಿವೆ ಚೂರಿನಲ್ಲಿ ಮುಚ್ಚಿಟ್ಟಿದ್ದ ತನ್ನ ಚಂಡಿಕೆಯನ್ನು ತೋರಿಸಿದನು. ಅದನ್ನು ದಾಳಿಗರು ಕತ್ತರಿಸಿದರು. ಆದರೂ ಅವನು ಅದನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದನು. ಅಳಿದುಳಿದ ಕೆಲವೇ ಸ್ತ್ರೀಯರು ಅತ್ಯಂತ ಹೃದಯದ್ರಾವಕವಾಗಿ ಅಳುತ್ತ ಕರೆಯುತ್ತ ಇದ್ದರು. ಸೋನಚಾರದಲ್ಲಿ ದೇವಾಲಯವನ್ನು ಮೈಲಿಗೆ ಮಾಡಿ ಅದಕ್ಕೆ ಬೆಂಕಿ ಹಚ್ಚಿದ್ದರು. ವಿಧ್ವಸ್ತ ದೇವಾಲಯದ ಭಗ್ನರಾಶಿಯ ನಡುವೆ ದೇವತಾ ಮೂರ್ತಿಗಳನ್ನು ಒಡೆದು ಚಲ್ಲಿ ಕೊಡಲಾಗಿತ್ತು.

ಸಂಜೆಯ ಪ್ರಾರ್ಥನಾ ಸಮಯದಲ್ಲಿ ಗಾಂಧೀಜಿಯ ಲಿಖಿತ ಸಂದೇಶವೊಂದು ಓದಲ್ಪಟ್ಟಿತು. ತಾವು ಕಂಡ ನೋಟಗಳು ತಮ್ಮ ಹೃದಯದಲ್ಲುಂಟು ಮಾಡಿದ ಯಾತನೆಯನ್ನು ಅವರು ಆ ಸಂದೇಶದಲ್ಲಿ ಹೊರಹೊಮ್ಮಿಸಿದ್ದರು. ತಾವು ಹೋದಲ್ಲೆಲ್ಲ ಸುಟ್ಟು ಹೋದ ಮನೆಗಳು ಕಣ್ಣಿಗೆ ಬಿದ್ದವು. ಸುಲಿಗೆಯ, ಬಲಾತ್ಕಾರದ, ಧರ್ಮಾಂತರಗಳ ಕತೆಗಳು ಕೇಳಿ ಬಂದವು. ಹಿಂದೂ ನಾರಿಯರ ಹಣೆಯ ಮೇಲೆ ಕುಂಕುಮದ ಬೊಟ್ಟಿದ್ದಿಲ್ಲ. ಅವರ ಕೈಯಲ್ಲಿ ಮಾಂಗಲ್ಯದ ಶಂಖದ ಬಳೆಗಳಿದ್ದಿಲ್ಲ. "ಎಲ್ಲ ಮುಸ್ಲಿಂ ಬಂಧುಗಳೂ ಈ ಅತ್ಯಾಚಾರಗಳನ್ನು ಏಕಕಂಠದಿಂದ ಖಂಡಿಸಲಿ. ಮತ್ತು ಆ ಮೂಲಕ ಹಿಂದುಗಳು ತಮ್ಮ ಮನೆಗಳಿಗೆ ಮರಳಿ ಗಲಭೆಗಳಿಗಿಂತ ಮೊದಲು ಹೇಗೊ ಹಾಗೆಯೆ ಬಾಳುವಂತಾಗಲಿ, ಎಂದು ನಾನೆಷ್ಟು ಹಾರೈಸುವೆ! ಅವರು ಮರಳಬೇಕಾದರೆ ಮೊದಲು ಅವರ ಮನೆಗಳನ್ನು ಪುನಃ ಕಟ್ಟಬೇಕು. ಮುಸ್ಲಿಮರು ಅದಕ್ಕೆ ಸಹಾಯ ಮಾಡಬೇಕು. ಪವಿತ್ರ ಕುರಾಣದ ಅಜ್ಞೆಯಾದರೂ ಹಾಗೆಯೆ ಇದೆಯೆಂದು ನನ್ನ ನಂಬಿಕೆ."

ಮರುದಿನದ ಪ್ರಾರ್ಥನಾ ಸಭೆಯಲ್ಲಿ ಪುನಃ ಗಾಂಧೀಜಿ ನಿರಾಶ್ರಿತರ ಪುನರ್ನಿವೇಶನವನ್ನು ಕುರಿತು ಮಾತೆತ್ತಿದರು. ಸಭೆಯಲ್ಲಿದ್ದವರಲ್ಲಿ ನಿರಾಶ್ರಿತರೇ ಹೆಚ್ಚು. ನಂ. ೬ ನೆ ಯುನಿಯನ್ನಿನ ಉಪಾಧ್ಯಕ್ಷರಾದ ಮೌಲವೀ ಸಾಹೇಬರು ಅವರಿಗಿಂತ ಮೊದಲು ಮುಸಲ್ಮಾನರ ಹೆಸರಲ್ಲಿ ಮಾತಾಡಿ ಹಿಂದುಗಳನ್ನು ತಿರುಗಿಬರಬೇಕೆಂದು ಪ್ರಾರ್ಥಿಸಿದ್ದರು. ಆದರೆ ಬಾಯಿಯಲ್ಲಿ ಹೇಳಿದಷ್ಟು ಸುಲಭವಾದ ಕೆಲಸವಿದಲ್ಲೆಂದು ಗಾಂಧೀಜಿ ಹೇಳಿದರು. "ಉಭಯ ಜಾತಿಗಳು ಪುನಃ ಶಾಂತಿ ಸಾಮರಸ್ಯಗಳೊಡನೆ ಬಾಳಬೇಕೆಂದು ಎಲ್ಲರಿಗೂ ಬಯಕೆ ಉಂಟು. ಅದಕ್ಕೆ ಅವರೆಲ್ಲರೂ ಒಂದೇ ಧರ್ಮದವರಾಗಿರಬೇಕೆಂದು ನಿಯಮವಿಲ್ಲ. ನಾನು ವಿಧ್ವಂಸದ ಭೀಕರ ದೃಶ್ಯಗಳನ್ನು ಕಂಡಿದ್ದೇನೆ. ಸಂತ್ರಸ್ತರ ಭಯಗ್ರಸ್ತ ಮುಖಗಳನ್ನೂ ನೋಡಿದ್ದೇನೆ. ಅವರನ್ನು ಒಮ್ಮೆ ಬಲಾತ್ಕಾರದಿಂದ ಧರ್ಮಾಂತರಗೊಳಿಸಲಾಗಿದೆ. ಇನ್ನೊಮ್ಮೆ ಅದು ಸಂಭವಿಸೀತೆಂದು ಅವರು ಹೆದರುತ್ತಾರೆ. ಅವರು ಆ ಭಯವನ್ನು ತ್ಯಜಿಸಲೆಂದು ನನ್ನ ಆಶೆ. ಪರಮಾತ್ಮನ ನಾಮವನ್ನು ಯಾವನು ಸರ್ವಥಾಬಿಟ್ಟುಕೊಡಲೊಪ್ಪುವದಿಲ್ಲವೋ ಅವನೊಬ್ಬನೇ ಬದುಕಲರ್ಹನು. ರಾಮನಾಮವನ್ನು ಬಿಡುವ ಬದಲು ಸಾವನ್ನೇ ಎದುರಿಸಲು ನೀವು ಸಿದ್ಧರಾಗಬೇಕು. ಸೈನ್ಯ ಮತ್ತು ಪೋಲೀಸ ಸಹಾಯದ ಮೋಹ ನನಗಿಲ್ಲ. ಪೋಲೀಸರ ಕೆಲಸವೆಂದರೆ ಕಳ್ಳರನ್ನೂ ದರೋಡೆಗಾರರನ್ನೂ ಹಿಡಿಯುವದು. ವಿದೇಶಿ ಆಕ್ರಮಣದಿಂದ ನಮ್ಮನ್ನು ರಕ್ಷಿಸುವ ಕಾರ್ಯ ಸೈನ್ಯದ್ದು. ನಮ್ಮ ನಮ್ಮೊಳಗೆ ಹೋರಾಡುವದನ್ನು ನಿಲ್ಲಿಸಿ ಗೆಳೆಯರಂತೆ ಬಾಳಲು ಸೈನ್ಯದವರು ನಮಗೆ ಕಲಿಸಲಾರರು." ನಿರಾಶ್ರಿತರ ಪುನರ್ನಿವೇಶನದ ಯೋಜನೆಯ ಬಗ್ಗೆ ಮಾತಾಡುತ್ತ, ಮುಸ್ಲಿಂ ಲೀಗಿಗೆ ಪಾಂತ

(೧೦ನೇ ಪುಟ ನೋಡಿರಿ)

## ವಾರದ ಪತ್ರ

( ೯ನೇ ಪುಟದಿಂದ )

ಬೇಕಾಗಿದ್ದು ಪೂರ್ಣವಾಗಿ ಸಹಕರಿಸಿದ ರಷ್ಟೇ ಅದು ಯಶಸ್ವಿಯಾಗಬಲ್ಲದೆಂದು ಗಾಂಧೀಜಿ ಹೇಳಿದರು. "ಶಮುಸುದ್ದೀನ ಸಾಹೇಬರು ಎರಡು ಮೂರು ದಿನಗಳಲ್ಲಿ ಬರುವವರಿದ್ದಾರೆ. ಲೀಗ ಸರಕಾರ ಏನು ಮಾಡಬಯಸುವದೆಂದು ಅವರಿಂದ ಕೇಳಿ ತಿಳಿಯೋಣಂತೆ."

ಗೋಮಾತೊಲಿ ಮತ್ತು ನಂದಿಗ್ರಾಮ ಹಳ್ಳಿಗಳ ದರ್ಶನದೊಡನೆ ಗಾಂಧೀಜಿಯ ಲಕ್ಷ್ಮೀಪುರ ಠಾಣೆಯ ಕಾರ್ಯಕ್ರಮ ಪೂರ್ತಿಯಾಯಿತು. ನಂದಿಗ್ರಾಮದಲ್ಲಾದರೂ ನೌಖೋಲಾ ಹಾಗು ಖಿಲಪಾರಾಗಳಲ್ಲಿ ಕಂಡಂಥ ವಿಧ್ವಂಸದ ದೃಶ್ಯಗಳೇ ಕಣ್ಣಿಗೆ ಎದುರಾದವು. ಸುಮಾರು ೬೦೦ ಮನೆಗಳನ್ನು ಸುಟ್ಟು ಹಾಕಲಾಗಿತ್ತು. ಸುಟ್ಟುಹೋದ ತೊಲೆ ಬಿದ್ದ ಗೋಡೆಗಳ ಭಗ್ನ ರಾಶಿಯಲ್ಲಿ ಒಂದಾನೊಂದು ಕಾಲದಲ್ಲಿ ಚಪ್ಪರವಾಗಿದ್ದ ತಗಡುಗಳು ರಾಶಿಬಿದ್ದಿದ್ದವು. ಒಂದು ಶಾಲಾ ಕಟ್ಟಡ, ಒಂದು ವಸತಿಗೃಹ, ಇನ್ನೊಂದು ಅಸ್ಪತ್ರೆ ಇವು ಸುಟ್ಟು ಬೂದಿಯಾಗಿದ್ದವು. ದಗ್ಧವಾದ ತೆಂಗಿನ, ಅಡಿಕೆಯ ಮರಗಳು ಕೊಳ್ಳಿ ಲೀಲೆಯ ಗುರುತಾಗಿ ನಿಂತಿದ್ದವು. ಹಳ್ಳಿಯ ಪ್ರಮುಖ ಕುಟುಂಬಕ್ಕೆ ಸೇರಿದ ದೇವಾಲಯ ಇಲ್ಲಿಯೂ ಅಪವಿತ್ರ ಮಾಡಲ್ಪಟ್ಟಿತ್ತು.

### ಕ್ರೂರ ಅಪಹಾಸ್ಯ

ತಾ. ೧೬ ಕ್ಕೆ ಗಾಂಧೀಜಿ ದತ್ತಪಾರಾದಿಂದ ಕಾಝಿರಖಿಲಕ್ಕೆ ತಮ್ಮ ಶಿಬಿರವನ್ನು ವರ್ಗಾಯಿಸಿದರು. ದಾರಿಯಲ್ಲಿ ಅವರು ಶಾಹಪುರದಲ್ಲಿ ತಂಗಿದರು. ಅಲ್ಲೊಂದು ಸಾರ್ವಜನಿಕ ಸಭೆಯ ವ್ಯವಸ್ಥೆ ಮಾಡಲಾಗಿತ್ತು. ಶಾಹಪುರದಲ್ಲಿ ದೊಡ್ಡ ಜನಸಂದಣಿ ಸೇರುವದೆಂದು ಗಾಂಧೀಜಿಗೆ ಹೇಳಲಾಗಿತ್ತು. ಆದರೆ ಯಾರೋ ಸುದ್ದಿ ಹಬ್ಬಿಸಿಬಿಟ್ಟಿದ್ದರು. ಅವರೊಡನೆ ಪೋಲೀಸ ಸುಪರಿಂಟೆಂಡೆಂಟ, ಜಿಲ್ಹಾ ಮ್ಯಾಜಿಸ್ಟ್ರೇಟ, ಸಶಸ್ತ್ರ ಅಂಗರಕ್ಷಕ ಇವರು ಬರುವರು ಮತ್ತು ಆ ಸಂದರ್ಭದ ಪ್ರಯೋಜನ ಪಡೆದು ಅವರು ಜನರನ್ನು ಬಂಧಿಸುವರು, ಎಂದು. ಪರಿಣಾಮವಾಗಿ ಗಾಂಧೀಜಿ ಅಲ್ಲಿ ಬಂದು ಸೇರಿದಾಗ ಬಹಳ ಸ್ವಲ್ಪ ಜನರು ಮಾತ್ರ ಕಾಣುತಿದ್ದರು. "ಇದೊಂದು ಕ್ರೂರ ಅಪಹಾಸ್ಯ" ಎಂದು ಗಾಂಧೀಜಿ ನುಡಿದರು. "ನನ್ನ ಮಟ್ಟಿಗೆ ನಾನೆಂದೂ ಯಾವ ಪೋಲೀಸ ಅಥವಾ ಜಿಲ್ಹಾಧಿಕಾರಿಯನ್ನು ನನ್ನ ಸಂಗಡ ಬರಬೇಕೆಂದು ಕೇಳಿದ್ದಿಲ್ಲ. ಆದರೆ ಅರಕ್ಷಿತವಾಗಿ ನನ್ನನ್ನು ಹೋಗಗೊಡುವ ಧೈರ್ಯ ತಮಗಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ."

ಎಷ್ಟೋ ಕಡೆಗಳಲ್ಲಿ, ಸ್ಥಾನಿಕ ಮುಸಲ್ಮಾನರು ಶಾಂತಿಯ ಪುನಃಸ್ಥಾಪನೆಗೆ ಆತುರ ತೋರಿಸಿದರೂ ಮುಸ್ಲಿಂ ಲೀಗ್ ಮುಂದಾಳುಗಳು ಹೇಳಿದ ಹೊರತು ಅವರು ಅದಕ್ಕಾಗಿ ಏನನ್ನೂ ಮಾಡಲು ಅಥವಾ ಭರವಸೆ ಕೊಡಲು ಸಿದ್ಧರಾಗಿಲ್ಲ, ಎಂಬ ಮಾತು ತಮ್ಮ ಲಕ್ಷಕ್ಕೆ ಬಂದಿದೆಯೆಂದು ಗಾಂಧೀಜಿ ಹೇಳಿದರು. ಅವರ ಸೂಚನೆನ್ಯಾಯ್ಯವಾಗಿದೆಯೆಂದು ಮನಗಂಡು ಗಾಂಧೀಜಿ ಅದೇ ಮುಂಜಾನೆ ತಾವು ಓದಿದ ಕಾಯದೇ-ಅಝುಮ ಜಿನ್ನಾ ಸಾಹೇಬರ ಹೇಳಿಕೆಯೊಂದನ್ನು ತೋರಿಸಿದರು. ಆ ಹೇಳಿಕೆಯಲ್ಲಿದ್ದುದೆಲ್ಲವೂ ತಮಗೆ ಸೇರಲಿಲ್ಲವಾದರೂ ಕೆಲವಂಶಗಳು ಎಲ್ಲರ ಲಕ್ಷ್ಯಕ್ಕೂ ಯೋಗ್ಯವಾಗಿವೆಯೆಂದು ಅವರ ಅಭಿಪ್ರಾಯವಾಗಿತ್ತು. ಆ ಹೇಳಿಕೆಯಲ್ಲಿ ಕಾಯದೇ ಅಝುಮ ಜಿನ್ನಾರು ಹೀಗೆ ಹೇಳಿದ್ದರು. "ಮುಸ್ಲಿಮರು ತಲೆಕೆಟ್ಟು ಪ್ರತೀಕಾರ ಪ್ರತಿಹಿಂಸೆಗಳನ್ನು ಕೈಕೊಂಡಿದ್ದಾದರೆ, ಮತ್ತು ನಮ್ಮ ಮಹಾಧರ್ಮವಾದ ಇಸ್ಲಾಮದ ಉಚ್ಚತಮ ನೀತಿ ಬೋಧೆಗೆ ದ್ರೋಹ ಮಾಡಿದರೆ, ನೀವು ಪಾಕಿಸ್ತಾನದ ಬೇಡಿಕೆಯ ಹಕ್ಕನ್ನು ಕಳದುಕೊಳ್ಳುವಿರಿ ಮಾತ್ರವಲ್ಲ, ರಕ್ತಪಾತ ಕಾರ್ಯಗಳ ಒಂದು ದೊಡ್ಡ ಸುಳ್ಳಿಯನ್ನೇ ಕಲ್ಪಿಸುವಿರಿ. ಅದರಿಂದ ಒಡನೆ ನಮ್ಮ ಸ್ವಾತಂತ್ರ್ಯದ ದಿನ ದೂರವಾಗುವದು. ದಾಸ್ಯ ಪರಾಧೀನತೆಗಳ ಅವಧಿಯನ್ನು ಇನ್ನಷ್ಟು ಬೆಳೆಸಲು ಮಾತ್ರ ಸಹಾಯ ಮಾಡಿದಂತಾಗುತ್ತದೆ." ಮುಂದೆ ಸಾಗಿ ಅವರು ಹೇಳಿದ್ದು: "ರಾಜಕಾರಣದಲ್ಲಿ ನಾವು ಶೂರರೂ ಉದಾರರೂ ವಿಶ್ವಾಸಾರ್ಹರೂ ಆಗಿರುವೆವೆಂದು.....ಪಾಕಿಸ್ತಾನ ಪ್ರದೇಶಗಳಲ್ಲಿ ಅಲ್ಪಸಂಖ್ಯಾಕರಿಗೆ ಮುಸ್ಲಿಂರಷ್ಟೇ, ಏಕೆ ಅದಕ್ಕಿಂತಲೂ ಹೆಚ್ಚಾಗಿ, ಪ್ರಾಣ, ಧನಮಾನಗಳ ಭದ್ರತೆಯುಂಟೆಂದು ನಾವು ಸಿದ್ಧಮಾಡಿ ತೋರಿಸಬೇಕು. ಪರಿಶೀಲಿಸಿದಾಗ ತಾವು ಎತ್ತಿದ ಈ ಅವತರಣಿಕೆ ಸರಿಯೆಂದು ಕಂಡುಬಂದರೆ ಜಿನ್ನಾರ ಹೇಳಿಕೆಯನ್ನು ಆಳವಾಗಿ ವಿಚಾರಿಸಬೇಕೆಂದು ಗಾಂಧೀಜಿ ಸಭಿಕರನ್ನು ಪ್ರಾರ್ಥಿಸಿದರು. ಕೊಲೆ ಸುಲಿಗೆ, ಕೊಳ್ಳಿ, ಅಪಹಾರ, ಬಲಾತ್ಕಾರದ ಮದುವೆ ಮತ್ತು ಬಲಾತ್ಕಾರದ ಧರ್ಮಾಂತರ ಇವು ಹಿಂದುಸ್ತಾನದ ದಾಸ್ಯವನ್ನು ಬೆಳಸದೆ ಮಾಣವು. ನಾವು ನಮ್ಮಲ್ಲಿ ಬಡಿದಾಡುತ್ತಲೆ ಇದ್ದರೆ, ರಕ್ಷಣೆಗಾಗಿ ಪೋಲೀಸು-ಸೈನ್ಯಗಳ ಮುಖ ನೋಡಿದರೆ ಆಗ ನಮ್ಮ ಮೇಲೆ ಪ್ರಭುತ್ವ ನಡೆಸಲು ನೂರನೆಯವರಿಗೆ ಅವಕಾಶ ದೊರಕಿಸಿಕೊಟ್ಟಂತಾಗುವದು.

### ಹೃದಯವ್ಯಥೆ

ಕಾಝಿರಖಿಲದಲ್ಲಿ ಗಾಂಧೀಜಿಯ ಶಿಬಿರ ಅರ್ಧ ವಿಧ್ವಸ್ತ ಮನೆಯೊಂದರಲ್ಲಿ ಹೂಡಲ್ಪಟ್ಟಿತ್ತು. ಅದನ್ನು ಪೂರ್ತಿಯಾಗಿ ಭಸ್ಮಮಾಡುವದು ದುರಾಚಾರಿಗಳಿಗೆ ಸಾಧ್ಯವಾಗಿದ್ದಿಲ್ಲ. ಶ್ರೀ ಸತೀಶ ಬಾಬುಗಳ ಜನರು ಮುಂಚಾಗಿ ಹೋಗಿ ಅದನ್ನು ಸ್ವಚ್ಛ ಮಾಡಿದ್ದರಿಂದ ಅದು ವಾಸಯೋಗ್ಯವಾಗಿತ್ತು. ಆ ಮನೆಯ ಆವಾರದಲ್ಲಿ ಪ್ರಾರ್ಥನೆಗೆ ಸಣ್ಣ ಸಂದಣಿಯೊಂದು ನೆರೆದಿತ್ತು. ಪ್ರಾರ್ಥನಾನಂತರ ಗಾಂಧೀಜಿ ಅವರನ್ನುದ್ದೇಶಿಸಿ ಮಾತನಾಡುತ್ತ, ಸುತ್ತಮುತ್ತಲ ಸೃಷ್ಟಿ ಸೌಂದರ್ಯದಲ್ಲಿ ತಮಗೆ ಅನಿರ್ವಚನೀಯ ಶಾಂತಿ ಕಾಣಬರುತ್ತಿತ್ತೆಂದು ಹೇಳಿದರು. ಆದರೆ ಅಲ್ಲಿಯ ಸ್ತ್ರೀಪುರುಷರ ಮುಖದಲ್ಲಿ ಮಾತ್ರ ಶಾಂತಿಯ ರೇಖೆ ಕಾಣಿಸಲಿಲ್ಲ. ಇಷ್ಟೆಲ್ಲ ಅನುಭವಿಸಿದ ನಂತರ ಅವರಲ್ಲಿ ಶಾಂತಿಯಾದರೂ ಹೇಗೆ ಇರಬೇಕು? "ನನ್ನನ್ನೂ ನನ್ನ ಸಂಗಡಿಗರನ್ನೂ ರಕ್ಷಿಸಲು ಅನೇಕ ಅಂಗರಕ್ಷಕರನ್ನು ನಿಲ್ಲಿಸಲಾಗಿದೆ. ಇವರು ನನ್ನನ್ನು ರಕ್ಷಿಸುತಿರುವದು ಯಾರಿಂದ? ಅಂಗರಕ್ಷಕರ ಜತೆಗೆ ಅಡ್ಡಾಡುವ ಅಭ್ಯಾಸ ನನಗಿಲ್ಲ. ಈ ಮೊದಲು ನಾನು ಬಂಗಾಲದಲ್ಲಿ ರಕ್ಷಣೆಯಿಲ್ಲದೆ ಪ್ರವಾಸ ಮಾಡಿದ್ದೇನೆ. ಆದರೆ ಇಂದು ಅಧಿಕಾರಿಗಳು ನನ್ನನ್ನು ಹಾಗೆ ಮಾಡಗೊಡುತ್ತಿಲ್ಲ. ಇದು ನನಗೆ ನಾಚಿಕೆ, ದುಃಖಗಳನ್ನುಂಟು ಮಾಡಿದೆ. ಆದರೆ ನನಗಿಂತಲೂ ಹೆಚ್ಚಾಗಿ ಪೂರ್ವಬಂಗಾಲದ ಮುಸ್ಲಿಮರಿಗೆ ಇದು ಲಜ್ಜಾವಹವಾಗಬೇಕು.

ಶಾಲೆಗಳು "ದೇವಾಲಯಗಳನ್ನುಕೂಡ ಧ್ವಂಸವಾಗಿವೆಯೆಂದು ಅವರು ಮುಂದುವರಿಸಿದರು. "ನಿಮ್ಮ ಮಂತ್ರಿಗಳಾದ ಶಮುಸುದ್ದೀನ ಸಾಹೇಬರಿಗೂ ಅದರಿಂದ ಅಸಂತೋಷವಾಗಿದೆ. ಪೂರ್ವಬಂಗಾಲದಲ್ಲಾದ ಘಟನೆಗಳಿಂದ ತಮಗೆ ಬಹಳ ನೋವಾಗಿದೆಯೆಂದು ಅವರು ಹೇಳುತ್ತಾರೆ. ಜನರ ಹೃದಯದಿಂದ ದ್ವೇಷವನ್ನು ತೊಡೆದು ಹಾಕಬೇಕು? ಅದಕ್ಕೆ ನಿಮ್ಮ ಮುಸ್ಲಿಮರ ಸಹಾಯ ಅವಶ್ಯವಿದೆ."

### ಈ ಬಂಧುಹತ್ಯೆ

ನನ್ನ ಎಲ್ಲ ಅನುಭವಗಳಿಗಿಂತ ಈ ಬಂಧುಹತ್ಯೆ ಅತಿ ಭಯಾನಕವಾಗಿದೆ. ೨೦ ವರ್ಷ ದಕ್ಷಿಣ ಅಫ್ರಿಕೆಯಲ್ಲಿಯೂ ೩೦ ವರ್ಷ ಹಿಂದುಸ್ಥಾನದಲ್ಲಿಯೂ ನಾನು ನಿಷ್ಠುರವಾದ ಹೋರಾಟವೊಂದನ್ನು ಸಾಗಿಸಿದ್ದೇನೆ. ಆದರೆ ಈ ಪರಸ್ಪರ ಹತ್ಯೆಯಿಂದ ನನಗೆ ಯಾವದೂ ಬಗೆಹರಿಯದಂತಾಗಿದೆ. ಎರಡೂ ಜಾತಿಗಳನ್ನು ಶಾಂತಿ ಸಾಮರಸ್ಯಗಳೊಡನೆ ಬಾಳಲು ಹೇಗೆ ಮನವೊಲಿಸಬೇಕೆಂಬುವದೇ ನನಗೆ ಹೊಳೆಯದಾಗಿದೆ. ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯಲೆಂದೇ ನಾನು ಬಂಗಾಲಕ್ಕೆ ಬಂದಿದ್ದೇನೆ. ಬಂಗಾಲ ದೊಡ್ಡ ಪ್ರಾಂತ ಇಲ್ಲಿ ಜಾತೀಯಪ್ರಶ್ನೆಯನ್ನು ಬಿಡಿಸಬಹುದಾದರೆ ಬೇರೆ ಕಡೆಗಳಲ್ಲೂ ಅದನ್ನು ಬಿಡಿಸಬಹುದು. ಇಲ್ಲಿ ನಾನು ಯಶಸ್ವಿಯಾದರೆ, ಇನ್ನೊಂದಿಷ್ಟು ಆಯುಷ್ಯ ಹೆಚ್ಚಿಸಿಕೊಂಡು ನಾನು ಬಂಗಾಲದಿಂದ ಹೊರಡುವೆ. ಇಲ್ಲದಿದ್ದರೆ ದೇವರು ನನ್ನನ್ನು ಈ ಪೃಥ್ವಿಯಿಂದ ಬೇಗನೆ ಕರೆಸಿಕೊಳ್ಳಲೆಂದು ಪ್ರಾರ್ಥಿಸುತ್ತೇನೆ. ಬಂಗಾಲದಿಂದ ಬರಿಗೈಲಿ ಮರಳುವ ಇಚ್ಛೆ ನನಗಿಲ್ಲ. ನನ್ನ ಕೋಶದಲ್ಲಿ ನಿರಾಶೆಯೆಂಬ ಶಬ್ದವೇ ಇಲ್ಲ."

"ಬಂಗಾಲದಲ್ಲಿ ಮುಸ್ಲಿಮರು ಹಿಂದುಗಳ ಹತ್ಯೆ ಮಾಡಿದ್ದಾರೆ, ಏಕೆ, ಅದಕ್ಕಿಂತಲೂ ಕೆಟ್ಟ ಕೃತ್ಯಗಳನ್ನೂ ಮಾಡಿದ್ದಾರೆ. ಬಿಹಾರದಲ್ಲಿ ಹಿಂದುಗಳು ಮುಸ್ಲಿಮರ ಹತ್ಯೆ ನಡೆಸಿದ್ದಾರೆ. ಇಬ್ಬರೂ ದೌರ್ಜನ್ಯದಿಂದ ವರ್ತಿಸಿದ ಮೇಲೆ ಒಬ್ಬರನ್ನೊಬ್ಬರಿಗೆ ಹೋಲಿಸಿದ್ದರಿಂದಾಗಲಿ, ಯಾರಿಂದ ಯಾರು ವಾಸಿಯೆಂದು ಹೇಳುವದರಿಂದಾಗಲಿ ಯಾರು ಉಪದ್ರವವನ್ನು ಪ್ರಾರಂಭಿಸಿದರೆಂದು ಕೇಳುವದರಿಂದಾಗಲಿ ಫಲವಿಲ್ಲ. ಪ್ರತೀಕಾರ ಮಾಡುವ ಇಚ್ಛೆಯುಳ್ಳವರು ನನ್ನಿಂದ ಆ ಕಲೆಯನ್ನು ಕಲಿಯಬೇಕು. ನಾನೂ ಸೇಡು ತೀರಿಸಿಕೊಳ್ಳುವದುಂಟು. ಆದರೆ ಅದರ ರೀತಿಯೇ ಬೇರೆ. ನನ್ನ ಬಾಲ್ಯದಲ್ಲಿ ನಾನೊಂದು ಗುಜರಾಥಿ ಪದವನ್ನೋದಿದ್ದೆ. ಅದರಲ್ಲಿ ಹೇಳಿತ್ತು; 'ನಿನಗೆ ಒಂದು ಥಾಲಿ ನೀರು ಕೊಟ್ಟವನಿಗೆ ಎರಡು ಥಾಲಿ ನೀರು ಕೊಟ್ಟರೆ, ಪುಣ್ಯವಿಲ್ಲ. ನಿನಗೆ ಕೇಡು ಮಾಡಿದವನಿಗೆ ಒಳಿತು ಮಾಡುವದೇ ನಿಜವಾದ ಪುಣ್ಯ.' ಇದೀಗ ಉದಾತ್ತ ಪ್ರತೀಕಾರವೆಂದು ನನ್ನಣಿಕೆ" ಎಂದು ಗಾಂಧೀಜಿ ಮುಗಿಸಿದರು.

ಅದ್ಯ ಖಲೀಫರಲ್ಲೊಬ್ಬರ ವಿಷಯದಲ್ಲಿ ತಾವೊಂದು ಕಥೆ ಓದಿದ್ದುಂಟೆಂದು ಗಾಂಧೀಜಿ ಹೇಳಿದರು. ಯಾರೋ ಒಬ್ಬನು ಆ ಖಲೀಫರ ಮೇಲೆ ಖಡ್ಗ ಸಹಿತ ಏರಿಬಂದನು. ಅವನ ಕೈಯಿಂದ ಖಡ್ಗವನ್ನು ಕಸಿದುಕೊಂಡು ಖಲೀಫರು ಅವನನ್ನು ಕೊಲ್ಲಲೆಳಸುವಷ್ಟರಲ್ಲಿ ಅವನು ಅವರ ಮುಖದ ಮೇಲೆ ಉಗುಳಿದನು. ಈ ಅತಿಅವಮಾನದಿಂದ ಅವರ ವೈಯಕ್ತಿಕ ಕೋಪ ಜಾಗ್ರತವಾದುದರಿಂದ ಅವನನ್ನು ಹಾಗೆಯೆ ಹೋಗಗೊಟ್ಟುಬಿಟ್ಟರು. ಇದರಿಂದ ಆ ದುರ್ಜನನ ಮೇಲೆ ಬಹಳ ಪರಿಣಾಮವಾಗಿ ಅವನು ಇಸ್ಲಾಮ ಧರ್ಮವನ್ನು ಸ್ವೀಕರಿಸಿದನು. ಬಲಾತ್ಕಾರದಿಂದ ಇಸ್ಲಾಮ ಧರ್ಮಾಂತರಗೊಳಿಸಲ್ಪಟ್ಟವನು. ಮನುಷ್ಯನಾಗಿ ಉಳಿಯಲಾರ. ಭಯದಿಂದ "ಕಲಮಾ" ಪಠಿಸುವದು ಅರ್ಥವಿಲ್ಲದ ಕೆಲಸ.

### ಹೃದಯಪರೀಕ್ಷೆ ಮಾಡಿಕೊಳ್ಳಿರಿ

ತಾ. ೧೫ ದಿನದ ಪ್ರಾರ್ಥನಾ ಸಭೆ ರಾಮಗಂಜದ ಶಾಲೆಯ ಕಟ್ಟಡದ ಮುಂದಿನ ಬಯಲಲ್ಲಿ ಜರಗಿತು. ಪ್ರಾರ್ಥನಾ ನಂತರದ ಭಾಷಣದಲ್ಲಿ ಅವರು ಹಿಂದಿನ ದಿನದ ಹೇಳಿಕೆಯನ್ನೆ ಮತ್ತೆ ಒತ್ತಿ ಹೇಳಿದರು. "ದುಃಖ, ಯಾತನೆ ಇವುಗಳನ್ನು ಬಿಟ್ಟು ಬೇರಾವ ವಿಷಯವನ್ನೂ ಈಚೆಗೆ ನಾನು ಹೇಳಲಾರದಾಗಿದ್ದೇನೆ. ಹೋದಲ್ಲೆಲ್ಲ ನನಗೆ ವಿಧ್ವಂಸದ ರುದ್ರದೃಶ್ಯಗಳೇ ಕಾಣುತ್ತಿವೆ. ನನ್ನ ಕಣ್ಣಲ್ಲಿ ನೀರಿಲ್ಲ. ಕಣ್ಣೀರನ್ನು ಮಿಡಿಯುವಾತನು ಇತರರ ಕಣ್ಣೀರನ್ನು ಹೇಗ ಒರೆಸಲಾಪನು? ಆದರೆ ನನ್ನ ಹೃದಗು ಅತ್ತೇ ಅಳುವದು. ಮುಸಲ್ಮಾನರೊಡನೆ ನಿರ್ದಾಕ್ಷಿಣ್ಯವಾದ ಮಾತುಕತೆ ನಡೆಸೇನು, ಅವರು ತಮ್ಮ ದುಷ್ಕರ್ಮಕ್ಕಾಗಿ ಪಶ್ಚಾತ್ತಾಪಪಟ್ಟು ಹಿಂದೂಗಳು ತಮ್ಮ ನಾಡನ್ನು ತ್ಯಜಿಸದಂತೆ ಕೇಳಿಕೊಳ್ಳಬಹುದು ಎಂಬ ಆಸೆಯಿಂದ ಬಂದಿದ್ದೇನೆ. ನಿಮ್ಮ ಪಶ್ಚಾತ್ತಾಪ ಪ್ರಾಮಾಣಿಕವಾಗಿದ್ದರೆ ಹಿಂದೂಗಳು ಅದರ ಸಹಜತೆಯನ್ನು ಕಂಡುಕೊಂಡು ಕಳೆದು ಹೋದ ವಿಶ್ವಾಸವನ್ನು ಮರಳಿ ಹೊಂದಬಹುದು. ಆದರೆ ಪೂರ್ವ ಬಂಗಾಲದ ಹಿಂದೂ ಮುಸ್ಲಿಮರಲ್ಲಿ ಪರಸ್ಪರ ಮನಃಕಷಾಯವುಂಟು ಮಾಡಲ್ಪಟ್ಟಿದೆಯೆಂದು ನನಗೆ ಗೊತ್ತಾಗಿದೆ. ಅದರ ಕಾರಣವನ್ನು ಚರ್ಚಿಸಲು ನನಗೆ ಇಷ್ಟವಿಲ್ಲ. ಆದರೆ ನನಗೆ ಗೊತ್ತಿದ್ದ ಮಟ್ಟಿಗೆ ಪೂರ್ವ ಬಂಗಾಲದಲ್ಲಿ ಮುಸ್ಲಿಮರೇ ಅನ್ಯಾಯಗಾರರೆಂದು ಹೇಳಿದರೆ ಮುಸ್ಲಿಂ ಬಂಧುಗಳು ನನ್ನನ್ನು ಕ್ಷಮಿಸಲಿ. ಹಿಂದುಗಳು ಅವರೆಂದರೆ ಹೆದರಿ ಜೀವ ಬಿಡುತಿದ್ದಾರೆ. ಚೌಮುಹಾನಿಯಲ್ಲಿ ನನ್ನ ಸಭೆಗಳಿಗೆ ಮುಸ್ಲಿಮರು ಬಹಳ ಜನ-ಹಿಂದೂಗಳಿಗಿಂತಲೂ ಹೆಚ್ಚು-ಬರುತಿದ್ದರು. ಆದರೆ ದತ್ತಪಾರಾದ ಮೊದಲನೆ ಸಭೆಯ ನಂತರ ಅವರೇಕೋ ನನ್ನಿಂದ ತಪ್ಪಿಸಿಕೊಳ್ಳುತಿದ್ದಾರೆ. ಇದರಿಂದ ನನಗೆ ನೋವಾಗಿದೆ. ಈ ಸಭೆಯಲ್ಲಿರುವ ಕೆಲ ಮುಸ್ಲಿಂರಾದರೂ ಉಳಿದವರಿಗೆನನ್ನ ಸಂದೇಶವನ್ನು ಒಯ್ಯಲಿ ಈ ಭಾಗಗಳಲ್ಲಿ ಪ್ರಮುಖ ಮುಸ್ಲಿಮರನ್ನು ಭೆಟ್ಟಿಯಾಗುತ್ತ ತಿರುಗುತಿರುವ ಮುಸ್ಲಿಂ ಭಗಿನಿಯೊಬ್ಬಳು ನನ್ನ ಸಭೆಗಳಿಗೆ ಬರಬೇಕಾದರೆ ಅಥವಾ ಹಿಂದೂಗಳೊಡನೆ ಗೆಳೆತನ ಮಾಡಬೇಕಾದರೆ ಲೀಗ ಮುಂದಾಳುಗಳ ಅಜ್ಞೆ ಬೇಕೆಂದು ಮುಸ್ಲಿಮರು ಸ್ಪಷ್ಟವಾಗಿ ಹೇಳುತಿರುವರೆಂದು ಹೇಳುತ್ತಾಳೆ. ಹಿಂದೂಗಳು ಗುಳೆ ಹೋಗುವದು ಇನ್ನೂ ನಡೆದೇಇದೆ. ಹಿಂದುಗಳು ನಮ್ಮ ನೆರೆಯವರು, ಗೆಳೆಯರು, ಬಂಧುಗಳು; ನಮ್ಮಂತೆ ಅದೇ ಭೂಮಿಯಲ್ಲಿ ಬೆಳೆದು ಅದೇ ಗಾಳಿಯಲ್ಲಿ ಉಸಿರಾಡಿಸಿ ಅದೇ ನೀರು ಕುಡಿಯುವವರು; ಅದರಿಂದ ಅವರು ನಮ್ಮಿಂದ ಭಯಪಡಬೇಕಾದ್ದೇನೂ ಇಲ್ಲ ಎಂಬದಾಗಿ ಮುಸ್ಲಿಮರು ಭರವಸೆ ಕೊಟ್ಟರೆ ಈ ಗುಳೆ ಹೋಗುವದು ನಿಂತುಹೋಗಬಹುದಿಷ್ಟೇ ಅಲ್ಲ; ಮನೆಮಾರು ಬಿಟ್ಟು ಹೋದವರೂ ತಿರುಗಿ ಬರಬಹುದು. ಮೃಗಗಳು ಕೂಡ ಸ್ನೇಹ ತೋರಿಸುವವರೊಡನೆ ಸ್ನೇಹದಿಂದ ವರ್ತಿಸುತ್ತವೆ; ಮನುಷ್ಯನಂತೂ ಪರಮಾತ್ಮನ ಬಿಂಬದ ಪ್ರತಿಬಿಂಬ. ಪರಮಾತ್ಮನಪ್ರತಿಬಿಂಬತ್ವದ ಅರ್ಹತೆಯನ್ನು ಪಡೆಯಲು ಅವನು ಕೇಡಿಗೆ ಪ್ರತಿಯಾಗಿ ಒಳಿತು ಮಾಡಬೇಕು. ತಪ್ಪಾ... ಇದ್ದರೂ ಈ ಸತ್ಯ ಉಭಯಪಕ್ಷಗಳಿಗೂ ಅನ್ವಯಿಸುತ್ತದೆ. ಮುಸ್ಲಿಮರಿಗೆ ಲೀಗಿನ ಅಜ್ಞೆ ಬೇಕಾಗಿದೆ. ಅದು ಅರ್ಥವಾಗುವ ಮಾತು. ಪ್ರಾಂತದಲ್ಲಿ ಲೀಗ ಸರಕಾರವಿದೆ. ಆದರೆ ಅದರಿಂದ ಆ ಸರಕಾರ ಲೀಗಿನ ಹೊರಗಿರುವವರನ್ನೆಲ್ಲ ಉಪೇಕ್ಷಿಸಬೇಕೆಂದು ಅರ್ಥವಾಗುವದಿಲ್ಲ."

ಮುನ್ನಾ ದಿನ ಕಾಯದೇ-ಅಝುಮ ಜಿನ್ನಾ ಸಾಹೇಬರ ಹೇಳಿಕೆಯನ್ನು ಕುರಿತು ತಾವಂದುದನ್ನೇ ಮತ್ತೆ ಗಾಂಧೀಜಿ ಪುನರುಚ್ಚರಿಸಿದರು. ಮುಸ್ಲಿಮರು ಹೃದಯ ಪರೀಕ್ಷೆ ಮಾಡಿಕೊಂಡು ಆ ಸಂದೇಶವನ್ನು ಪಾಲಿಸಿದ್ದೇವೋ ಇಲ್ಲವೋ ಕೇಳಿಕೊಳ್ಳಲಿ. "ನನಗೆ ತಿಳಿದಮಟ್ಟಿಗೆ, ಬಲಾತ್ಕಾರದ ಮತಾಂತರ ಮತ್ತು ಸ್ತ್ರೀಯರ ಮೇಲಿನ ಅತ್ಯಾಚಾರ ಇವುಗಳಿಗೆ ಇಸ್ಲಾಮದ ಸಮ್ಮತಿಯಿಲ್ಲ. ಇಸ್ಲಾಮವನ್ನು ಯಾರ ಹೃದಯ ಸ್ವೀಕರಿಸುವದಿಲ್ಲವೋ ಅವರು ಬಾಯಿಂದ "ಕಲಮಾ" ಪಠಿಸಿದರೇನು ಫಲ? ಅದ್ದರಿಂದ ನೀವು ಹಿಂದೂಗಳ ಮಿತ್ರರಾಗಿರಬೇಕೋ ಶತ್ರುಗಳಾಗಿರಬೇಕೋ ಎಂದು ನಿಮ್ಮ ಧುರೀಣರನ್ನು ಕೇಳಿಕೊಂಡು ನನಗೆ ತಿಳಿಸಿರಿ. ನೀವು ಶತ್ರುಗಳಾಗಿರಬಯಸಿದರೆ ಹಿಂದುಗಳನ್ನು ಪೂರ್ವ ಬಂಗಾಲದಿಂದ ಹೊರಟು ಹೋಗಲು ಹೇಳಬೇಕಾಗುವದು. ನನ್ನಮಟ್ಟಿಗೆ ನಾನು ಉಭಯತರಲ್ಲಿ ಮನಸ್ಸು ಕೂಡುವ ವರೆಗೆ ಪೂರ್ವ ಬಂಗಾಲದಲ್ಲೇ ಉಳಿಯಬಂದಿದ್ದೇನೆ."

ಕಾಝಿರಖಿಲ

೧೭—೧೧—೪೬

—ಪ್ಯಾರೇಲಾಲ

### ಹೊಸ ಕಾಂಗ್ರೆಸ್ ಕಾರ್ಯಸಮಿತಿ

ಕಾಂಗ್ರೆಸ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ ಕಾರ್ಯ ಸಮಿತಿಯಲ್ಲಿ ಕೆಳಗಿನವರನ್ನು ಆರಿಸಿಕೊಂಡಿರುತ್ತಾರೆ.

೧) ಮೌಲಾನಾ ಅಬುಲ ಕಲಂ ಆಝಾದ
೨) ಪಂ. ಜವಾಹರಲಾಲ ನೆಹರು
೩) ಸರದಾರ ವಲ್ಲಭಭಾಯಿ ಪಟೇಲ
೪) ಶ್ರೀಮತಿ ಸರೋಜಿನಿ ನಾಯಡು
೫) ಡಾ. ರಾಜೇಂದ್ರ ಪ್ರಸಾದ
೬) ಖಾನ ಅಬ್ದುಲ ಗಫರಖಾನ
೭) ಶ್ರೀ ಶರಚ್ಚಂದ್ರ ಬೋಸ
೮) ಶ್ರೀ ರಾಜಗೋಪಾಲಾಚಾರಿ
೯) ಶ್ರೀ ಶಂಕರರಾವ ದೇವ
೧೦) ಶ್ರೀಮತಿ ಕಮಲಾದೇವಿ
೧೧) ಶ್ರೀ ರಫಿ ಅಹಮದ ಕಿದ್ವಾಯಿ
೧೨) ಶ್ರೀ ಜಯಪ್ರಕಾಶ ನಾರಾಯಣ
೧೩) ಸರದಾರ ಪ್ರತಾಪ ಸಿಂಗ
೧೪) ಆಚಾರ್ಯ ಶ್ರೀ ಜುಗಲ ಕಿಶೋರ (ಯುಕ್ತಪ್ರಾಂತ)

ಶ್ರೀಗಳಾದ ಶಂಕರರಾವ ದೇವ ಮತ್ತು ಜುಗಲ ಕಿಶೋರರು ಪ್ರಧಾನ ಕಾರ್ಯದರ್ಶಿಗಳೆಂದು ಕೆಲಸ ಮಾಡುವರು. ಸರದಾರ ಪಟೇಲರು ಕೋಶಾಧ್ಯಕ್ಷರಾಗಿಯೆ ಉಳಿಯುವರು.

# ಕರ್ನಾಟಕ

### ಧಾರವಾಡ

ಗದಗ ಕಾಟನ್ ಸೇಲ ಸೋಸಾಯಿಟಿಯ ನೌಕರರು ೧೪ ನೇ ತಾರೀಖಿನಿಂದ ಸಂಪು ಹೂಡಿದ್ದರು. ರಾ. ಬ. ಲಕ್ಷ್ಮೇಶ್ವರ ಮತ್ತು ... ಸಾ. ಇನಾಮತಿಯವರು ಮಧ್ಯಸ್ಥಿಕೆ ನಡೆಸಿ ಕಾರಕೂನರಿಗೆ ಯೋಗ್ಯ ಅಶ್ವಾಸನ ಕೊಟ್ಟದ್ದರಿಂದ ತಾ ೨೧ ರಿಂದ ಕೆಲಸಕ್ಕೆ ತಿರುಗಿ ಹೋಗಿರುವರು.

ಮುಂಬಯಿ ವಿಶ್ವವಿದ್ಯಾಲಯದ ಕಮೀಶನ್ನಿನ ಡಾ. ಉಪ್ಪಲ, ಡಾ ಸಹಸ್ರಬುದ್ಧೆ, ಬಿ. ಎಸ್. ಪಟೇಲರು ಧಾರವಾಡಕ್ಕೆ ಬಂದು ಧಾರವಾಡದಲ್ಲಿ ಸ್ಥಾಪಿತವಾಗಲಿರುವ ಒಕ್ಕಲತನ ಕಾಲೇಜಿನ ಸಂಬಂಧದಲ್ಲಿ ಕರ್ನಾಟಕ ಕಾಲೇಜ ಪ್ರಿನ್ಸಿಪಾಲರೊಡನೆ ವಿಚಾರವಿನಿಮಯ ಮಾಡಿ ಹೋದರು.

ಶ್ರೀ ರಂಗವಿಠ್ಠಲ ಮತ್ತು ಶ್ರೀಮತಿ ರೋಹಿಣಿಯವರು ಹುಬ್ಬಳ್ಳಿ ಧಾರವಾಡಗಳಿಗೆ ಬಂದು ಮನೋಹರ ನೃತ್ಯ ಪ್ರಯೋಗಗಳನ್ನು ಮಾಡಿ ತೋರಿಸಿದರು. ಉಷಾಸ್ವಪ್ನ, ಸ್ವಪ್ನವಾಸವದತ್ತ, ಪತಂಗ ನೃತ್ಯ ಮೊದಲಾದವುಗಳು ಮನೋಹರವಾಗಿದ್ದವು.

ಧಾರವಾಡ ಜಿಲ್ಹಾ ಗ್ರಾಮೋದ್ಯೋಗ ಮಂಡಳಕ್ಕೆ ಸರಕಾರದವರು ಶ್ರೀ. ಸಿ. ಎಸ್. ಹುಲಕೋಟಿ, ವೀರಯ್ಯ ಗುಡ್ಡದಮಠ, ಮಲ್ಲೇಶಪ್ಪ ಬಣಗಾರ ಹಾಗು ಪರಮಣ್ಣಾ ಹೊಸಮನಿಯವರನ್ನು ಸದಸ್ಯರನ್ನಾಗಿ ನೆಮಿಸಿದ್ದಾರೆ. ಶ್ರೀ ಹುಲಕೋಟಿಯವರು ಮಂಡಳದ ಉಪಾಧ್ಯಕ್ಷರು ಮತ್ತು ಶ್ರೀ ಜಿ. ವ್ಹಿ. ಹಳ್ಳಿಕೇರಿಯವರು ಜೊತೆ ಕಾರ್ಯದರ್ಶಿಗಳಾಗಿರುವರು.

ಮುಂಬಯಿಯ ರಾಯಲ್ ಇನ್‌ಸ್ಟಿಟ್ಯೂಟ ಆಫ್ ಸಾಯನ್ಸಕ್ಕೆ ವರ್ಗವಾಗಿ ತೆರಳಲಿರುವ ಪ್ರೊ. ಎಲ್. ಕೆ. ಗುಂಜೀಕರರನ್ನು ಬೀಳ್ಕೊಡುವ ಸಮಾರಂಭ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಪರವಾಗಿ ನಡೆಯಿತು.

### ಬೆಳಗಾವಿ

ಅ. ಭಾ. ಮೋಟರ ಯೂನಿಯನಗಳ ಕಾಂಗ್ರೆಸ್ಸಿನ ದಿಲ್ಲಿ ಪರಿಷತ್ತು ಗಲಭೆ ಮೂಲಕ ನವಂಬರ ೨೯-೩೦ ಹಾಗೂ ಡಿಸೆಂಬರ ೧ ಕ್ಕೆ ಜರಗುವದಿಲ್ಲೆಂದೂ ಅದು ಮುಂದೆ ಬದ್ದಿರುವದೆಂದೂ ತಾರೀಕನ್ನು ಹಿಂದಿನಿಂದ ತಿಳಿಸಲಾಗುವದೆಂದೂ ಪ್ರಸಿದ್ಧಿಸಲಾಗುತ್ತದೆ.

ಕಳೆದ ವಾರ ಶ್ರೀ ಅಣ್ಣಾಸಾಹೇಬ ಲಕ್ಕಿಯವರ ಅಧ್ಯಕ್ಷತೆಯಲ್ಲಿ ಕ. ಪ್ರಾಂ. ಹಿಂದೀ ಪ್ರಚಾರ ಸಭೆಸೇರಿ ಮುಂದಿನ ಫೆಬ್ರುಅರಿ ಮಾರ್ಚ ತಿಂಗಳಲ್ಲಿ ೫ ನೇ ಪ್ರಾಂತೀಯ ಹಿಂದೀ ಪ್ರಚಾರ ಸಮ್ಮೇಲನ ಜರಗಿಸಬೇಕೆಂದು ನಿಶ್ಚಯಿಸಲಾಯಿತು. ಆ ಕಾಲಕ್ಕೆ ಹಿಂದುಸ್ತಾನೀ ಶಿಕ್ಷಕರ ಪರಿಷತ್ತು ಹಾಗು ವಿಧಾಯಕ ಶಿಕ್ಷಣ ಪ್ರದರ್ಶನಗಳನ್ನು ಏರ್ಪಡಿಸಲಾಗುವದು.

ಗೋಕಾಕ ತಾಲೂಕ ರೈತ ಪರಿಷತ್ತು ೨೪ ಕ್ಕೆ ಡಾ. ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ ಪಾಟೀಲ ವೀರನಗೌಡರು ಅದರ ಉದ್ಘಾಟನ ಮಾಡಿದರು. ಜಿಲ್ಹೆಯ ಪ್ರಮುಖರು ಮತ್ತು ತಾಲೂಕಿನ ಬಹುತರ ರೈತರು ಬಂದಿದ್ದರು. ೨೦ ಗೊತ್ತುಗಳು ಸ್ವೀಕೃತವಾದವು. ದಡ್ಡೀ ಯೋಜನೆ ... ಕೈಕೊಳ್ಳಬೇಕು, ಈಗಿದ್ದ ಅಣೆಕಟ್ಟಿನಿಂದ ರೈತರಿಗೆ ಸಾಕಷ್ಟು ನೀರು ಸಿಕ್ಕುವುದಿಲ್ಲ. ಆದುದರಿಂದ ಗಿರಣಿಗೆ ನೀರು ಕಡಮೆ ಮಾಡಿಯಾದರೂ ರೈತರಿಗೆ ಕೊಡಬೇಕು. ಕಾಂಗ್ರೆಸ್ ಹೆಸರಿನಲ್ಲಿ ಹಣ ಕೂಡಿಸುವದರ ನಿಷೇಧ ಮೊದಲಾದವುಗಳು ಮುಖ್ಯವಾಗಿರುವವು.

ಜಿಲ್ಹಾಧ್ಯಕ್ಷ ಶೇಖ ಸಾಹೇಬರು ೨೦ ರಿಂದ ೨೫ ರವರೆಗೆ ಗೋಕಾಕ ತಾಲೂಕಿನಲ್ಲಿ ಸಂಚರಿಸಿ ಕಾಂಗ್ರೆಸ ಸಂದೇಶ ಬೀರಿದರು.

### ಬಳ್ಳಾರಿ

ಹೊಸಪೇಟೆಯಲ್ಲಿ ಮದ್ಯಪಾನ ಪ್ರತಿಬಂಧಕಾರಿಯಲ್ಲಿರುವದರಿಂದ ಅಲ್ಲಿನ ಸುಮಾರು ೫೦೦ ಜನರು ಪ್ರತಿ ಮಧ್ಯಾಹ್ನ ಮುನಿರಾಬಾದಿಗೆ ಹೋಗಿ ಸೆರೆ ಸಿಂದಿ ಕುಡಿದು ತಿರುಗಿಬರುತ್ತಾರೆ. ರೈಲುಗಾಡಿಗಳು ಹೊಸಪೇಟೆಯಲ್ಲಿಯೇ ಕೂಡುವಂತೆ ಮಾಡಿದರೆ ಒಳಿತೆಂದು ಕೇಳಿದ್ದಕ್ಕೆ ರೇಲ್ವೆ ಖಾತೆಯವರು ವೇಳೆ ಬದಲಾಯಿಸುವದು ಶಕ್ಯವಿಲ್ಲೆಂದು ತಿಳಿಸಿದ್ದಾರೆ.

ಹೊಸಪೇಟೆ ಸಕ್ಕರೆ ಗಿರಣಿಗೆ ಕೊಡುವ ಕಬ್ಬಿನ ಕನಿಷ್ಠ ಬೆಲೆಯನ್ನು ಟನ್ನಿಗೆ ೩೪ ರೂಪಾಯಿಗಳಂತೆ ಮದ್ರಾಸ ಸರಕಾರದವರು ನಿರ್ಣಯಿಸಿ ಸಕ್ಕರೆ ಗಿರಣಿ ಇನ್ನೂ ಪ್ರಾರಂಭವಾಗಿಲ್ಲ.

ಅದವಾನಿಯಲ್ಲಿ ಮಧ್ಯಭಾಗದಲ್ಲಿರುವ ಹನುಮಂತದೇವರ ಗುಡಿಯನ್ನು ಹರಿಜನರಿಗೆ ಮುಕ್ತ ಮಾಡುವ ಸಮಾರಂಭವನ್ನು ವಿಜೃಂಭಣೆಯಿಂದ ಜರಗಿಸಲಾಯಿತು. ಜಿಲ್ಹಾ ಕಾಂಗ್ರೆಸ ಕಮಿಟಿ ಉಪಾಧ್ಯಕ್ಷರಾದ ಕೆ. ಬಲರಾಮರು ಭಾಷಣ ಮಾಡಿ ಎಲ್ಲ ಮಂದಿರಗಳು ಹರಿಜನರಿಗೆ ಮುಕ್ತದ್ವಾರವಾಗಬೇಕೆಂದು ಹೇಳಿದರು. ಇಲ್ಲಿಯ ನಗರೇಶ್ವರ ದೇವಾಲಯವೂ ಶೀಘ್ರದಲ್ಲಿ ಹರಿಜನರಿಗೆ ಮುಕ್ತದ್ವಾರವಾಗುವದಾಗಿ ತಿಳಿಯುತ್ತದೆ,

ಬಳ್ಳಾರಿ ಜಿಲ್ಹಾ ಮ್ಯಾಜಿಸ್ಟ್ರೇಟರು ೧೪೪ ನೇ ಕಲಮಿನನ್ವಯ ಹುಕುಮು ಹೊರಡಿಸಿ ಕಂಪ್ಲಿಯಲ್ಲಿ ಹಿಂದುಗಳ ಹಾಗು ಮುಸಲ್ಮಾನರ ಮೆರವಣಿಗೆಗಳನ್ನು ಹೊರಡಿಸಬಾರದೆಂದು ಸಾರಿದ್ದಾರೆ. ಮೊಹರಮ್ಮದ ನಿಮಿತ್ತ ಮುಸಲ್ಮಾನರು ತೆಗ್ಗು ತೋಡಬಾರದೆಂದೂ ಪ್ರತಿಬಂಧಿಸಲಾಗಿದೆ.

ಅಣುಮಂತ್ರಾಲಯದ ರಾತ್ರಿ ಅನ್ನಛತ್ರದ ವ್ಯವಸ್ಥಾಪಕರಾದ ಶ್ರೀ ದಾಸ ಶಾಮಾಚಾರ್ಯರು ಛತ್ರಕ್ಕೆ ಧನಸಹಾಯ ಮಾಡಬೇಕೆಂದೂ ಪಾತ್ರೆ ಪಳಿಗೆಗಳನ್ನು ಕೊಡಬೇಕೆಂದೂ ಬಿನ್ನವಿಸಿಕೊಂಡಿದ್ದಾರೆ. ಈ ಮೊದಲು ಬಿನ್ನವಿಸಿಕೊಂಡಿದ್ದರೂ ಸಾಕಷ್ಟು ಸಹಾಯ ದೊರೆಯದ್ದರಿಂದ ಮತ್ತೆ ಬಿನ್ನವಿಸಿಕೊಳ್ಳಲಾಗಿದೆಂದು ಅವರು ಪ್ರಕಟಿಸಿದ್ದಾರೆ.

### ಉತ್ತರ ಕನ್ನಡ

ಹಳ್ಯಾಳ ಮ್ಯುನಿಸಿಪಾಲಿಟಿಯ ಸಭೆ ೧೪ ನೇ ತಾರೀಕಿಗೆ ಸೇರಿ ಡಾ. ಗಣಪತರಾವ ಮಹಾಜನರು ಅಧ್ಯಕ್ಷರಾಗಿಯೂ ಮೋದಿನಸಾಹೇಬ ಕಂಟ್ರಾಕ್ಟರರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಪ್ರಾರಂಭದಲ್ಲಿ ರಾ. ಸಾ. ಅಡಿವೆಪ್ಪನವರ ಪಕ್ಷದವರು ಶ್ರೀ ಮುಣಿಯಾರರನ್ನೂ ಶ್ರೀ ಮಹಾಜನರ ಪಕ್ಷದವರು ಶ್ರೀ ರಾಮಾಸಿಂಗರನ್ನೂ ಚೇರಮನ್ ಸ್ಥಳಕ್ಕೆ ಸೂಚಿಸಿದರು. ಇಷ್ಟರಲ್ಲಿ ಶ್ರೀ ಅಡಿವೆಪ್ಪನವರು ಏನೋ ಕಾರಣ ಮುಂದೆ ಮಾಡಿ ಮಿನಿಟಬುಕ್ಕು ತೆಗೆದುಕೊಂಡು ಹೋದರು. ಹೊಸ ಪುಸ್ತಕ ತಯಾರ ಮಾಡಿ ಸಭೆ ಸೇರಿ ಮೇಲೆ ಬರೆದಂತೆ ಅಧ್ಯಕ್ಷರಾಯ್ಕೆ ಅಯಿತು.

ಮುಂಬಯಿ ಸರಕಾರದ ಒಕ್ಕಲತನ ಮತ್ತು ಅರಣ್ಯಖಾತೆಯ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ೨೩ ಕ್ಕೆ ಕಾರವಾರಕ್ಕೆ ಬಂದಿದ್ದರು. ಅವರಿಗೆ ಮುನಿಸಿಪಾಲಿಟಿಯವರೂ ಕರ್ನಾಟಕ ಸಂಘದವರೂ ಮಾನಪತ್ರ ಕೊಟ್ಟರು. ಅವುಗಳಿಗೆ ಉತ್ತರ ಕೊಡುತ್ತ ಮಂತ್ರಿಗಳು ಕಾರವಾರ ಜಿಲ್ಹೆಯ ಬೆಳವಣಿಗೆಗಾಗಿ ಸರಕಾರದವರು ವಿಚಾರಿಸುತಿರುವರೆಂದು ಹೇಳಿದರು.

ಕಾರವಾರದಿಂದ ಗೋವೆಗೆ ಹೋಗುವಾಗ ಪೊಳೆಯ್ಯಾ ಎಂಬ ನಾಕೆ ದಾಟಬೇಕಾಗುತ್ತದೆ. ಕಳೆದ ತಿಂಗಳಲ್ಲಿ ಅದಕ್ಕೆ ಯಾರೋ ಬೆಂಕಿ ಹಚ್ಚಲಿಕ್ಕೆ ಪ್ರಯತ್ನಿಸಿದ್ದರಂತೆ. ಆ ಸಿಟ್ಟಿನಿಂದ ಈಗ ಕಾರವಾರ ದಿಕ್ಕಿನಿಂದ ಗಾಂಧಿ ಟೊಪ್ಪಿಗೆ ಹಾಕಿಕೊಂಡು ಹೋಗುವವರನ್ನೆಲ್ಲ ಹಿಡಿದು ಹಾಕುವ ಅಥವಾ ಥಳಿಸುವ ಅತ್ಯಾಚಾರ ಈ ನಾಕೆಯಲ್ಲಿ ಪ್ರಾರಂಭವಾಗಿದೆ. ಈ ಬಗ್ಗೆ ಶ್ರೀ ಮಾವಿನಕುರ್ವೆ ವಕೀಲರು ಗೋವೆಯಲ್ಲಿರುವ ನಡುಗಾಲ ಸರಕಾರದ ಕೌನ್ಸಿಲರಿಗೆ ತಕರಾರು ಮಾಡಿದ್ದಾರೆ.

### ಕನ್ನಡ ಸಂಸ್ಥಾನ

ಜಯಸಿಂಗಪೂರ ಸ್ಟೇಶನದಿಂದ 'ಸಾಂಗಲಿಯ ಕಡೆಗೆ ಸಾಗಿದ ಒಂದು ಮೋಟಾರಿನ ಮೇಲೆ ೧೯ ನೇ ರಾತ್ರಿ ೧೦ ರ ಸುಮಾರಕ್ಕೆ ದಾಳಿ ಮಾಡಲಾಯಿತು. ಒಂದು ಬಂಡಿ ಅಡ್ಡ ನಿಂತದ್ದರಿಂದ ಮೋಟಾರ ನಿಲ್ಲಿಸಬೇಕಾಯಿತು. ಅಷ್ಟರಲ್ಲಿ ೧೨-೧೫ ಜನ ಒಮ್ಮೆಲೆ ಮುತ್ತಿದ್ದಾರೆ. ಒಳಗಿನ ಪ್ರವಾಸಿಕರನ್ನೂ-ಹೆಂಗಸರನ್ನೂ ಥಳಿಸಿ ೧೫ ಸಾವಿರ ರೂಪಾಯಿಯಷ್ಟು ಹಣ ಹಾಗು ಆಭರಣ ಅಪಹರಿಸಿಕೊಂಡು ಹೋದರು.

ಇದೇ ಆಕ್ಟೋಬರದಲ್ಲಿ ಜರುಗಿದ ಮುಂಬಯಿ ವಿಶ್ವವಿದ್ಯಾಲಯದ ಎರಡನೆ ಎಲೆಲ್ ಬಿ ಪರೀಕ್ಷೆಯಲ್ಲಿ ಮೈಸೂರಿನ ಕುಮಾರಿ ರತ್ನಾಬಾಯಿ ಚಿತ್ತೂರ ಇವರು ಉತ್ತೀರ್ಣರಾಗಿರುವರು. ಇವರು ಕನ್ನಡತಿಯರಿದ್ದು ಮೈಸೂರ ಸಂಸ್ಥಾನದಲ್ಲಿ ಕಾಯದೆ ಪರೀಕ್ಷೆಯಲ್ಲಿ ಪಾಸಾದ ಮೊದಲಿನ ಹೆಣ್ಣುಮಗಳು.

ನವಂಬರ ೧೬ ನೇ ತಾರೀಕು ಮಧ್ಯಾಹ್ನ ಮುದನಕೇರಿ ಹಾಗು ಇನ್ನಿತರ ಹಳ್ಳಿಗಳ ಸುಮಾರು ೨೦೦ ಜನರು ಬಂದೂಕು ಕೊಡಲಿ ಮೊದಲಾದ ಪ್ರಾಣಘಾತಕ ಆಯುಧಗಳೊಡನೆ ಜಗಳೂರು ತಾಲೂಕಿನಲ್ಲಿ ಅಯ್ಯನಹಳ್ಳಿಯನ್ನು ಹೊಕ್ಕು ಜನರನ್ನು ಗಾಯಗೊಳಿಸಿದ್ದಲ್ಲದೆ ಕುರಿ ಕುರಿಮರಿ ಎತ್ತು ಕಂಬಳಿ ಬಂಡಿ ಮೊದಲಾದವುಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ.

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸಿನ ದ್ವಿತೀಯ ಮಹಾ ಸಮ್ಮೇಲನ ದಿಸೆಂಬರ ೭ ಮತ್ತು ೮ ನೇ ದಿನಾಂಕ ಶಿವಮೊಗ್ಗೆಯಲ್ಲಿ ಜರಗುವದು. ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರು ಸಮ್ಮೇಲನದ ಅಧ್ಯಕ್ಷತೆ ವಹಿಸಲಿದ್ದು ಡಾ. ಲೋಹಿಯಾರವರು ಉದ್ಘಾಟನ ಮಾಡುವರು. ಸೇವಾದಲದ ಕೂಚಿನಲ್ಲಿ ಭಾಗ ವಹಿಸಲು ಡಾ. ಹರ್ಡೀಕರರನ್ನು ಹಾಗು ಕ್ಯಾಪ್ಟನ್ ಲಕ್ಷ್ಮಿಯವರನ್ನು ಆಮಂತ್ರಿಸಲಾಗಿದೆ.

ಕೊಲ್ಹಾಪುರ ನಗರಸಭೆಯ ಸುಮಾರು ೫೦೦ ನೋಕರರು ವೇತನ ಹಾಗು ತುಟ್ಟಿಭತ್ತೆ ಸಂಬಂಧದಲ್ಲಿ ೨೪ ನೇ ತಾರೀಕಿನಿಂದ ಸಂಪು ಹೂಡಿರುವರು.

ಕ್ಯಾತ್ಸಂದ್ರದಲ್ಲಿ ವೈದ್ಯಾಲಯವೊಂದನ್ನು ಸ್ಥಾಪಿಸಲು ಸಭೆಸೇರಿ ಸಮಿತಿಯೊಂದನ್ನು ನೇಮಿಸಲಾಯಿತು.

### ಪಂಜಾಬ

ಪಂಜಾಬದ ಗವರ್ನರರು ಸಾರ್ವಜನಿಕ ಅರ್ಡರನ್ನು ಹೊರಡಿಸಿ ಸಂಶಯಿತರನ್ನು ಸೆರೆ ಹಿಡಿದು ೧ ತಿಂಗಳ ಸ್ಥಾನಬದ್ಧತೆಯಲ್ಲಿಡಲಿಕ್ಕೂ ಶೈಕ್ಷಣಿಕ ಸಂಸ್ಥೆ ನೀರು ವಿದ್ಯುಚ್ಛಕ್ತಿ ಹಾಗು ನಿತ್ಯೋಪಯೋಗಿ ವಸ್ತುಗಳ ಪೂರೈಕೆ ನಿಯಂತ್ರಿಸಲಿಕ್ಕೂ ಕನಾಯಿತು, ಮೆರವಣಿಗೆ, ಸಭೆ, ವಾಹನ ಸಂಚಾರ ಮೊದಲಾದವುಗಳನ್ನು ಪ್ರತಿಬಂಧಿಸಲಿಕ್ಕೂ ಸರಕಾರ ಹಾಗು ಜಿಲ್ಹಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ.

### ಜಗದ್ಗುರು ಗಂಗಾಧರ ಕಾಮರ್ಸ ಕಾಲೇಜ

ಹುಬ್ಬಳ್ಳಿಯಲ್ಲಿ ಜಗದ್ಗುರು ಗಂಗಾಧರ ಕಾಮರ್ಸ ಕಾಲೇಜು ಸ್ಥಾಪಿಸಬೇಕೆಂದು ಕರ್ನಾಟಕಲಿಂಗಾಯತ ಎಜ್ಯುಕೇಶನ ಸೊಸಾಯಿಟಿಯವರು ಗೊತ್ತು ಪಡಿಸಿದ್ದಾರೆ. ಶ್ರೀಮನ್ನಿರಂಜನ ಜಗದ್ಗುರು ಗುರುಸಿದ್ಧ ರಾಜೇಂದ್ರ ಯೋಗೀಂದ್ರ ಮಹಾಸ್ವಾಮಿಗಳು ಈ ಕಾಲೇಜಿಗಾಗಿ ಒಂದು ಲಕ್ಷ ರೂಪಾಯಿ ಕೊಟ್ಟು ಅನುಗ್ರಹಿಸಿರುವರು. ಅಲ್ಲದೆ ಕರ್ನಾಟಕ ವರ್ಚ್ ಸಂಘದವರು ಒಂದು ಲಕ್ಷರೂಪಾಯಿ ಕಾಣಿಕೆಕೊಡಲಿರುವರು. ಮಹಾಸ್ವಾಮಿಗಳು ದಯಪಾಲಿಸಿದ ಒಂದು ಲಕ್ಷ ರೂಪಾಯಿಗಳನ್ನು ಹಿಡಿದು ಈಗಾಗಲೆ ೧೮೯೩೦೦ ರೂಪಾಯಿ ಕೂಡಿವೆ.

ಈ ಕಾಲೇಜಿಗಾಗಿ ನಾಲ್ಕು ಲಕ್ಷ ರೂಪಾಯಿಗಳು ಬೇಕೆಂದು ಅಂದಾಜ ಮಾಡಲಾಗಿದೆ. ೨೦೦೦ ರೂ., ೪೦೦೦ ರೂ., ೬೦೦೦ ರೂಪಾಯಿ ಕೊಡುಗೆಗಳನ್ನು ಸಲ್ಲಿಸಿದ ಮಹನೀಯರ ಹೆಸರುಗಳನ್ನು ಅನುಕ್ರಮವಾಗಿ ವಸತಿ ಗೃಹಗಳ ಕೋಣೆಗಳಿಗೂ ವರ್ಗದ ಕೋಣೆಗಳಿಗೂ ಉಪನ್ಯಾಸ ಕೋಣೆಗಳಿಗೂ ಇಡಲಾಗುವದು. ಇದಕ್ಕೂ ಹೆಚ್ಚು ಕೊಡುಗೆ ಕೊಡುವವರ ಹೆಸರುಗಳನ್ನು ಪುಸ್ತಕಾಲಯ ಮೊದಲಾದ ವಿಭಾಗಗಳಿಗೆ ಕೊಡಲಾಗುವದು. ಕರ್ನಾಟಕದ ಕೊಡುಗೈ ದೊರೆಗಳು ಮುಕ್ತಹಸ್ತದಿಂದ ಸಹಾಯ ಮಾಡಬೇಕಾಗಿ ವ್ಯವಸ್ಥಾಪಕರು ಬಿನ್ನವಿಸುತ್ತಾರೆ.

### ಬಂಗಾಲ

ಅಮೇರಿಕೆಯಲ್ಲಿ ಪ್ರಸಿದ್ಧವಾಗುತಿರುವ 'ಲಾಯಿಫ' ಎಂಬ ಇಂಗ್ಲೀಷ ಪತ್ರಿಕೆಯ ಇದೇ ಸಪ್ಟೆಂಬರ ತಿಂಗಳ ೩೦ ನೇ ದಿನಾಂಕದ ಸಂಚಿಕೆಯಲ್ಲಿ ಆಕ್ಷೇಪಾರ್ಹ ಬರೆಹವಿದ್ದಿತೆಂದು ಬಂಗಾಲ ಪ್ರಾಂತದಲ್ಲಿ ಅದನ್ನು ಜಪ್ತ ಮಾಡಲಾಗಿದೆ.

ಕಲಕತ್ತೆಯ ಅಮೃತಬಜಾರ ಪತ್ರಿಕೆಯ ಆಕ್ಟೋಬರ ೨೮ ನೇ ದಿನಾಂಕದ ಸಂಚಿಕೆಯಲ್ಲಿ ಡಾ. ಶ್ಯಾಮಪ್ರಸಾದ ಮುಕರ್ಜಿಯವರ ಜಾತಿ ಗಲಭೆ ಬಗ್ಗೆ ಹೇಳಿಕೆಯನ್ನು ಪ್ರಸಿದ್ಧಿಸಿದ್ದರಿಂದ ಆ ಪತ್ರಿಕೆಯ ೩ ಸಾವಿರ ರೂಪಾಯಿ ಠೇವನ್ನು ಜಪ್ತ ಮಾಡಿದ್ದಲ್ಲದೆ ಪತ್ರಿಕಾ ಮುದ್ರಣಾಲಯದವರಿಂದ ಎರಡುಸಾವಿರ ರೂಪಾಯಿ ಹೊಸ ಠೇವು ಕೇಳಿದ್ದಾರೆ. ೨೮ ನೇ ದಿನಾಂಕದ ಪತ್ರಿಕೆಯ ಪ್ರತಿಗಳನ್ನು ಜಪ್ತ ಮಾಡಲಾಗಿದೆ.

ಕಲಕತ್ತೆಯ ನ್ಯಾಶನ್ಯಾಲಿಸ್ಟ ಪತ್ರಿಕೆಗೆ ೨೦೦೦ ರೂ. ಜಾಮೀನ ಬೇಡಲಾಗಿದೆ. ಮುದ್ರಣಾಲಯದವರಿಂದಲೂ ಅಷ್ಟೇ ಹಣ ಬೇಡಲಾಗಿದೆ.

ಬಂಗಾಲ ಮಂತ್ರಿಮಂಡಲದಲ್ಲಿ ದಲಿತ ವರ್ಗದ ನಾಗೇಂದ್ರ ನಾರಾಯಣ ಗಾಯ ಮತ್ತು ದ್ವಾರಕಾನಾಥ ಬರೇರಿಯವರನ್ನೂ ಮುಸ್ಲಿಂ ಲೀಗಿನ ಫಜಲುಲ್ ರಹಿಮಾನರನ್ನೂ ತಾರಾನಾಥ ಮುಕರ್ಜಿ ಎಂಬ ಹಿಂದುಗಳನ್ನೂ ಹೊಸದಾಗಿ ಮಂತ್ರಿಗಳನ್ನಾಗಿ ಸೇರಿಸಿಕೊಳ್ಳಲಾಗಿದೆ.

# ಹಿಂದುಸ್ತಾನ

## ಮುಂಬಯಿ

೭೦೦ ಪೌಂಡು ಭಾರದ ೧೨ ಫೂಟು ಉದ್ದವಾದ ದೊಡ್ಡದೊಂದು ಸಮುದ್ರ ಮೀನನ್ನು ಮುಂಬಯಿಯಿಂದ ೩೦ ಮೈಲುಗಳ ಮೇಲೆ ಮೀನಗಾರರು ಹಿಡಿದು ದಂಡೆಗೆ ತೆಗೆದುಕೊಂಡು ಬಂದಿದ್ದರು. ಅದನ್ನು ಕೊಯ್ಯಲಾಗಿ ಒಳಗೆ ಬಟ್ಟೆ ಸಹಿತ ಮನುಷ್ಯನ ಅಸ್ಥಿಪಂಜರವು ಕಂಡು ಬಂದಿತು. ಇತ್ತೀಚಿಗಿನ ಬಿರುಗಾಳಿಯಲ್ಲಿ ಸಮುದ್ರದಲ್ಲಿ ಮುಳುಗಿದವನೊಬ್ಬನನ್ನು ಈ ಮೀನು ನುಂಗಿರಬಹುದೆಂದು ಊಹಿಸಲಾಗಿದೆ.

ಮುಂಬಯಿ ಜಾಮನಗರ ವಿದ್ಯುಚ್ಛಕ್ತಿ ಗೃಹದಲ್ಲಿಯ ಎಣ್ಣೆ ಹೌದುಗಳು ಕಳೆದವಾರ ಒಮ್ಮೆಲೆ ಸ್ಫೋಟವಾಗಿ ಭಯಂಕರ ಉರಿಯಹತ್ತಿದರಿಂದ ಜಾಲಸುರಾ ನೌಕಾ ಠಾಣೆಯ ಕಮಾಂಡಿಂಗ ಅಧಿಕಾರಿಗಳು ತಮ್ಮ ಅಗ್ನಿನಾಶಕ ಯಂತ್ರಗಳನ್ನೂ ಅಗ್ನಿನಾಶಕ ದಲಗಳನ್ನೂ ಬೆಂಕಿ ಆರಿಸಲು ಕೊಟ್ಟು ಕಳುಹಿದರು. ಅವರು ೩ ಗಂಟೆ ಬೆಂಕಿಯೊಡನೆ ಹೋರಾಡಿ ಅದನ್ನು ನಂದಿಸಿದರು.

ಅಯ. ಅಯ. ಚುಂದ್ರಿಗಾರರು ನಡುಗಾಲ ಸರಕಾರದ ಮಂತ್ರಿಗಳಾಗಿ ಹೋದ್ದರಿಂದ ತೆರವು ಬಿದ್ದ ಮುಂಬಯಿ ಶಾಸನ ಸಭೆಯ ಸದಸ್ಯಸ್ಥಳಕ್ಕೆ ಮುಸ್ಲಿಂಲೀಗಿನ ಎಂ ಎಂ ಯಾಮಾನಿಯವರು ಅವಿರೋಧ ಆರಿಸಿ ಬಂದಿದ್ದಾರೆ.

ಜೋಶಿ ವಿ. ಆರ್. ವಿಲಿಂಗಡನ ಕಾಲೇಜ ಸಾಂಗಲಿ, ಲೋಂಢೆ ರತ್ನಾಕರ ಜೀವಣರಾವ ರಾಜಾರಾಮ ಕಾಲೇಜ ಕೊಲ್ಹಾಪೂರ, ಪಾಟೀಲ ನೀಲಕಂಠಗೌಡ ಚನಬಸನಗೌಡ ಲಿಂಗರಾಜ ಕಾಲೇಜ ಬೆಳಗಾವಿ ಇವರಿಗೆ ೧೯೪೮ ಜನೇವರಿ ವರೆಗೆ ಇಂಟರ ಆರ್ಟ್ಸ ಪರೀಕ್ಷೆಗೆ ಕೂಡಬಾರದೆಂದು ವಿಶ್ವವಿದ್ಯಾಲಯದವರು ನಿರ್ಬಂಧಿಸಿದ್ದಾರೆ.

ಅಜಗಾವಕರ ಸೀತಾರಾಮ ।ಬಾಬೂರಾವ ರಾಜಾರಾಮ ಕಾಲೇಜ ಕೊಲ್ಹಾಪೂರ, ಪಾಟೀಲ ಶಿವನಗೌಡ ಶಂಕರಗೌಡ ಕರ್ನಾಟಕ ಕಾಲೇಜ ಧಾರವಾಡ, ಶಿರೋಳ ವೀರಪ್ಪ ಬಸಪ್ಪ ಲಿಂಗರಾಜ ಕಾಲೇಜ ಬೆಳಗಾವ, ಇವರು ೧೯೪೮ ನೇ ಇಸ್ವಿಯ ಜನೇವರಿ ವರೆಗೆ ಇಂಟರ ಸಾಯನ್ಸ ಪರೀಕ್ಷೆಗೆ ಕೂಡಬಾರದೆಂದು ಮುಂಬಯಿ ವಿಶ್ವವಿದ್ಯಾಲಯದವರು ನಿರ್ಬಂಧಿಸಿದ್ದಾರೆ.

ಬೀಳಗಿ ವಾಸುದೇವ ಶ್ರೀನಿವಾಸ :ಪ್ರತಾಪಸಿಂಹ ಕಾಲೇಜ ಬಡೋದೆ ಇವರಿಗೆ ಅಯ. ಸಾವಂ ಪರೀಕ್ಷೆಗೆ ೧೯೪೮ ಜನೆವರಿವರೆಗೆ ಕೂಡಬಾರದೆಂದು ವಿಧಿಸಲಾಗಿದೆ. ಪರೀಕ್ಷೆಗಳಲ್ಲಿ ಅಕ್ರಮ ಮಾರ್ಗ ಸ್ವೀಕರಿಸಿದ್ದೆ ಈ ಬಗೆಯ ನಿರ್ಬಂಧಕ್ಕೆ ಕಾರಣವಾಗಿದೆ.

ಸಾತಾರಾ ಜಿಲ್ಹೆಯ ವಾಳವೆ ತಾಲೂಕಿನಲ್ಲಿ ಪುಂಡ ಜನರು ಕಳೆದ ೫—೬ ತಿಂಗಳಲ್ಲಿ ಅನೇಕ ದರೋಡೆಗಳನ್ನು ಹಾಕಿ ೫—೬ ಜನರನ್ನು ಕೊಂದದ್ದರಿಂದ ಜನರು ಭಯಭೀತರಾಗಿದ್ದಾರೆ. ೨೦೦ ಸಶಸ್ತ್ರ ಪೋಲೀಸರನ್ನು ಜನರ ಸಂರಕ್ಷಣೆಗಾಗಿ ಕಳಿಸಲಾಗಿದೆ.

ಕುಲಾಬಾ ಜಿಲ್ಹೆಯಲ್ಲಿ ಮಹಾಡದಿಂದ ೫ ಮೈಲು ದೂರದಲ್ಲಿರುವ ಜುಯಿಬುದ್ರುಕ ಹಳ್ಳಿಯಲ್ಲಿ ೪೦೦ ಜನರು ದಾಳಿ ಮಾಡಿ ಒಂದು ಮನೆಯನ್ನು ಸುಟ್ಟದ್ದರಿಂದ ಪೋಲೀಸರು ಅವರ ಮೇಲೆ ಗುಂಡು ಹಾರಿಸಿದ್ದರು. ಇದರಿಂದ ನಾಲ್ವರು ಸತ್ತಿದ್ದು ೧೨ ಜನರು ಗಾಯಗೊಂಡಿರುವರು.

ಮಹಾದೇವಭಾಯರ ಪುಣ್ಯ ಸ್ಮರಣಾರ್ಥ ಖಾನದೇಶದ ಕಾಂಗ್ರೆಸ್ಸಿಗರಾದ ಮಗನಲಾಲ ನಗಿನದಾಸರು ಕೊಟ್ಟ ೫೦೦೦ ರೂಪಾಯಿಗಳನ್ನು ಉರುಳಿ ಕಾಂಚನದಲ್ಲಿಯ ನೈಸರ್ಗಿಕ ಚಿಕಿತ್ಸಾಲಯಕ್ಕೆ ಸ್ಥಳವನ್ನು ಕೊಂಡುಕೊಳ್ಳಲು ಕೊಡಲಾಗಿದೆ.

ಒಕ್ಕಲತನ ಸುಧಾರಣೆಯ ಸಂಬಂಧದಲ್ಲಿ ಮುಂಬಯಿ ಸರಕಾರ ಬೇಗನೆ ಒಂದು ಮಾಸಿಕ ಪತ್ರವನ್ನು ಹೊರಡಿಸಲಿರುವದು.

## ಮದ್ರಾಸ

ತಿರುಪತಿ ವೆಂಕಟರಮಣ ದೇವಸ್ಥಾನವು ಹರಿಜನರಿಗಾಗಿ ಮುಕ್ತದ್ವಾರವಾಗಬೇಕೆಂಬ ಗೊತ್ತುವಳಿಯನ್ನು ದೇವಸ್ಥಾನ ಸಮಿತಿಯವರು ಸ್ವೀಕರಿಸಿದ್ದಾರೆ. ಈ ಬಗ್ಗೆ ಹಿಂದೂ ಸಾರ್ವಜನಿಕರ ಮತ ತಿಳಿದುಕೊಂಡು ಅವಶ್ಯಕ ಅನುಜ್ಞೆಯನ್ನು ಕೊಡಬೇಕೆಂದು ಸರಕಾರಕ್ಕೆ ಬಿನ್ನವಿಸಿಕೊಂಡಿದ್ದಾರೆ.

ಬಟ್ಟೆಯ ವಾರ್ಷಿಕ ಸೀದಾಪ್ರಮಾಣ ದೊಡ್ಡವರಿಗೆ ೫ ಗಜ ಸಣ್ಣವರಿಗೆ ೨ ಗಜ ಇರಬೇಕೆಂದು ಮದ್ರಾಸ ಸರಕಾರ ಗೊತ್ತುಪಡಿಸಿದೆ. ಈ ಮೊದಲು ದೊಡ್ಡವರಿಗೆ ೧೨ ಗಜ ಸಣ್ಣವರಿಗೆ ೬ ಗಜ ಬಟ್ಟೆ ದೊರೆಯುತಿತ್ತು.

ಮದ್ರಾಸ ನಗರದಲ್ಲಿ ಜಾತೀಯ ಭೇದವೆಣಿಸಿ ಉಪಹಾರಗೃಹಗಳಲ್ಲಿಯೂ ವಸತಿ ಭವನಗಳಲ್ಲಿಯೂ ಯಾರಿಗೂ ಪ್ರವೇಶಕ್ಕೆ ಅಡ್ಡಿ ಮಾಡಬಾರದೆಂದು ಮದ್ರಾಸ ಪೋಲೀಸ ಕಮೀಶನರರು ಆಜ್ಞೆ ವಿಧಿಸಿದ್ದಾರೆ.

ಕೇಂದ್ರಸರಕಾರದವರು ಮದ್ರಾಸ ಪ್ರಾಂತಕ್ಕೆ ಇತ್ತೀಚಿಗೆ ೪೦ ಸಾವಿರ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಯುದ್ಧ ನೋಕರರ ಸಲುವಾಗಿ ಕಾದಿಡಲಾಗಿದ್ದ ನೋಕರಿಗಳಲ್ಲಿ ಒಂದುನಾಲ್ಕಾಂಶದಷ್ಟು ಸ್ಥಳಗಳನ್ನು ಯುದ್ಧಕಾಲದಲ್ಲಿ ತಾತ್ಪೂರ್ತಿಕವಾಗಿ ನೇಮಿತರಾದವರಿಗೆ ಉಳಿದ ಸ್ಥಳಗಳನ್ನು ವಿಮುಕ್ತರಾದ ಅಥವಾ ೧-೪-೪೭ ರ ವರೆಗೆ ವಿಮುಕ್ತರಾಗುವ ಮತ್ತು ಅರ್ಹತೆಯುಳ್ಳ ಯುದ್ಧ ನೋಕರರಿಗೂ ಕೊಡಲು ನಿಶ್ಚಯಿಸಿದೆಂದು ಮದ್ರಾಸ ಸರಕಾರದವರು ಪ್ರಕಟಿಸಿದ್ದಾರೆ. ಪೋಲೀಸ ಖಾತೆಯ ನವಕರಿಗಳನ್ನು ಬಿಟ್ಟು ಬೇರೆಶಾಖೆಯ ನೋಕರಿಗಳನ್ನು ಕೊಡುವಾಗ ಹಿಂದರಾಷ್ಟ್ರ ಸೈನಿಕರನ್ನೂ ಯುದ್ಧ ನಿವೃತ್ತ ಸೈನಿಕರೆಂದೇ ಭಾವಿಸಲಾಗುವದು.

ಮದ್ರಾಸ ಕಾರಪರೇಶನ್ನಿನ ಅಧಿಕಾರಿಗಳ ಚುನಾವಣೆಯಾಗಿ ಶ್ರೀ ಸುಂದರರಾವ ನಾಯಡು ಇವರು ಅಧ್ಯಕ್ಷರಾಗಿ ಅರಿಸಲ್ಪಟ್ಟರು. ಕಾಂಗ್ರೆಸ್ಸಿನ ಟಿ. ಜಿ- ಲಕ್ಷ್ಮಣಸ್ವಾಮಿ ಚೆಟ್ಟಿಯರರು ಉಪಾಧ್ಯಕ್ಷರಾಗಿರುವರು.

## ಹೊಸದಿಲ್ಲಿ

ಯುಕ್ತ ರಾಷ್ಟ್ರಗಳ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪರಿಷತ್ತಿಗೆ ಹೋದ ಹಿಂದೀ ಪ್ರತಿನಿಧಿಗಳ ಮುಖಂಡರಾದ ಸರ್ ಎಸ್ ರಾಧಾಕೃಷ್ಣನ್‌ರು ಪರಿಷತ್ತಿನ ಕಾರ್ಯಕಾರೀ ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಕೇಂದ್ರ ವಿಧಿಮಂಡಲದ ಅಧ್ಯಕ್ಷರಾದ ಸರ್ ಮಾಣಿಕಜಿ ದಾದಾಭಾಯಿ ಇವರು ೨೦ ನೇ ತಾರೀಕಿಗೆ ತಮ್ಮ ಅಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟು ಸದಸ್ಯರ ನಿರೋಪ ತೆಗೆದುಕೊಂಡರು. ಇವರು ಕಳೆದ ೩೪ ವರ್ಷ ಅಖಂಡವಾಗಿ ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಕೆಲಸ ಮಾಡಿ ಕಳೆದ ೧೪ ವರ್ಷಗಳಿಂದ ವಿಧಿ ಮಂಡಳದ ಅಧ್ಯಕ್ಷರಾಗಿದ್ದರು.

## ಪಂಜಾಬ

ಬಿಹಾರದಲ್ಲಿ ನಿರಾಶ್ರಿತರ ಸಲುವಾಗಿ ಪಂಜಾಬ ಸರಕಾರ ಕೇಂದ್ರ ಸರಕಾರದ ಒಪ್ಪಿಗೆ ಪಡೆದು ೭೪೫೦೦ ಮಣ ಅಕ್ಕಿ ಮತ್ತು ೨೪೫೦೦ ಮಣ ಕಡ್ಲಿಯನ್ನು ಕಳಿಸಲಿದೆ ಎಂದು ಪಂಜಾಬ ಮುಖ್ಯ ಮಂತ್ರಿ ಖಿಜರ ಹಯಾತಖಾನರು ಪ್ರಕಟಿಸಿದ್ದಾರೆ. ಉಳಿದ ಸಂಘ ಸಂಸ್ಥೆಗಳು ಬಿಹಾರಕ್ಕೆ ಧಾನ್ಯ ಕಳಿಸಲು ಸಿದ್ಧವಿದ್ದು ಅವಶ್ಯಕ ವ್ಯವಸ್ಥೆ ಮಾಡಲು ಬಿನ್ನವಿಸಿಕೊಂಡಿವೆ.

## ಬಿಹಾರ

ಗಲಭೆಯಲ್ಲಿ ಹಳ್ಳಿಗಳನ್ನು ಬಿಟ್ಟು ಹೋದ ರೈತರ ಬೆಳೆಯನ್ನು ಒಕ್ಕುವುದಕ್ಕಾಗಿ ಬಿಹಾರ ಸರಕಾರದವರು ನೋಕರರನ್ನು ನೇಮಿಸಲಿದೆ. ರಾಶಿಆದ ಬಳಿಕವೂ ರೈತರು ಬರದಿದ್ದರೆ ಕಾಳುಗಳನ್ನೆಲ್ಲ ಮಾರಿ ರೈತರಿಗೆ ಹಣ ಕಳಿಸಲಾಗುವದು.









# ಹಿಂದೀ ಪ್ರಮುಖರಿಗೆ ಲಂಡನ್ನಿನಿಂದ ಕರೆ

## ಘಟನಾ ಸಮಿತಿಯ ತೊಡಕು ಬಿಡಿಸುವ ಸಲುವಾಗಿ : ವಾಯಿಸರಾಯರೂ ಹೋಗುವರು-- ಜಿನ್ನಾರು ಹೋಗಬಹುದು --- ಕಾಂಗ್ರೆಸ್ಸು ಆಮಂತ್ರಣ ನಿರಾಕರಿಸಬಹುದು

### ಲೀಗ್ ಧೋರಣೆಯಿಂದ ವೈಸರಾಯರಿಗೆ ಪೇಚು

ಮುಸ್ಲಿಂಲೀಗು ತಾ. ೯ ಕ್ಕೆ ಸೇರಲಿರುವ ಘಟನಾ ಸಮಿತಿಯ ಪ್ರಾರಂಭಿಕ ಅಧಿವೇಶನಕ್ಕೆ ಬಹಿಷ್ಕಾರ ಹಾಕಿರುವದರಿಂದ ಹಿಂದುಸ್ತಾನದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಕುರಿತು ಮಾತುಕತೆ ನಡೆಸಿ ಮಂತ್ರಿತ್ರಯ ಯೋಜನೆಯ ಬಗ್ಗೆ ಉಂಟಾಗಿರುವ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವಗೋಸ್ಕರ ವೈಸರಾಯರಾದ ಲಾರ್ಡ ವೇವೆಲ್ಲರನ್ನೂ ಇಬ್ಬರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ ಪ್ರಮುಖರನ್ನೂ ಒಬ್ಬ ಸೀಖ ಪ್ರಮುಖರನ್ನೂ ಲಂಡನ್ನಿಗೆ ಬ್ರಿಟಿಶ್ ಸರಕಾರದವರು ಆಮಂತ್ರಿಸಿದ್ದಾರೆ.

ಲೀಗ್ ಪಕ್ಷದಿಂದ ಆಮಂತ್ರಿತರಾದ ಜಿನ್ನಾ ಸಾಹೇಬರೂ ಲಿಯಾಕತ ಅಲ್ಲಿಖಾನರೂ ಲಂಡನ್ನಿಗೆ ಹೋಗಬಹುದಾದರೂ ಕಾಂಗ್ರೆಸ್ಸಿನಿಂದ ಆಮಂತ್ರಿಸಲ್ಪಟ್ಟ ಜವಾಹರರೂ ವಲ್ಲಭಭಾಯಿಯವರೂ ಸೀಖ ಬಲದೇವ ಸಿಂಗರೂ ಆಮಂತ್ರಣವನ್ನು ನಿರಾಕರಿಸುವದು ಖಂಡಿತವೆಂದು ತಿಳಿದು ಬಂದಿದೆ.

ವೈಸರಾಯರು ಇಷ್ಟರಲ್ಲೇ ಲಂಡನ್ನಿಗೆ ಹೊರಡುವರು. ಸರ್ ಜಾನ ಕಾಲವಿಲ್ಲರು ತಾತ್ಪೂರ್ತಿಕ ವೈಸರಾಯರಾಗುವರು.

### [illegible] ಸಾಹೇಬರ ಬಹಿಷ್ಕಾರ

[illegible]ಶದಲ್ಲಿ ಪರಿಸ್ಥಿತಿ ಶಾಂತವಾದ ಹೊರತು ಘಟನಾ ಸಮಿತಿ ಸೇರಿ ಪ್ರಯೋಜನವಿಲ್ಲ. ಮತ್ತು ಕಾಂಗ್ರೆಸು ಮೇ ೧೬ರ ಮಂತ್ರಿತ್ರಯದ ಘೋಷಣೆಯನ್ನು ಸ್ವೀಕರಿಸಿಲ್ಲ ಎಂಬೆರಡು ನೆವಗಳನ್ನು ಹಿಡಿದುಕೊಂಡು ಜಿನ್ನಾ ಸಾಹೇಬರು ಮುಂಬಯಿಯಲ್ಲಿ ಮುಸ್ಲಿಂ ಲೀಗು ಮಂತ್ರಿತ್ರಯ ಯೋಜನೆಯನ್ನು ನಿರಾಕರಿಸುವ ಗೊತ್ತುವಳಿ ಮಾಡಿದ್ದನ್ನು ಹಿಂತೆಗೆದುಕೊಳ್ಳಲು ಲೀಗ ಕೌನ್ಸಿಲ ಸಭೆಯನ್ನು ಕರೆಯಲು ನಿರಾಕರಿಸಿದ್ದಲ್ಲದೆ ಘಟನಾ ಸಮಿತಿಗೆ ಲೀಗ ಪ್ರತಿನಿಧಿಗಳು ಬಹಿಷ್ಕಾರ ಹಾಕುವಂತೆ ಅಜ್ಞಾಪಿಸಿ ಕಳೆದವಾರ ಹಿಂದುಸ್ತಾನದ ರಾಜಕೀಯ ಪ್ರವಾಹದಲ್ಲಿ ಹೊಸದೊಂದು ಸುಳಿಯನ್ನು ನಿರ್ಮಿಸಿದರು. ವೈಸರಾಯರು ಮಂತ್ರಿಮಂಡಲದ ಬಹುಸಂಖ್ಯಾಕರ ಅಭಿಪ್ರಾಯವನ್ನು ಒಪ್ಪಿಕೊಂಡು ಡಿಸೆಂಬರ ೯ ಕ್ಕೆ ಘಟನಾ ಸಮಿತಿಯ ಸಭೆಯನ್ನೇನೋ ಕರೆದಿದ್ದಾರೆ. ಆದರೆ ಲೀಗ ನಿರ್ಣಯದಿಂದೊದಗಿದ ತೊಡಕಿನ ಮಹತಿಯನ್ನು ಗಮನಿಸದಿರುವದು ಅವರಿಗೆ ಅಸಾಧ್ಯವಾಗಿತ್ತು. ವೇವೆಲ್ಲರು ನಿಜವಾಗಿ ಪೇಚಿನಲ್ಲಿ ಸಿಕ್ಕಿ ಬಿದ್ದರು. ಮುಂಬಯಿ ನಿರ್ಣಯದ ನಂತರ ಬ[illegible] ಪ್ರಯಾಸಪಟ್ಟು ಅವರು ಮುಸ್ಲಿಂಲೀಗನ್ನು ನಡುಗಾಲ ಸರಕಾರದಲ್ಲಿ ಸೇರಿಸಿಕೊಂಡರು. ಜಿನ್ನಾ ಸಾಹೇಬರಿಗಾದರೂ ನಡುಗಾಲ ಸರಕಾರದಲ್ಲಿ ಪ್ರವೇಶಿಸಲು ಆತುರ ಕಡಿಮೆ ಇದ್ದಿಲ್ಲ. ಅವರು ಕಾಂಗ್ರೆಸ್ಸಿನೊಡನೆ ಒಪ್ಪಂದ ಮಾಡಿಕೊಳ್ಳದೆ ವೈಸರಾಯರೊಡನೆ ಒಪ್ಪಂದ ಮಾಡಿಕೊಂಡು ತಮ್ಮ ಪ್ರತಿನಿಧಿಗಳನ್ನು ಸರಕಾರದಲ್ಲಿ ಹೊಗಿಸಿದಾಗಲೇ ಅವರ ತಂತ್ರ ಬೇರೆತ್ತೋ ಗುರಿಯಿಟ್ಟಿತ್ತೆಂದು ತೋರುವಂತಿತ್ತು. ಈ ಸಂಶಯದಿಂದಲೇ ಪಂ. ಜವಾಹರಲಾಲರು ಲೀಗಿನ ಪ್ರವೇಶ ಸಹಕಾರಾಪೇಕ್ಷೆಯಿಂದ ಇದೆಯೋ ಇಲ್ಲವೋ ಅದು ಘಟನಾ ಸಮಿತಿಯಲ್ಲಿ ಸೇರುವದೋ ಇಲ್ಲವೋ ಎಂದು ವೈಸರಾಯರನ್ನು ಕೇಳಿದ್ದರು. ವೈಸರಾಯರು ಸಹಕಾರೇಚ್ಛೆಯಿಂದಲೇ ಲೀಗು ಒಳಬರುತ್ತಿದೆ. ಮತ್ತು ಘಟನಾ ಸಮಿತಿಯಲ್ಲಿಯೂ ಸೇರುವದು ಎಂದೂ ಜಿನ್ನಾ ಸಾಹೇಬರು ಮಾತು ಕೊ[illegible]ರುವರೆಂದೂ ಜವಾಹರಲಾಲರಿಗೆ ತಾ. ೨೩ (ಅಕ್ಟೋಬರ) ಪತ್ರ ಬರೆದು ತಿಳಿಸಿದ್ದರು. ಈ ಪತ್ರವನ್ನೀಗ ಜವಾಹರಲಾಲರು ಪ್ರಸಿದ್ಧಿಸಿದ್ದಾರೆ.

### ವೈಸರಾಯರ ಸಮಸ್ಯೆ

ಜಿನ್ನಾ ಸಾಹೇಬರು ಸಹಕರಿಸುವೆವೆಂಬ ಅರ್ಥಬರುವ ಹಾಗೆ ಮಾತು ಕೊಟ್ಟದ್ದರಿಂದಲೇ ವೈಸರಾಯರು ಲೀಗಿಗೆ ನಡುಗಾಲ ಸರಕಾರದಲ್ಲಿ ಪ್ರವೇಶ ಕೊಟ್ಟರೆಂಬುದರಲ್ಲಿ ಏನೂ ಸಂಶಯವಿಲ್ಲ. ಕಾಂಗ್ರೆಸ್ಸು ಆಶ್ವಾಸನ ಬೇಡಿತ್ತೆಂಬ ವಿಷಯವನ್ನು ಬದಿಗಿಟ್ಟರೂ ಜಿನ್ನಾರು ಹಾಗೆ ಮಾತು ಕೊಟ್ಟರದಿದ್ದರೆ ಅವರಿಗೆ ಪ್ರವೇಶ ಕೊಡುವದೇ ತಪ್ಪಾಗುತಿತ್ತೆಂಬುದನ್ನು ಮರೆಯತಕ್ಕದ್ದಲ್ಲ. ಮಂತ್ರಿತ್ರಯ ಯೋಜನೆಯ ಘಟನಾ ಸಮಿತಿಯ ಭಾಗವನ್ನೊಪ್ಪಿಕೊಂಡರೆ ಮಾತ್ರ ನಡುಗಾಲ ಸರಕಾರದಲ್ಲಿ [illegible] ಸಿಗುವದೆಂದು ಅದರಲ್ಲಿ ಸೂಚಿಸಲಾಗಿದೆ. [illegible]ರಿಂದಲೇ ಲೀಗು ಮುಂಬಯಿ ಬಹಿಷ್ಕಾರ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕೆಂದು ಅವರು ಈಗೊಂದು ತಿಂಗಳಿಂದ ಬಾರಿಬಾರಿಗೂ ಜಿನ್ನಾ ಸಾಹೇಬರಿಗೆ ನೆನಪು ಕೊಡುತ್ತ ಬಂದಿರುವರು. ಗಲಭೆಗಳ ನೆವದಿಂದ ಘಟನಾಸಮಿತಿ ಸೇರುವದನ್ನೇ ಮುಂದೆ ತಳ್ಳಲು ತಾವು ಹೂಡಿದ ತಂತ್ರ ವ್ಯರ್ಥವಾಗಲು ಜಿನ್ನಾರು ನೇರವಾಗಿ ತಮ್ಮ ಮಾತನ್ನು ನೆಟ್ಟಗೆ ಮುರಿದುಬಿಟ್ಟರು. ತಾವು ಹಾಗೆ ವಚನ ಕೊಟ್ಟದ್ದೇ ಇಲ್ಲವೆಂದೂ ಬರಿ ವಿಚಾರಿಸುವದಾಗಿ ವೈಸರಾಯರಿಗೆ ತಿಳಿಸಿದ್ದೇವೆಂದೂ ಅವರೀಗ ಹೇಳಿಬಿಟ್ಟಿದ್ದಾರೆ. ಇದರಿಂದ ನಡುಗಾಲ ಸರಕಾರಕ್ಕೇ।ಕುತ್ತುಬಂತು. ಮಾತಿನಲ್ಲಿ ನಿಸ್ಸೀಮರಾದ ಜಿನ್ನಾರು ಜಾರಿಕೊಂಡರು.

ಆದರೆ ವೈಯಿಸರಾಯರೀಗ ಫಲವನ್ನು ಅನುಭವಿಸಬೇಕಾಯಿತು. ದೀರ್ಘಾವಧಿ ಯೋಜನೆಯನ್ನು ನಿರಾಕರಿಸಿದ ಮೇಲೆ ಲೀಗು ನಡುಗಾಲ ಸರಕಾರದಲ್ಲಿ ಉಳಿಯುವದಕ್ಕೆ ಯಾವ ನ್ಯಾಯವೂ ಇಲ್ಲ. ಸಾಲದ್ದಕ್ಕೆ ಅದು ಆಡಳಿತದಲ್ಲಿ ಅಡ್ಡಗಾಲು ಹಾಕುತ್ತ ಬಂದಿದೆಯೆಂದು ಕಾಂಗ್ರೆಸ್ಸಿನ ಮುಂದಾಳುಗಳು ಬಹಿರಂಗವಾಗಿ ಸಾರಿದ್ದಾರೆ. ಈ ದೀರ್ಘಾವಧಿ ಯೋಜನೆಗೆ ಒಪ್ಪಿಗೆಯಿಲ್ಲದಿದ್ದರೆ ನಡುಗಾಲ ಸರಕಾರದಿಂದ ಲೀಗು ಹೊರಬಿದ್ದು ಹೋಗಲೆಂದೂ ಅವರು ಹೇಳಿದ್ದಾರೆ. ಈಗ ವೈಯಿಸರಾಯರಿಗೆ ಲೀಗ ಸದಸ್ಯರನ್ನು ನಡುಗಾಲ ಸರಕಾರದಿಂದ ಹೊರಬಿದ್ದು ಹೋಗಲು ಕೇಳಿಕೊಳ್ಳುವದು ಮತ್ತು ಅವರೊಪ್ಪದಿದ್ದರೆ ಅವರನ್ನು ಕಿತ್ತುಹಾಕುವದೊಂದೇ ಹಾದಿ ಉಳಿದಿತ್ತು. ಹಾಗೆ ಮಾಡಲು ಮತ್ತು ಅದರಿಂದೊದಗಬಹುದಾದ ಪರಿಣಾಮವನ್ನು ಎದುರಿಸಲು ವೈಯಿಸರಾಯರು ಸಿದ್ಧರಾಗಬಹುದೆ ? ಸಿದ್ಧರಾಗದಿದ್ದರೆ ಕಾಂಗ್ರೆಸಿಗರಿಗೆ ಏನೆಂದು ಸಮಾಧಾನ ಹೇಳಬೇಕು. ?

### ಲೀಗಿನ ಕುತರ್ಕ

ವೈಸರಾಯರಿಗೆ ಹೀಗೆ ಮಂಕುಬೂದಿ ಎರಚಿ ಜಿನ್ನಾ ಸಾಹೇಬರು ಸೇಡುತೀರಿಸಿಕೊಂಡಿರಬಹುದು. ಲೀಗು ಉಭಯ ಭಾಗಗಳನ್ನೂ ಒಪ್ಪಿ, ನಡುಗಾಲ ಸರಕಾರವನ್ನು ಕಾಂಗ್ರೆಸ್ಸನ್ನು ಹೊರಗೆಬಿಟ್ಟು ಆಕ್ರಮಿಸಬೇಕೆಂದು ಪ್ರಯತ್ನಿಸಿದಾಗ ಅವರು ಇಡಿ ಯೋಜನೆಯನ್ನೆ ಹಿಂತೆಗೆದು ಜೋಪಾಸನಾ ಸರಕಾರ ಸ್ಥಾಪಿಸಿ ಮತ್ತೆ ಕಾಂಗ್ರೆಸ್ಸನ್ನು ಸೇರಿಸಿಕೊಂಡು ತಮ್ಮನ್ನು ಹೊರಗೆ ಬಿಟ್ಟದ್ದಕ್ಕಾಗಿ ವೈಸರಾಯರಿಗೆ ಅವರು ಚಳ್ಳೆಹಣ್ಣು ತಿನ್ನಿಸಿರಬಹುದು, ಎಂದು ಟೈಮ್ಸ ರಾಜಕೀಯ ನಿರೀಕ್ಷಕನು ಹೇಳಿರುವದರಲ್ಲಿ ಸತ್ಯಾಂಶವಿದ್ದೀತು. ಆದರೆ ಲೀಗ ಸದಸ್ಯರನ್ನು ನಡುಗಾಲ ಸರಕಾರದಿಂದ ಹೊರತಳ್ಳದಂತೆ ಅವರು ಕೆಲ ತರ್ಕಗಳನ್ನೂ ಮುಂದೊಡ್ಡಿದ್ದಾರೆ. ಕಾಂಗ್ರೆಸ್ಸು ದೀರ್ಘಾವಧಿಯೋಜನೆಯನ್ನು ಅನಿರ್ಬಂಧವಾಗಿ ಒಪ್ಪಿಲ್ಲ. ಗುಂಪಿನ ಯೋಜನೆಯ ವಿಷಯದಲ್ಲಿ ಅದು ನ್ಯಾಯಸ್ಥಾನಕ್ಕೆ ಹೋಗಬೇಕೆನ್ನುತ್ತದೆ. ಇದು ಒಪ್ಪಿಗೆಯೇ ಅಲ್ಲ. ಎಂದು ವಕೀಲ ಜಿನ್ನಾರು ಸಾಧಿಸುತ್ತಾರೆ. ಕಾಂಗ್ರೆಸ್ಸು ಮೊದಲು ಯೋಜನೆಯನ್ನು ಅನಿರ್ಬಂಧವಾಗಿ ಸ್ವೀಕರಿಸತು ಆ ಮೇಲೆ ನಾವು ನೋಡುತ್ತೇವೆ, ಎಂಬುದು ಅವರ ಹಟ. ಅರ್ಥಾತ್ ಕಾಂಗ್ರೆಸ್ಸು—ಲೀಗುಗಳೆರಡೂ ಯೋಜನೆಯನ್ನೊಪ್ಪಿಲ್ಲವೆಂದ ಮೇಲೆ ನಡುಗಾಲ ಸರಕಾರದಲ್ಲಿರಲು ಕಾಂಗ್ರೆಸ್ಸಿಗೆಷ್ಟು ಅಧಿಕಾರವೊ ಲೀಗಿಗೂ ಅಷ್ಟೇ ಅಧಿಕಾರವಿದೆಯೆಂದು ಅವರ ಆಶಯ. ಕಾಂಗ್ರೆಸ್ಸು ನಿಸ್ಸಂದಿಗ್ಧವಾಗಿ ಯೋಜನೆಯನ್ನೊಪ್ಪಿದೆ; ಸಂದಿಗ್ಧಾರ್ಥವನ್ನು ಮಾತ್ರ ನ್ಯಾಯಸ್ಥಾನಕ್ಕೊಯ್ಯೋಣವೆನ್ನುತ್ತದೆ, ಎಂದು ಕಾಂಗ್ರೆಸ್ಸಿಗರ ವಾದವನ್ನು ಕೇಳಿಯೂ ಕೇಳದಂತೆ ಮಾಡುತ್ತಾರೆ. ತಾವು ಹಚ್ಚಿದ ಅರ್ಥವನ್ನೇ ಒಪ್ಪಿಕೊಂಡು ಕಾಂಗ್ರೆಸ್ಸು ತಲೆವಾಗುವಂತೆ ಮಾಡಬೇಕೆಂದು ಅವರದೆಷ್ಟು ದೊಡ್ಡ ತಂತ್ರ ಜಾಲವನ್ನು ರಚಿಸಿದ್ದಾರೆ.

### ನಡುಗಾಲ ಸರಕಾರದ ಸ್ಥಾನಮಾನ

ನಡುಗಾಲ ಸರಕಾರದಲ್ಲಿ ಲೀಗು ಸಹಕಾರದ ಅಪೇಕ್ಷೆಯಿಂದ ಪ್ರವೇಶಿಸಿಲ್ಲವೆಂದು ಪಂ. ಜವಾಹರಲಾಲ ಹಾಗು ಸರದಾರ ಪಟೇಲರು ವಿುರತ ಕಾಂಗ್ರೆಸ್ಸಿನಲ್ಲಿ ಮಾಡಿದ ಭಾಷಣಗಳಿಂದ ಸ್ಪಷ್ಟವಾಗಿದೆ. ಆದರೆ ನಡುಗಾಲ ಸರಕಾರದ ಲೀಗ ಮಂತ್ರಿಗಳಾದ ಲಿಯಾಕತ ಅಲ್ಲಿಖಾನರು ತಾವು ಅಡ್ಡಗಾಲು ಹಾಕುತ್ತಿಲ್ಲವೆಂದೂ ವೈಸರಾಯರ ಹಸ್ತಕ್ಷೇಪವನ್ನು ಅಪೇಕ್ಷಿಸಿಲ್ಲವೆಂದೂ ಹೇಳುತ್ತಾರೆ. ಆದರೆ ಲೀಗು ಸರಕಾರದಲ್ಲಿ ಹೊಕ್ಕೊಡನೆ "ನಾವು ಮುಸ್ಲಿಂ ಹಿತದ ಕಾವಲಿಗಾಗಿ ಹೋಗುತಿದ್ದೇವೆ" ಎಂದು ಹೇಳಿ ತಮ್ಮ ಪ್ರವೇಶದ ಗೂಢಚಾರ ಸ್ವರೂಪವನ್ನು ಪ್ರಕಟಿಸಿದ್ದರು. ನಡುಗಾಲ ಸರಕಾರ ಮಂತ್ರಿ ಮಂಡಲದಂತೆ ಸಂಯುಕ್ತ ಹೊಣೆಗಾರಿಕೆಯಿಂದ ನಡೆದುಕೊಳ್ಳುವದೆಂದು ವೈಯಿಸರಾಯರು ಕಾಂಗ್ರೆಸ್ಸಿಗೆ ಹೇಳಿದ್ದರು. ಹಾಗೆ ಲೀಗ ಮಂತ್ರಿಗಳು ನಡೆದುಕೊಳ್ಳುತ್ತಿಲ್ಲವೆಂದು ಕಾಂಗ್ರೆಸ್ ಮುಖಂಡರು ದೂರಿಕೊಂಡಿದ್ದಾರೆ. ।ಆದರೆ ಜಿನ್ನಾರೂ ಲೀಗ್ ಮಂತ್ರಿಗಳೂ ಅತ್ಯಂತ ಅಸಭ್ಯ ರೀತಿಯಿಂದ ನಡುಗಾಲ ಸರಕಾರದ ಸ್ಥಾನಮಾನವನ್ನು ಕೆಳಗೆಳೆಯುವ ಮಾತುಗಳನ್ನಾಡುತಿದ್ದಾರೆ. ಇದು ಮಂತ್ರಿಮಂಡಲವಲ್ಲ; ೧೯೩೫ನೇ ಹಿಂದುಸ್ತಾನ ಕಾಯದೆಯನ್ವಯ ರಚಿಸಲ್ಪಟ್ಟ ಕಾರ್ಯಕಾರಿ ಮಂಡಲ ಆದರಲ್ಲಿ ಸಂಯುಕ್ತ ಹೊಣೆಯ ಪ್ರಶ್ನೆಯೇ ಇಲ್ಲ. ಜವಾಹರರು ಒತ್ತಾಯಗೊಳಿಸಿದ್ದರಿಂದ ವೈಸರಾಯರು ಅದನ್ನು ಮಂತ್ರಿಮಂಡಲವೆಂದು ಕರೆಯಲೊಪ್ಪಿದರು. ಅಲ್ಪ ಮನಸ್ಸುಗಳು ಅಲ್ಪ ಸಂತೋಷಿಗಳಾಗಿರುತ್ತವೆ. ಆದರೆ ಕತ್ತೆಯನ್ನು ಆನೆಯೆಂದು ಕರೆದಾಕ್ಷಣ ಅದು ಆನೆಯಾಗಲಾರದು. ಜವಾಹರಲಾಲರ ಉಪಾಧ್ಯಕ್ಷತೆಗೆ ಏನೂ ಬೆಲೆಯಿಲ್ಲ. ಅವರ ನಾಯಕತ್ವವನ್ನು ನಾವೊಪ್ಪುವದಿಲ್ಲ. ಕಾಂಗ್ರೆಸ್ಸಿನ ಆಜ್ಞೆಗೆ ನಾವು ಅಂಕಿತರಾಗುವದಿಲ್ಲ. ಪಾಕಿಸ್ತಾನವನ್ನು ಮುರಿಬಡಿಯಬೇಕೆಂಬ ಕಾಂಗ್ರೆಸ್ ಪ್ರಯತ್ನವನ್ನು ಎದುರಿಸುವೆ ಎಂದು ಜಿನ್ನಾಸಾಹೇಬರು ಕರಾಚಿಯಲ್ಲಿ ಗಳಹಿದರು. ಇದೆಲ್ಲದರಿಂದ ಅವರ ಅಭಿಪ್ರಾಯ ನಡುಗಾಲ ಸರಕಾರದ ಯೋಗ್ಯತೆಯನ್ನಿಳಿಸಿ ವೈಸರಾಯರ ಅಧಿಕಾರ ಹೆಚ್ಚಿಸುವದೇ ಇದೆಯೆಂದು ಸ್ಪಷ್ಟವಾಗುತ್ತದೆ. ಹೇಗಾದರೂ ಮಾಡಿ ಕಾಂಗ್ರೆಸ್ಸನ್ನು ಸರಕಾರದಿಂದ ಹೊರಗಟ್ಟುವದೇ ಅವರ ಉದ್ದೇಶ.

### ಕಾಂಗ್ರೆಸ್ಸು ನಿರಾಕರಿಸುವದೇಕೆ

ವೈಸರಾಯರು ಕಾಂಗ್ರೆಸ್ಸಿಗೆ ಕೊಟ್ಟ ಆಶ್ವಾಸನಗಳು, ಅಟ್ಲಿಯವರು ಕಾಮನ್ಸದಲ್ಲಿ ಬಹುಸಂಖ್ಯಾಕರ ಮುನ್ನಡೆಯನ್ನು ತಡೆಯಲು ಅಲ್ಪಸಂಖ್ಯಾಕರಿಗೆ ಅಧಿಕಾರ ಕೊಡುವದಿಲ್ಲವೆಂದು ಕೊಟ್ಟ ಹೇಳಿಕೆ; ನಡುಗಾಲ ಸರಕಾರವನ್ನು ವಸಾಹತು ಸರಕಾರದಂತೆ ನಡೆಯಗೊಡುವೆನೆಂದು ವೈಸರಾಯರು ಕಾಂಗ್ರೆಸ್ಸಿಗೆ ಕೊಟ್ಟ ಮಾತು; ಸಹಕರಿಸುವವರೊಡನೆ ಮಂತ್ರಿತ್ರಯ ಯೋಜನೆಯನ್ನು ಮುಂದೆ ಸಾಗಿಸುವ ಬ್ರಿ. ಸರಕಾರದ ವಾಗ್ದಾನ— ಇವೆಲ್ಲ ಸೇರಿ ಕಾಂಗ್ರೆಸ್ಸಿನ ನಿಲುಮೆಯನ್ನು ಬಲಪಡಿಸಿ ಲೀಗಿಗೆ ಇನ್ನೂ ಸವಲತ್ತು ತೋರುವ ದಾರಿಯನ್ನು ಮುಚ್ಚಿಬಿಟ್ಟಿವೆ. ಆದರೆ ಲೀಗು ಹಟಹಿಡಿದು ಹೊರಗೇ ಉಳಿದರೆ ಸರ್ವ ಸಮ್ಮತವಾದ ಘಟನೆ ಸಿದ್ಧವಾಗಬಹುದೆ? ಲೀಗು ಅದನ್ನೊಪ್ಪದಿದ್ದರೆ ಮುಂದೇನು? ಈ ತೊಡಕುಗಳು ಬ್ರಿಟಿಶ ಸರಕಾರವನ್ನು ಬಾಧಿಸತೊಡಗಿವೆ. ಅದಕ್ಕಾಗಿಯೇ ಅವರು ವೈಸರಾಯರನ್ನೂ ಉಭಯ ಪಕ್ಷದ ಧುರೀಣರನ್ನೂ ಇಂಗ್ಲಂಡಿಗೆ ಕರೆಸಿ ಮಾತುಕತೆ ನಡೆಸುವ ವಿಚಾರಕ್ಕೆ ಬಂದರು. ಆದರೆ ಮುಸ್ಲಿಂ ಲೀಗು ಹೋಗಲೊಪ್ಪಿದರೂ ಕಾಂಗ್ರೆಸ್ಸು ತನಗೆ ಇಂಗ್ಲಂಡಿನಲ್ಲೇನೂ ಕೆಲಸವಿಲ್ಲೆಂದು ಭಾವಿಸಿದೆ. ತಮ್ಮ ಪಾಲಿಗೆ ತಾವು ।ಯೋಜನೆಯನ್ನೊಪ್ಪಿ ಬಿಟ್ಟಿದ್ದೇವೆ. ಅದರಿಂದ ನಮಗೆ ತಿಳಿಹೇಳಬೇಕಾದುದೇನೂ ಇಲ್ಲ. ನಮ್ಮೊಡನೆ ಒಪ್ಪಂದಕ್ಕೆ ಬರಲೊಪ್ಪದಿರುವ ಲೀಗನ್ನು ಮನವೊಲಿಸಿ ನಡುಗಾಲ ಸರಕಾರದೊಳಗೆ ತಂದ ವೈಸರಾಯರೇ ಲೀಗನ್ನು ಯೋಜನೆಗೊಪ್ಪಿಸುವ ಹೊಣೆ ಹೊರಬೇಕು ಎಂದವರು ಹೇಳುತಿದ್ದಾರೆ. ನಡುಗಾಲ ಸರಕಾರದಲ್ಲಿ ಅಡಚಣಿಯೊಡ್ಡಿ ಬ್ರಿಟಿಶರಿಗೆ ಬಲ ಕೊಡಿಸುವದಕ್ಕೆ ಹೊರಟ ಲೀಗು ನಡುಗಾಲ ಸರಕಾರದಲ್ಲುಳಿಯಬೇಕೆಂದಾಗಲೀ ಪಾಕಿಸ್ತಾನವನ್ನು ಸ್ಥಾಪಿಸಬೇಕೆಂದು ಹೇಳುವವರು ಘಟನಾ ಸಮಿತಿಯಲ್ಲಿ ಸೇರಬೇಕೆಂದಾಗಲಿ ಕಾಂಗ್ರೆಸ್ಸಿಗೆ ಆತುರವಿಲ್ಲ. ಇಡಿ ಪ್ರಶ್ನೆಯನ್ನು ಮಾತುಕತೆಯಿಂದ ಬಿಡಿಸುವ ಆಶೆ ಅವರಿಗುಳಿದಿಲ್ಲ. ಎಂಥ ಪ್ರಸಂಗ ಬಂದರೂ ಅದನ್ನೆದುರಿಸಲು ಅವರು ಸಿದ್ಧರಿದ್ದಾರೆ. ಅದುದರಿಂದ ಜಿನ್ನಾರ ಮನವೊಲಿಸುವ ಕೆಲಸವನ್ನು ಬೇಕಾದರೆ ವೈಸರಾಯರು ಮಾಡಲಿ, ನಾವು ಬರುವದಿಲ್ಲೆಂದು ಅವರು ಹೇಳಬಹುದು. ಆಗ ವೈಸರಾಯರು ಲೀಗಿನವರಿಬ್ಬರನ್ನು ಕರೆದುಕೊಂಡು ಇಂಗ್ಲಂಡಿಗೆ ಹೋಗಬಹುದು. ಆದರೆ ಇದು ಬರಿ ತಪ್ಪು ತಿಳುವಳಿಕೆಯನ್ನು ನಿವಾರಿಸುವ ಸಭೆ ಹೊರತು ಮಾತುಕತೆಯನ್ನು ಹೊಸದಾಗಿ ಪ್ರಾರಂಭಿಸುವ ಇಚ್ಛೆಯಿಲ್ಲವೆಂದೂ ಒಡಂಬಡಿಕೆಯಾಗದಿದ್ದರೂ ಯೋಜನೆಯನ್ನು ಮುಂದೊತ್ತಲಾಗುವದೆಂದೂ ಬ್ರಿಟಿಶರು ಅಧಿಕಾರತ್ಯಾಗ ಮಾಡುವರೆಂದೂ ಪಾರ್ಲಮೆಂಟನಲ್ಲಿ ಅಟ್ಲಿಯವರು ಮೇಜರ ವ್ಯಾಟರಿಗೆ ಹೇಳಿರುವರು. ಹೊಸತಾಗಿ ಮಾತುಕತೆಗಳನ್ನು ಪ್ರಾರಂಭಿಸಿದರೆ ಕಾಂಗ್ರೆಸ್ಸಿನ ಸಹಕಾರ ಕಳೆದು ಕೊಳ್ಳುವದು ಖಂಡಿತ. ಇಷ್ಟು ದಿನದ ಮೇಲೆ ಸಿಕ್ಕ ಅದರ ಸಹಕಾರವನ್ನು ಬ್ರಿಟಿಶರು ಕಳೆದು ಕೊಳ್ಳಲು ಸಿದ್ಧರಾಗಲಾರರು. ಆದ್ದರಿಂದ ಲೀಗು ಈಗಿರುವದನ್ನೇ ಒಪ್ಪಬೇಕಾದೀತು. ಇಲ್ಲದಿದ್ದರೆ ಗಫರ ಖಾನರು ಹೇಳುವಂತೆ ಘಟನಾಸಮಿತಿ ಸೇರುವದೇ ಬ್ರಿಟಿಶರಿಗೆ ಬೇಡವಾಗಿದೆಯೆಂದು ಅರ್ಥವಾಗುವದು.

## ರಾಮಗುಂಜದಲ್ಲಿ ಮಹಾತ್ಮರು

ಬಂಗಾಲದ ರಾಮಗಂಜ ಭಾಗದಲ್ಲಿ ಸಂಚರಿಸುತಿರುವ ಮಹಾತ್ಮಾ ಗಾಂಧಿಯವರಿಗೆ ಆಹಾರ ದೋಷದಿಂದ ಒಂದುದಿನ ವಾಂತಿ ಭೇದಿ ಆದರೂ ಅವರು ಎದೆಗುಂದದೆ ಏಕಾಕಿಯಾಗಿ ಕೆಲಸ ಮಾಡುತ್ತಲೇ ಇದ್ದಾರೆ. ಅವರ ಪರಿವಾರದವರೂ ಬೇರೆ ಬೇರೆ ಹಳ್ಳಿಗಳಲ್ಲಿ ಸುತ್ತಿ ಶಾಂತಿ, ಧೃತಿಗಳನ್ನು ಸ್ಥಾಪಿಸಲು ಹೆಣಗುತಿದ್ದಾರೆ. ಬಂಗಾಲ ಸರಕಾರದ ಇಬ್ಬರು ಮಂತ್ರಿಗಳು ಗಲಭೆ ಭಾಗಗಳನ್ನು ಸಂಚರಿಸಿ ಹಿಂದುಗಳಲ್ಲಿ ವಿಶ್ವಾಸವನ್ನೂ ಮುಸ್ಲಿಂರಲ್ಲಿ ಪಶ್ಚಾತ್ತಾಪವನ್ನೂ ಹುಟ್ಟಿಸಲು ಪ್ರಯತ್ನಿಸುತಿದ್ದಾರೆ. ಮಹಾತ್ಮರ ಸಮಕ್ಷದಲ್ಲಿ ಹಿಂದೂ, ದಲಿತ, ಮುಸ್ಲಿಂ ಪ್ರಮುಖರ ಗುಪ್ತ ಸಭೆಯನ್ನು ಸೇರಿಸಿ ಶಾಂತಿದಲಗಳನ್ನು — ಉಭಯ ಜಾತಿಗಳ ಮುಂದಾಳುಗಳಿಂದೊಡಗೂಡಿ — ರಚಿಸುವ ನಿರ್ಣಯವಾಯಿತು. ಮಂತ್ರಿಗಳೂ ಮುಸ್ಲಿಮರೂ ಕೊಡುವ ಆಶ್ವಾಸನವನ್ನು ನಂಬಿರಿ. ಏಕಂದರೆ ಇಸ್ಲಾಮು ಅಸತ್ಯದ ಅಧಾರದ ಮೇಲೆ ನಿಂತಿಲ್ಲ ಎಂದು ಹೇಳಿ ಮಹಾತ್ಮರು ಹಿಂದೂಗಳಲ್ಲಿ ವಿಶ್ವಾಸವನ್ನು ತರಲು ಹೆಣಗಿ ಕೆಲಮಟ್ಟಿಗೆ ಕೃತಾರ್ಥರಾಗಿದ್ದಾರೆ. ಈಗಾಗಲೇ ಅನೇಕ ಶಾಂತಿದಲಗಳು ಸ್ಥಾಪಿಸಲ್ಪಟ್ಟಿವೆ. ಅಲ್ಲದೆ ಎಷ್ಟೋ ಕಡೆ ನಿರಾಶ್ರಿತರಿಗೆ ಮನೆಗಳನ್ನು ಕಟ್ಟಿಕೊಡುವ ಕೆಲಸವೂ ನಡೆದಿದೆ.

# ಕನ್ನಡ ಪ್ರಹಸನ ಪಿತಾಮಹ ಟಿ. ಪಿ. ಕೈಲಾಸಮ್ ಅವರ ನಿಧನ

## ಕನ್ನಡ ನಾಡಿನಲ್ಲೆಲ್ಲ ವ್ಯಥೆ



ಕನ್ನಡ ಪ್ರಹಸನ ಪಿತಾಮಹರೆಂದು ಪ್ರಸಿದ್ಧರಾಗಿದ್ದ ಶ್ರೀ ತ್ಯಾಗರಾಜ ಪರಮಶಿವ ಕೈಲಾಸಂ ಅವರು ಕಳೆದ ಶನಿವಾರ ತಾ ೨೩ ರಾತ್ರಿ ಬೆಂಗಳೂರಲ್ಲಿ ತಮ್ಮ ಗೆಳೆಯರಾದ ಶ್ರೀ ವಿ. ಟಿ. ಶ್ರೀನಿವಾಸನ್ನರ ಮನೆಯಲ್ಲಿ ನಿದ್ದೆಯಲ್ಲಿಯೆ ಮೃತರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಶ್ರೀ ಕೈಲಾಸಂ ಅವರಿಗೆ ಮರಣ ಕಾಲದಲ್ಲಿ ೬೧ ವರ್ಷದಮೇಲೆ ಮೂರುತಿಂಗಳು ವಯಸ್ಸಾಗಿತ್ತು. ಅವರು ನ್ಯಾಯಾಮೂರ್ತಿಗಳಾಗಿದ್ದ ಶ್ರೀ ಪರಮಶಿವಯ್ಯರ ಪ್ರಥಮ ಪುತ್ರ. ಅವರು ತಮ್ಮ ಪತ್ನಿಯನ್ನೂ ಇಬ್ಬರು ಪುತ್ರಿಯರನ್ನೂ ಬಿಟ್ಟು ಹೋಗಿದ್ದಾರೆ.

ಎರಡೇ ವಾರಗಳ ಹಿಂದೆ ಅವರು ಮುಂಬಯಿಯಿಂದ ತಮ್ಮ ಮಮತೆಯ ನಾಯಿ ಮರಿಯನ್ನು ಬಗಲಲ್ಲಿರಿಸಿಕೊಂಡು ಬೆಂಗಳೂರಿನಲ್ಲಿ ಬಂದಿಳಿದಿದ್ದರು. ಆಗಲೆ ಅವರು ಕೃಶರೂ ಕಾಂತಿಹೀನರೂ ದುರ್ಬಲರೂ ಆಗಿ ಕಾಣುತ್ತಿದ್ದರು. ಮುಂಬಯಿಯಲ್ಲಿ ನಡೆದ ಜಾತೀಯ ದಂಗೆಗಳು ಅವರ ಮನಸಿನ ಮೇಲೆ ತೀವ್ರ ಆಘಾತವನ್ನು ಮಾಡಿದಂತಿತ್ತು. "ಹಿಂದೂ ಮುಸ್ಲಿಮರ ಕೊಲೆಯ ಆ ಘೋರ ದೃಶ್ಯ!" ಎಂಬುದು ಮಾತುಮಾತಿನ ಪಲ್ಲವಿಯಾಗಿ ಬರುತಿತ್ತು. ಒಮ್ಮೊಮ್ಮೆ ಏನೋ ಮರೆತಂತೆ "ಅವರೆಲ್ಲಿ! ಏನೋ ಮರೆತುಹೋಯಿತು. ಮಗೂ!" ಎನ್ನುತ್ತಿದ್ದರು. ಅದೇನೆಂದು ಯಾರಿಗೂ ಬಗೆಹರಿಯುತಿರಲಿಲ್ಲ. ಶನಿವಾರ ಸಂಜೆ ಅವರು ಎಂದಿನಂತೆ ವಾಯುವಿಹಾರಕ್ಕೆ ಹೋಗಿ ಬಂದಿದ್ದರು. ಮಾತ್ರ ಮುಂಜಾನೆ ೫ ಗಂಟೆಗೆ ಎದ್ದು ಕಾಫಿ ಕೇಳುತ್ತ ಹೊರಬರುವ ಅವರು ಅಂದು ಬರಲಿಲ್ಲ. ಅವರ ಕೋಣೆಯಲ್ಲಿ ಹೊಕ್ಕು ನೋಡಲಾಗಿ ಶ್ರೀ ಕೈಲಾಸಂ ಅವರು ನಿದ್ರೆಯಲ್ಲಿಯೆ ಪರಂಧಾಮನನ್ನು ಸೇರಿಬಿಟ್ಟಿದ್ದರು.

ಸುದ್ದಿ ಮಿಂಚಿನಂತೆ ಹಬ್ಬಿತು. ಗೆಳೆಯರೂ ಸಾಹಿತಿಗಳೂ ಬಂದು ಕಿಕ್ಕಿರಿದರು. ಶ್ರೀ ಡಿ. ವಿ. ಗುಂಡಪ್ಪ, ಮಾಸ್ತಿ, ಜಿ. ಪಿ. ರಾಜರತ್ನಂ, ವೀರಕೇಸರಿ ಸೀತಾರಾಮ ಶಾಸ್ತ್ರಿ, ಕೆ. ವಿ. ಅಯ್ಯರ, ಪಿ. ಆರ್. ರಾಮಯ್ಯ, ಬಿ. ಎಸ್. ವೆಂಕಟರಾಮ ಮೊದಲಾದ ಹಲವು ಪ್ರಮುಖರು ನೆರೆದರು. ಆದಿತ್ಯವಾರ ೧೧ಗಂಟೆಗೆ ಯುವಕರ ಹೆಗಲಲ್ಲಿ ಅವರ ಸ್ಮಶಾನಯಾತ್ರೆ ಹೊರಟಿತು. "ಕನ್ನಡಕೊಬ್ಬನೆ ಕೈಲಾಸಂ" "ಕೈಲಾಸಂಗೆ ಜಯ" ಎಂಬ ಘೋಷಗಳು ಕೇಳುತ್ತಿದ್ದವು. ಅವರ ಪತ್ನಿಯೂ ಪುತ್ರಿಯೂ ಬಂದಿದ್ದರು. ಪತ್ನಿಯೇ ಅಗ್ನಿ ಪ್ರತಿಷ್ಠೆ ಮಾಡಿದರು. ಹಾರತುರಾಯಿಗಳ ಅರ್ಪಣೆಯಾಯಿತು. ಗೆಳೆಯ ಶ್ರೀ ಬಿ. ಎಸ್. ವೆಂಕಟರಾಮರು ಒಂದು ಸಿಗರೇಟು ಹೊತ್ತಿಸಿ ಕೈಲಾಸಂ ಕೈಲಿಟ್ಟು ಅವರ ಅಂತಿಮೇಚ್ಛೆಯನ್ನು ನೆರವೇರಿಸಿದರು.

ಶ್ರೀ ಕೈಲಾಸಂ ಅವರ ವ್ಯಕ್ತಿತ್ವ ಅದ್ಭುತ ಮತ್ತು ಸ್ವಲ್ಪ ವಿಚಿತ್ರವಾಗಿತ್ತು. ಅತ್ಯುಚ್ಚ ಪ್ರತಿಭೆಯೊಂದಿಗೆ ತೀರ ಸರಳವಾದ ಮಗುವಿನ ಮನಸು ಬೆರೆದಿದ್ದುದು ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಅವರ ಜೀವನ ಯಾವ ಕಟ್ಟುಪಾಡನ್ನೂ ಸಹಿಸಿದ್ದಿಲ್ಲ. ಅದು ಸ್ವಚ್ಛಂದ, ಸ್ವಯಂಸ್ಫೂರ್ತ. ಸ್ತುತಿ ನಿಂದೆಗಳು ಎಂದಿಗೂ ಅವರ ಮನಸ್ಸನ್ನು ಸೆಳೆದುನೂಕಿದ್ದಿಲ್ಲ. ಮದ್ರಾಸಿನಲ್ಲಿ ಶಿಕ್ಷಣವನ್ನು ಪೂರೈಸಿ ಇಂಗ್ಲಂಡಿಗೆ ಹೋಗಿ ಭೂಗರ್ಭ ಶಾಸ್ತ್ರದಲ್ಲಿ ಪ್ರಶಸ್ತಿಗಳಿಸಿ ಹಲವರ್ಷ ಅಲ್ಲಿ ಉಳಿದು ಅದನ್ನು ತಮ್ಮ "ಎರಡನೆ ಮನೆ" (Second home) ಮಾಡಿಕೊಂಡಿದ್ದರು. ಮರಳಿದಾಗ ಮೈಸೂರು ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಸರಕಾರಿ ನೌಕರಿಯ ಪಂಜರ ಅವರನ್ನು ಹಿಡಿಯುವಷ್ಟು ವಿಶಾಲವಿದ್ದಿಲ್ಲ. ಒಂದು ಉದ್ವಿಗ್ನ ಕ್ಷಣದಲ್ಲ ರಾಜೀನಾಮೆಯಿತ್ತು ಹೊರಗೆ ಬಂದರು. ಅಂದಿನಿಂದ ಸಾಹಿತ್ಯ, ರಂಗಭೂಮಿ ಅವರ ಜೀವನವಾಗಿದ್ದವು. ವರದಾಚಾರ್ಯರ ನಾಟಕ ಸಂಸ್ಥೆಯನ್ನು ಸೇರಿದರು. ಸಂಗೀತವಿಲ್ಲದ ಸಾಮಾಜಿಕ ನಾಟಕಗಳನ್ನು ಜನಪ್ರಿಯವಾಗಿ ಮಾಡಲು ಹೆಣಗಿದರು. ಆದರೆ ಕೀರ್ತಿಯ ಮರುಳು ಅವರನ್ನೆಂದೂ ಆಕ್ರಮಿಸಲಿಲ್ಲ. ಅವರ ಕೃತಿಗಳಾಗಿ ಇಂದು ಕನ್ನಡಿಗರಿಗೆ ಪ್ರಿಯವಾಗಿರುವವುಗಳೆಲ್ಲ ಅವರ ಗೆಳೆಯರು ಹಟಕೊಟ್ಟು ಬರೆಸಿಕೊಂಡವುಗಳು. ನಾಟಕರಚನೆಯಲ್ಲಿ ಅವರದು ಕ್ರಾಂತಿಕಾರಕ ಮಾರ್ಗ. ಸಾಮಾಜಿಕ ದೋಷಗಳ ಮೂಲವನ್ನು ಅವರಷ್ಟು ಮಾರ್ಮಿಕವಾಗಿ ಚಿತ್ರಿಸಿದವರಿಲ್ಲ. ಜಗತ್ತಿನಲ್ಲಿ ಯಾವ ಭಾಷೆಯಲ್ಲಿಯೂ ಅವರು ಪ್ರಥಮ ವರ್ಗಕ್ಕೆ ಸೇರುತ್ತಿದ್ದರು. ಇಂಗ್ಲೀಷಿನಲ್ಲೂ ಕೆಲವಷ್ಟು ಬರೆದಿದ್ದರು. ಕನ್ನಡಿಗರು ಮೊದಮೊದಲು ಅವರನ್ನು ಗೌರವಿಸಲಿಲ್ಲ. ಆದರೆ ಕೈಮೀರುವ ಮೊದಲೇ ಈ ನಿಃಸ್ಪೃಹ ಸಾಹಿತಿಯನ್ನು ಗೌರವಿಸುವ ಅವಶ್ಯಕತೆಯನ್ನು ಮನಗಂಡು ೧೯೪೫ರ ಕೊನೆಯಲ್ಲಿ ಮದ್ರಾಸಿನಲ್ಲಿ ಕೂಡಿದ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರನ್ನಾಗಿ ಆರಿಸಿತು.

ಶ್ರೀ ಕೈಲಾಸಂ ಅವರ ನಿಧನದಿಂದ ಕನ್ನಡ ನಾಡು ಬಹಳ ಬಡವಾಗಿದೆ. ನಾಡಿನಲ್ಲೆಲ್ಲ ಅವರ ನಿಧನಕ್ಕಾಗಿ ದುಃಖಸೂಚಕ ಸಭೆಗಳಾದವು.

### ಕೈಲಾಸಂ

ನುಡಿದ ನುಡಿಗಳ ಕಿಡಿಯು ನುಡಿದಂತೆ ಸಿಡಿದೆದ್ದು  
ಸಿಂಹಮುಖದಲಿ ಹೊಳೆವ ಕಂಗಳಲಿ ಕುಣಿದಾಗ  
ಮಾತು ಮಾತಿಗೆ ಹುಟ್ಟುತೆದೆಯ ಕಲಮಲವೆದ್ದು  
ಮಾನವತೆ ಮನದಲ್ಲಿ ಮೈದಾಳಿ ನಿಂತಾಗ  
ನಿರ್ಮಿಸಿದ ಪಾತ್ರಗಳು ಜೀವನಾಡಿಯ ಮಿಡಿದು  
ಜೀಕವಾಡುತಲಿರಲು ನಿತ್ಯನೂತನ ನಿನ್ನ  
ನಾಟ್ಯ ರಚನೆಯ ಸೃಷ್ಟಿಯಲ್ಲಿಟ್ಟ ಹೊಸ ದೃಷ್ಟಿ  
ಪಾತ್ರಗಳ ಪರಿಪುಷ್ಟಿ ಕನ್ನಡದ ರಸಗಟ್ಟಿ.

ನಿನ್ನಾತ್ಮ ರಂಗದಲಿ ಪಾತ್ರವಾಡುತಲಿರುವ  
ಪಾತ್ರಗಳ ವಿವಿಧತೆಗೆ ರಂಗಭೂಮಿಯೆ ಕೊನೆಯೆ?  
ನಿನ್ನಾತ್ಮ ಜ್ಯೋತಿಯಲಿ ಪರಿಪಾಕಗೊಂಡಿರುವ  
ಪಾತ್ರ ಪರಿವಾರಕ್ಕೆ ಅಮರಜೀವನ ಘನವೆ?  
ಆ ಪಾತು ಆ ಸಾತು ನಾಗತ್ತೆಗಳ ಬ್ರಹ್ಮ!  
ಕರ್ನಲ್ ಕಳಲವ್ಯರಿಗೆ ನೀನೆ ವಿಶ್ವಕರ್ಮ!!

—ಕೃಷ್ಣಮೂರ್ತಿ ಪುರಾಣಿಕ

# ವ್ಯಾಪಾರ ಪ್ರಪಂಚ

## ಮುಂಬಯಿ ಶೇರ ಪೇಟೆ

ತಾ. ೨೭

ರಾಜಕೀಯ ರಂಗದಲ್ಲಿ ಮತ್ತೆ ಅನಿಶ್ಚಿತತೆ ತೀವ್ರವಾದುದರಿಂದ ಈಗ ಕೆಲ ದಿನಗಳಿಂದ ಮುಂಬಯಿ ಶೇರ ಪೇಟೆಯಲ್ಲಿ ಬಹಳ ಇಳಿತಾಯವಾಗಿ ಬಿಟ್ಟಿದೆ. ಕಳೆದವಾರ (ತಾ. ೨೧) ರೂ. ೨೯೮೫ ರಲ್ಲಿದ್ದ ಟಾಟಾ ಸ್ಟೀಲ ಡೆಫರ್ಡ ಪಾಲು ೨೮೪೦—೦—೦ ಕ್ಕಿಳಿದು ಮತ್ತೆ ೨೮೭೫-೦-೦ ಕ್ಕೇರಿದರೂ ಪುನಃ ೨೮೦೭-೦-೦ ಕ್ಕಿಳಿದು ಹೋಯಿತು. ಬಾಂಬೆ ಡಾಯಿಂಗ್ ದೊಡನೆ ಎಲ್ಲ ಜವಳಿ ಪಾಲುಗಳೂ ಇಳಿದು ಹೋದವು. ಡಾಯಿಂಗ್ ೨೯೧೦—೦—೦ ರಿಂದ ೨೭೧೦—೦—೦ ಕ್ಕಿಳಿದು ಎರಡು ನೂರು ರೂ. ಕಳೆದುಕೊಂಡಿದೆ. ಫಿನ್ಲೆ ೪೨೦—೦—೦ ರಿಂದ ೩೯೫-೦-೦ ಕ್ಕೂ ಕೋಹಿನೂರು ೯೬೦ ರಿಂದ ೯೦೭-೦-೦ ಕ್ಕೂ ಸ್ವದೇಶಿ ೭೬೩-೦-೦ ರಿಂದ ೭೧೦-೦-೦ ಕ್ಕೂ ಗೋಕಾಕ ೩೯೮-೦-೦ ರಿಂದ ೩೭೨-೦-೦ ಕ್ಕೂ ಸೆಂಚುರಿ ೧೧೭೫-೦-೦ ರಿಂದ ೧೧೩೦-೦-೦ ಕ್ಕೂ ಇಳಿದವು. ಸಿಂಧ್ಯ ಸ್ಟೀಮು ೪೯-೪-೦ ರಿಂದ ೪೬-೧೨-೦ ಕ್ಕೂ ಅಸೋಸಿಯೇಟೆಡ್ ಸಿಮೆಂಟು ೨೪೧-೧೨-೦ ರಿಂದ ೨೩೩ ಕ್ಕೂ ಹೋದವು. ಬ್ಯಾಂಕು ಪಾಲುಗಳಲ್ಲಿ ಸೆಂಟ್ರಲ್ ಬ್ಯಾಂಕು ೧೩೨-೮-೦ ರಿಂದ ೧೨೭-೦-೦ ಕ್ಕೂ ಇಂಪೀರಿಯಲ್ ಎಸ್. ಸಿ. ೨೮೪೦-೦-೦ ರಿಂದ ೨೭೯೦-೦-೦ ಕ್ಕೆ ರಿಝರ್ವ ೧೫೪-೮-೦ ರಿಂದ ೧೫೨-೪-೦ ಕ್ಕೆ ಇಳಿದು ಇತರ ಪಾಲುಗಳ ದಾರಿಯನ್ನೇ ಹಿಡಿದವು. ಒಟ್ಟಿನ ಮೇಲೆ ಮಾರುವವರ ಒತ್ತಡ ಬಹಳವಾಗಿದೆ.

ಸರಕಾರಿ ಸಾಲ ಪತ್ರಗಳಲ್ಲ ಜಿ. ಪಿ. ನೋಟು ೧೦೪-೧೩-೬ ರಿಂದ ೧೦೪-೮-೦ ಕ್ಕೂ ೩½%. (೧೯೪೬—೫೦) ಸಾಲ ೧೦೨—೦—೦ ರಿಂದ ೧೦೧—೧೪—೦ ಕ್ಕೂ ಇಳಿದು ಹೋದವು.

### ಚಿನ್ನ ಬೆಳ್ಳಿ

ಬುಲಿಯನ್ ಎಕ್ಸಚೇಂಜದಲ್ಲಿ ತಾತ್ಪೂರ್ತಿಕ ಒಡಂಬಡಿಕೆಯಾಗಿದೆ. ಇದರಿಂದ ವಾಯದಾ ವ್ಯಾಪಾರ ನಿಲ್ಲಿಸಲ್ಪಟ್ಟಿದೆ. ತಯಾರಿ ಚಿನ್ನ ರೂ. ೧೦೩—೦—೦ ರ ವರೆಗೂ ಹೋಗಿ ಈಗ ೧೦೦—೧೨—೦ ಗೆ ಬಂದಿದೆ. ಬೆಳ್ಳಿ ತಯಾರಿ ೧೫೨—೦—೦ ರ ವರೆಗಿದ್ದುದು ೧೪೨—೦—೦ ಕ್ಕಿಳಿದಿದೆ.

### ಅರಳೆ

ಶಾಂಘಾಯಿಯಲ್ಲಿ ಅರಳೆಯ ಸಂಗ್ರಹ ಬಹಳ ಏರಿದೆಯೆಂದು ಸುದ್ದಿ ಬಂದಿದೆ. ಜನೇವರಿ ವಾಯಿದೆ ಐ. ಸಿ. ಸಿ. ಅರಳೆ ೪೬೦—೬—೦ ರಿಂದ ೪೫೭—೮—೦ ವರೆಗೂ ಇಳಿದು ಪುನಃ ೪೬೧—೮—೦ ಕ್ಕೇರಿ ೪೬೦—೨—೦ ಕ್ಕೆ ಬಂದಿದೆ. ಮಾರ್ಚ ವಾಯಿದೆ ೪೬೮—೨—೦; ಮೇ ೪೭೫—೧೦—೦; ಜುಲೈ ೪೮೩—೨—೦; ಸಪ್ಟೆಂಬರ ೪೮೮—೧೨—೦ ರಲ್ಲಿ ಇಂದು ಕೊನೆಗೊಂಡವು.

### ಎಣ್ಣೆ ಕಾಳು

| | |
|---|---|
| ಶೇಂಗಾ | ೧೧೬-೦-೦ |
| ಅಗಸಿ | ೨೩-೬-೦ |
| ಅಗಸಿ ಎಣ್ಣೆ | ೧೬-೬-೦ |

### ಶಿವಮೊಗ್ಗ

| | |
|---|---|
| ಅಡಿಕೆ ದೇಶಾವರ ನಂ. ೧ಮಣ ೧ಕ್ಕೆ | ೩೮-೪೧ |
| ,, ,, ೨ | ೩೬-೩೮ |
| ರಾಜಾ ಅಲವು | ೩೨-೩೭ |
| ತೊರಸಾಲು | ೩೩-೩೭½ |
| ಬೆಟ್ಟೆ | ೨೪-೨೬ |
| ಬೆಟ್ಟೆ ವಂತಿ | ೨೭-೨೮ |
| ನುಲಿ | ೩೭-೪೦ |

### ಸಾಂಗಲಿ ಪೇಟೆ

| | |
|---|---|
| ಬೆಲ್ಲ ಬಂಗಾಲಿ ಮಣ ರೂ. | ೧೩೬ |
| ಅರಿಷಣ ಹೇರು | ೯೬-೯೭ |
| ಶೇಂಗಾ ಖಂಡಿ ,, | ೬೫-೮೦ |
| ಮೆಣಸಿನಕಾಯಿ ಹೇರು ,, | ೧೨೫-೨೦೦ |
| ಮಿರ್ಜ ತಂಬಾಕು ಹೇರು | ೧೫೦-೨೫೦ |
| ತಂಬಾಕ ಪಂಢರಪುರಿ ,, | ೨೦೦-೨೭೫ |
| ತಂಬಾಕು ಅಕೋಳ(ಹೇರು) | ೨೫೦-೪೦೦ |

### ಹುಬ್ಬಳ್ಳಿ ಪೇಟೆ

| | | |
|---|---|---|
| ಜಯವಂತ ಹತ್ತಿ | ನಂ. ೧ | ೨೮೦-೨೮೫ |
| ,, | ನಂ. ೨ | ೨೭೦-೨೭೫ |
| ,, | ನಂ. ೩ | ೨೬೦-೨೬೫ |
| ಅಪ್ಲಂಡ ಹತ್ತಿ | | ೨೬೦-೨೬೫ |
| ಜಿನ | | ೨೦೦-೨೦೫ |
| ಸಾಜಿನ | | ೧೮೦-೧೯೫ |
| ಡಬಲರೋಲ | | ೧೯೦-೧೯೫ |

# ಬೆಂಗಳೂರು-ಮೈಸೂರು

ಜಗತ್ಪ್ರಸಿದ್ಧ ಜೋಗ ಜಲಪಾತವನ್ನು ನೋಡಲು ಈಗ ಬರತಕ್ಕದ್ದಲ್ಲವೆಂದು ಪ್ರವಾಸಿಗಳಿಗೆ ಮೈಸೂರು ಸರಕಾರದವರು ವಿನಂತಿಸಿದ್ದಾರೆ. ಆಹಾರ ಬಿಕ್ಕಟ್ಟೇ ಇದಕ್ಕೆ ಕಾರಣ. ಆಹಾರ ಪರಿಸ್ಥಿತಿ ಸುಧಾರಿಸುವ ವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ಪರಿಷತ್ತನ್ನೂ ಜರಗಿಸತಕ್ಕದ್ದಲ್ಲವೆಂದು ವಿಧಿಸಲಾಗಿದೆ.

ಮೈಸೂರು ಸರಕಾರದ ೩ ದರದ ೫ ಕೋಟಿ ರೂಪಾಯಿ ಹೊಸ ಸಾಲಕ್ಕೆ ಅತಿರೇಕ ಬೇಡಿಕೆ ಎಂದರೆ ಒಂದಕ್ಕೈದು ಪಟ್ಟು ಬೇಡಿಕೆ ಬಂದಿದೆ.

ಹಿಂದುಸ್ತಾನ ಸರಕಾರದ ಯೋಜನೆಯನ್ನು ಅನುಸರಿಸಿ ಆಫು ಸೇದುವಿಕೆಯನ್ನು ಪ್ರತಿಬಂಧಿಸಲು ಮೈಸೂರು ಸರಕಾರವೂ ನಿರ್ಧರಿಸಿದೆ. ಈಗಲೆ ಚಟವುಳ್ಳವರು ವಿಶೇಷ ವೈದ್ಯಕೀಯ ಸರ್ಟಿಫಿಕೇಟ ತೋರಿಸಬೇಕಾಗುವದು.

ಬೆಂಗಳೂರು ಜಿಲ್ಹಾ ಮ್ಯಾಜಿಸ್ಟ್ರೇಟರು ಒಂದು ಅಜ್ಞೆ ಹೊರಡಿಸಿ ಶಾಂತಿ ರಕ್ಷಣೆಯ ದೃಷ್ಟಿಯಿಂದ ಮೊಹರಂ ಕಾಲದಲ್ಲಿ ತಾ. ೨೫ನೆ ನವೆಂಬರದಿಂದ ೫ನೇ ಡಿಸೆಂಬರವರೆಗೆ ಹುಲಿವೇಷ, ಪಾಳಯಗಾರ ವೇಷ ಮೊಲಾದ ಸೋಗುಗಳನ್ನೂ ಕತ್ತಿ, ಲಾಠಿ ಮೊದಲಾದ ಆಯುಧಗಳ ಧಾರಣವನ್ನೂ ಪ್ರತಿಬಂಧಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಸ್ನಾತಕಪತಿಗಳು ವಿಶ್ವವಿದ್ಯಾಲಯ ಸಂಘ ಮತ್ತು ಅದರ ಆರಿಸಲ್ಪಟ್ಟ ಪ್ರತಿನಿಧಿಗಳಗೂಡ ಅಯೋಗ್ಯವಾಗಿ ವರ್ತಿಸಿರುವದರಿಂದ ಅವರು ರಾಜೀನಾಮೆ ಕೊಡಬೇಕು ಇಲ್ಲದಿದ್ದರೆ ತಾ. ೨೮ರಿಂದ ಸಂಪು ಹೂಡಬೇಕೆಂದು ನಿರ್ಧರಿಸಿದ್ದಾರೆ.

ಬೆಂಗಳೂರು ನಗರ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ಸು ಅಧಿಕೃತವಾಗಿ ಭಾಗವಹಿಸಬಾರದೆಂದು ನಗರ ಕಾಂಗ್ರೆಸ್ ಸಮಿತಿ ನಿರ್ಣಯ ಮಾಡಿದೆ.

ಮೈಸೂರು ಶ್ರೀಮನ್ಮಹಾರಾಜರವರು, ತಾ. ೨೪ ಕ್ಕೆ ಬೆಂಗಳೂರು ನಗರವನ್ನು ಸಂದರ್ಶಿಸಿ ಅಲ್ಲಿ ನಡೆದ ಪುರೋಭಿವೃದ್ಧಿಯನ್ನು ಕಂಡು ಮೆಚ್ಚುಗೆಯನ್ನು ವ್ಯಕ್ತಗೊಳಿಸಿದರು.

ಬೆಂಗಳೂರು ಮಹಾರಾಜಾ ಗಿರಣಿಯ ಕೂಲಿಕಾರರು ಸಂಪುಹೂಡಿದ್ದು ಅದನ್ನು ಅಕ್ರಮವೆಂದು ಕೂಲಿಕಾರ ಖಾತೆಯವರು ಸಾರಿದ್ದಾರೆ. ಆದರೆ ಗಿರಣಿಯ ವ್ಯವಸ್ಥಾಪಕರು ಅವರನ್ನು ಹೊರಗಿಕ್ಕಿ ಬಾಗಿಲು ಹಾಕಿದ್ದರೆಂದು ಕೂಲಿಕಾರರ ವಾದವಿದೆ.

ಮೈಸೂರಿನ ಬ್ರಿಟಿಶ ರೆಸಿಡೆಂಟರಾದ ಕರ್ನಲ್ ಸರ್ ಪಿ. ಗೈಸ್ ಫರ್ಡರು ನಿವೃತ್ತರಾಗಿದ್ದು ಅವರ ಸ್ಥಾನದಲ್ಲಿ ನೇಮಿಸಲ್ಪಟ್ಟಿರುವ ಲೆ. ಕ. ಸರ್ ವಾಲ್ಟರ ಕ್ಯಾಂಬೆಲ್ಲರು ತಾ. ೨೮ ಕ್ಕೆ ಅಧಿಕಾರವನ್ನು ವಹಿಸಿಕೊಂಡರು.

# ದಕ್ಷಿಣ ಕನ್ನಡ

ಮಂಗಳೂರಲ್ಲಿ ಈಗ ಹಲದಿನಗಳಿಂದ ನಡೆಯುತಿರುವ ಬೀಡಿಕೂಲಿಕಾರರ ಮುಷ್ಕರ ವಿಕೋಪಕ್ಕೆ ಹೋಗಿ ತಾ ೨೧ಕ್ಕೆ ಶ್ರೀ ಪುತ್ತು ವೈಕುಂಠ ಶೇಠರ ಬೀಡಿ ಅಂಗಡಿಯ ಲೂಟಿಯಲ್ಲಿ ಪರಿಣಮಿಸಿತೆಂದು ತಿಳಿಯುತ್ತದೆ.

ಮಂಜೇಶ್ವರದಲ್ಲಿ ಬಾಳೆಯೆಲೆಯೊಳಗೆ ಎರಡು ಪ್ರಾಣಘಾತಕ ಕತ್ತಿಗಳನ್ನಿಟ್ಟುಕೊಂಡು ಕ...ನದಿಂದ ಸಾಗಿಸುತ್ತಿದ್ದವನನ್ನು ಪೋಲೀಸರು ಹಿಡಿದಿದ್ದಾರೆ.

ಮಂಗಳೂರು ಕೆನರಾ ಹಾಸ್ಕೂಲಿನ ಸ್ಥಾಪಕರ ದಿನ ತಾ ೧೬ಕ್ಕೆ ಶ್ರೀ ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಬೆಲ್ಲದ ಧಾರಣೆ ವಿಪರೀತವಾಗಿದ್ದದರಿಂದ ಅದನ್ನು ನಿಯಂತ್ರಿಸಬೇಕೆಂದು ಹಿಂದುಸ್ಥಾನ ಸರಕಾರದವರು ಎಲ್ಲ ಪ್ರಾಂತಿಕ ಸರಕಾರಗಳಿಗೆ ತಿಳಿಸಿದ್ದಾರೆ. ಮುಂಬಯಿ ಸರಕಾರದವರು ಬೇಗನೆ ಬೆಲ್ಲದ ಧಾರಣೆ ನಿಯಂತ್ರಿಸುವರೆಂದು ತಿಳಿಯುತ್ತದೆ.



ವಾರದ ಕತೆ (ದಿ. ಪ್ರೇಮಚಂದರ 'ಸವತೇಲಿ ಮಾ' ಎಂಬ ಕತೆಯ ಅನುವಾದ)

# ಮಲತಾಯಿ

ಲೇ:- ಶ್ರೀವತ್ಸ, ಕಲಬುರ್ಗಿ

ಹೆಂಡತಿ ತೀರಿಕೊಂಡು ಮೂರೇ ತಿಂಗಳಲ್ಲಿ ಎರಡನೇ ಲಗ್ನವಾಗುವದು ತೀರಿಕೊಂಡ ಹೆಂಡತಿಯ. ಅತ್ಮಕ್ಕೆ ಕೃತಘ್ನನಾದಂತೆ ಸರಿ. ಎರಡನೇ ಲಗ್ನಕ್ಕೆ ಏನಾದರೂ ನೆವ ಮುಂದು ಮಾಡುವದು ತೀರ ನಾಚಿಗ್ಗೇಡು. ನನ್ನ ವಿಚಾರವನ್ನು ಒಪ್ಪುವದಾದರೆ, ಎಳೇ ಕೂಸಿಗೆ ಒಬ್ಬ ತಾಯಿಯ ಅವಶ್ಯಕತೆಯನ್ನು ಯಾರು ಅಲ್ಲಗಳೆಯಲಾರರು. ಒಬ್ಬ ನವವಧುವಿನ ಮೇಲೆ ತಾಯತನದ ಹೊಣೆಯನ್ನು ಹೇರುವದು ಅರಳುವ ಕೋಮಲ ಹೂವಿಗೆ ಬಿಸಿ ಗಾಳಿ ಸೋಂಕಿಸಿದ ಹಾಗೆಯೆ ಸರಿ. ಮೊದಲನೆ ದಿನವೇ ಲತೆಗೆ ನನ್ನ ವಿಚಾರವನ್ನು ತಿಳಿಸಿದೆ.

ಎರಡು ತಿಂಗಳು ಕಳೆದವು. ಪ್ರತಿದಿನ ಮುನ್ನುನನ್ನು ಕರೆದುಕೊಂಡು ಸಂಜೆಗೆ ತಿರುಗಾಡಲು ಹೋಗುತ್ತಿದ್ದೆ. ಮರಳುವಾಗ ಗೆಳೆಯರನ್ನು ಭೆಟ್ಟಿಯಾಗಿ ಬರುವ ವಾಡಿಕೆ ಇತ್ತು. ಈ ಸಮಯದಲ್ಲಿ ಮುನ್ನುನ ಆನಂದಕ್ಕೆ ಪಾರವೇ ಇಲ್ಲ. ಗೆಳೆಯರ ಭೆಟ್ಟಿ ಕೇವಲ ಮಾತುಕತೆಗಾಗಿರದೆ ಮುನ್ನುನ ಬಾಲಲೀಲೆಯ ಪ್ರದರ್ಶನವಾಗಿತ್ತೆಂದು ಹೇಳಬಹುದು. ಮುನ್ನುನ ಬುದ್ಧಿ ಕುಶಲತೆಗೆ ಗೆಳೆಯರು ಬಹಳ ಮೆಚ್ಚಿದ್ದರು. ನನಗೂ ಒಂದು ತರದ ಆನಂದವೆನಿಸುತ್ತಿತ್ತು.

ಒಂದು ದಿನ ಮುನ್ನುನನ್ನು ಕರೆದುಕೊಂಡು ಜ್ವಾಲಾಸಿಂಗರ ಮನೆಗೆ ಹೋಗಿದ್ದೆ. ಇವರು ನನ್ನ ಸರಳ ಹೃದಯದ ಗೆಳೆಯರು. ಇವರು ನಿಸ್ಪೃಹ ಸ್ವಭಾವದವರು. ಮನೆತನದ ವಿಷಯವನ್ನು ಎಂದೂ ಪ್ರಸ್ತಾಪ ಮಾಡುತ್ತಿದ್ದಿಲ್ಲ. ಬಹಳ ಅಂತರಂಗ. ಅಂತರಂಗದಲ್ಲಿಯೂ ಅಂತರಂಗ.

"ಯಾಕೆ ಮುನ್ನು ನಿನ್ನ ಚಿಕ್ಕಮ್ಮ ಬಹಳ ಪ್ರೀತಿಸುತ್ತಾಳಲ್ಲವೇ?" ಎಂದು ಬಾಬೂ ಜ್ವಾಲಾಸಿಂಗರು ಕೇಳಿದರು. ನಾನು ನಗುತ್ತ ಮುನ್ನುನ ಕಡೆಗೆ ನೋಡಿದೆ. ಅವನ ಉತ್ತರದ ಬಗೆಗೆ ಯಾವ ಸಂಶಯವಿದ್ದಿಲ್ಲ. ಲತೆಯ ಮೇಲೆ ನನ್ನ ಸಂಪೂರ್ಣ ವಿಶ್ವಾಸ. ಮುನ್ನು ಉತ್ತರವನ್ನು ಮಾತಿನಿಂದ ಕೊಡಲಿಲ್ಲ. ಕಣ್ಣಿನಿಂದ ಕೊಟ್ಟ. ನನಗೆ ಆಶ್ಚರ್ಯವೆನಿಸಿತು. ಎರಡು ತಿಂಗಳಲ್ಲಿ ಚಿತ್ರಿಸಿದ ಸುಂದರ ಚಿತ್ರವನ್ನು ಆ ಕಂಬನಿಗಳು ಅಳಿಸಿದವು. ಜ್ವಾಲಾಸಿಂಗರು ಸದಯದ ನೋಟವನ್ನು ಬೀರುತ್ತ "ಯಾಕಳುವೆ ಮುನ್ನು?" ಎಂದರು. "ನಾನೆಲ್ಲಿ ಅಳುವೆ? ಹೊಗೆಯಿಂದ ಕಣ್ಣು ನೀರು ಬಂದಿರಬಹುದು," ಎಂದ ಮುನ್ನು. ಮಲತಾಯಿಯ ಮೇಲೆ ಸಂಶಯ ಪಡುವದು ವಿಶೇಷವೇನೂ ಅಲ್ಲ, ಜಗತ್ತಿನ ನಿಯಮವೇ ಇದೆ. ನಾನು ಸಂಶಯದಿಂದ ದೂರುಳಿಯಲಿಲ್ಲ. ಲತೆ ನಿರ್ದಯೆ ಎಂದು ತೀರ್ಮಾನಿಸಿದೆ. ಹೊರಗೆ ಬಂದೆ; ನಾಚಿಕೆಯು ಶಿರವನ್ನು ಮೇಲೆತ್ತಗೊಡಲಿಲ್ಲ.

ವಿಚಾರ ಮಾಡುತ್ತ ಮನೆ ಕಡೆಗೆ ಸಾಗಿದೆ. "ಯಾವ ಪ್ರಕಾರವಾಗಿ ಸಿಟ್ಟನ್ನು ವ್ಯಕ್ತಪಡಿಸಲಿ? ಬಾಯಿಗೆ ಬೀಗ ಹಾಕಿಕೊಂಡು ಕೂಡ್ರುವದು ಶಕ್ಯವಿಲ್ಲ. ಲತೆಗೆ ನಿಷ್ಠುರವಾಗಿ ಹೇಳಲೆ? ಊಟಕ್ಕೆ ಎಬ್ಬಿಸಿದರೆ ತಲೆ ನೋಯಿಸುತ್ತಿದೆ ತ್ರಾಸಕೊಡಬೇಡವೆಂದು ಬೇಸರದ ಧನಿಯಲ್ಲಿ ಹೇಳಲೆ? ಲತೆ ಅವಶ್ಯವಾಗಿ ತಿಳಿದುಕೊಳ್ಳುವಳು; ಏನೋ ಮನಸ್ಸಿನ ವಿರುದ್ಧ ಸಂಭವಿಸಿದೆಂದು. ಕ್ಷಮೆ ಬೇಡಲು ಬಂದರೆ ಚುಚ್ಚುವ ಹಾಗೆ ಮಾತಾಡುತ್ತೇನೆ. ನೆನೆಸುವ ಹಾಗೆ ಅತ್ತಿರಬೇಕು. ಮತ್ತೊಂದು ವಿಚಾರ: ಅವಳ ನಗುಮೊಗವನ್ನು ನೋಡುತ್ತಲೇ ನನ್ನ ಮನಸ್ಸು ಒಪ್ಪುವದಿಲ್ಲ. ಅವಳ ಎರಳೆನೋಟ, ಸವಿಮಾತು ನನ್ನ ಪಾಷಾಣ ಹೃದಯವನ್ನು ನೀರಾಗಿಸುತ್ತವೆ. ಆದರೆ ನನ್ನ ಮನಸ್ಸಿಗೆ ಶಾಂತಿಯಿಲ್ಲ— ಹೀಗೇಕೆ? ಸುಖದಲ್ಲಿಯೂ ದುಃಖದಲ್ಲಿಯೂ ನನ್ನ ನೈತಿಕ ಬಲವು ಕಳೆಗುಂದಿದ್ದಿಲ್ಲ. ಆದರೆ ಈಗೆಲ್ಲಿ ಆ ವಾತಾವರಣ?

ಈ ಎಲ್ಲ ವಿಚಾರಗಳು ನನ್ನ ಮನಸ್ಸನ್ನು ಗಟ್ಟಿ ಮಾಡಿದವು ಅದರೂ ಹೆಜ್ಜೆ ಹೆಜ್ಜೆಗೆ ಸಿಟ್ಟು ಸಡಿಲಾಗತೊಡಗಿತು. "ಕೊನೆಗೆ ಮನಸ್ಸಿನ ವಿರುದ್ಧ ಸಿಟ್ಟನ್ನಾದರೂ ನಟಿಸಿ ಹೋದಾಕ್ಷಣವೇ ಸಮಾಚಾರ ತೆಗೆದುಕೊಳ್ಳುವೆ, ತಡಮಾಡಿ ಹೋದರೆ ಸಿಟ್ಟು ಪೂರ್ತಿ ಕೊಚ್ಚಿಹೋದೀತು" ಎಂದು ವಿಚಾರಿಸುತ್ತ ಮನೆಯ ಕಡೆಗೆ ತೀವ್ರ ಸಾಗಿದೆ.

ಮನೆಯಲ್ಲಿ ಕಾಲಿಡುತ್ತಲೆ ಲತೆ ಓಡಿಬಂದು ಮುನ್ನುನನ್ನು ಎತ್ತಿಮುದ್ದಿಟ್ಟಳು. "ಇಷ್ಟೊತ್ತಿನವರೆಗೆ ಎಲ್ಲಿ ಹೋಗಿದ್ದಿರಿ? ನಿಮ್ಮ ಸಲುವಾಗಿ ತಿಂಡಿ ಮಾಡಿದ್ದೇನೆ" ಎಂದಳು. ಅವಳ ನಿಷ್ಕಾಮ ಪ್ರೇಮದಿಂದ ನನ್ನ ಕೃತ್ರಿಮ ಸಿಟ್ಟು ಮಾಯವಾಯಿತು. ಇಂಥವಳ ಮೇಲೆ ಅಪವಾದ ಹೊರಿಸುವದು ಮೂರ್ಖತನ. ಮುನ್ನು ಅಜ್ಞಾನಬಾಲಕ, ಬಹುಶಃ ತಾಯಿಯನ್ನು ನೆನೆದು ಅತ್ತಿರಬಹುದು.

ನಮ್ಮ ಮನೋವೇಗಗಳು ಮುಂದಾಲೋಚನೆಯನ್ನು ಲಕ್ಷಿಸುವದಿಲ್ಲ. ಆದುದರಿಂದ ಅನೇಕ ಮಾತುಗಳನ್ನು ಬಳಸಬೇಕಾಗುತ್ತದೆ. ಒಮ್ಮೊಮ್ಮೆ ಅವೇ ಮಾತು ಪ್ರತಿಕೂಲವಾಗಿ ಪರಿಣಮಿಸುತ್ತವೆ. ಮನಸ್ಸಿನಲ್ಲಿದ್ದದ್ದೂ ತನ್ನ ನಿಜ ಸ್ವರೂಪದಲ್ಲಿಯೇ ಪ್ರಕಟವಾಗುತ್ತದೆ.


ಲತೆಯ ಮೇಲೆ ಸಿಟ್ಟಾಗಲಿಲ್ಲ. ಅವಳಿಗೆ ಸೌಮ್ಯದಲ್ಲಿ "ಮುನ್ನು ಇಂದು ನನ್ನ ಮುಖಕ್ಕೆ ಕಪ್ಪು ಬಡೆದಿದ್ದ. ಜ್ವಾಲಾಸಿಂಗರು, ನಿಮ್ಮ ಚಿಕ್ಕಮ್ಮ ನಿನ್ನನ್ನ ಪ್ರೀತಿಸುವದಿಲ್ಲವೋ? ಎಂದು ಕೇಳಿದರು. ಮುನ್ನು ಅಳಲಿಕ್ಕಹತ್ತಿದ— ನೀನೇನಾದರೂ ಅಂದಿರಬೇಕೆಂದು ನನ್ನ ತಲೆಯಲ್ಲಿ ಬಂತು" ಎಂದೆ. ಈ ಮಾತು ಎಷ್ಟೆನ್ನು ಮೃದುವಾಗಿದ್ದರೂ ಅದರ ಭಾವ ಮುಚ್ಚಬಹುದೆ?— ಲತೆಯ ಮುಖವೂ ಬಾಡಿತು. "ಎಂದಾದರೂ ಈ ಮಾತು ಬರಬಹುದೆಂದು ಮುಂಜಾಗ್ರತೆಯಿಂದ ನಡೆದುಕೊಂಡು ಬಂದಿದ್ದೇನೆ. ಮುನ್ನುನ ಮಾತೃವಿಯೋಗದ ದುಃಖವನ್ನು ಮರೆಸುವುದು ಯಾರಿಂದ ಸಾಧ್ಯ? ಇದರ ಸಲುವಾಗಿ ಜೀವವನ್ನೇ ಅರ್ಪಿಸಿದರೂ ಕೊನೆಗೆ 'ಮಲತಾಯಿ' ಎಂಬ ಶಬ್ದ ಬಿಡುವದಿಲ್ಲ," ಎಂದು ಕಂಬನಿಗರೆದಳು.

ನನ್ನ ಮಾತಿನಿಂದ ಏನಾದರೂ ವಿರುದ್ಧ ಸಂಭವಿಸಬಹುದೆಂದು ಭಯಪಟ್ಟಿದ್ದೆ. ಆದರೆ ಮರುದಿನವೆ ಲತೆಯ ನಡತೆಯಲ್ಲಿ ಪರಿವರ್ತನೆಯನ್ನು ಕಂಡೆ. ಬೆಳಗಿನಿಂದ ಬೈಗಿನ ವರೆಗೆ ಮುನ್ನುನ ಚಿಂತೆಯೇ ಚಿಂತೆ. ಅನೇಕ ಸಾರೆ ಅವಳ ನಡತೆ ನನಗೆ ಸರಿದೋರುತ್ತಿರಲಿಲ್ಲ.

ಒಂದು ದಿನ ವಾಡಿಕೆಗಿಂತ ಮುಂಚಿತವಾಗಿಯೇ ಕಚೇರಿಯಿಂದ ಮನೆಗೆ ಬಂದೆ. ಮುನ್ನು ಗೋಡೆಗೆ ಮುಖಮಾಡಿ ನಿಂತುಕೊಂಡಿದ್ದ. ಕಣ್ಣು ಮುಚ್ಚಾಲೆ ನೆನಪಿಗೆ ಬಂದು ಅವನ ಕಣ್ಣು ಮುಟ್ಟಿದೆ—ಹಾವು ಕಚ್ಚಿದ ಹಾಗಾಯಿತು—ಕೈ ತೆಗೆದುಕೊಂಡೆ. ಕಣ್ಣು ತೊಯಿದಿದ್ದವು. ಅಸಮಾಧಾನವಾಯಿತು. ಮುನ್ನುನನ್ನು ಎತ್ತಿ "ಯಾಕಳುವೆ ಮುನ್ನು?" ಎನ್ನುತ್ತ ನನ್ನ ಕಣ್ಣಲ್ಲಿಯೂ ನೀರು ತುಂಬಿದವು. "ಇಲ್ಲ, ಎಲ್ಲಿ ಅಳುವೆ?" ಎಂದ. ಕೊರಳಿಗೆ ಕೈಹಾಕಿಕೊಂಡು "ಅಮ್ಮನೇನಾದರೂ ಅಂದಿರಲಿಕ್ಕಿಲ್ಲಷ್ಟೇ?" ಎಂದು ಕೇಳಿದೆ. "ಇಲ್ಲ, ಅಮ್ಮ ಬಹಳ ಪ್ರೀತಿಸುತ್ತಾಳೆ" ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನ ಮಾತು ಭರವಸೆಯಾಗಲಿಲ್ಲ. "ಅವಳು ಪ್ರೀತಿಸಿದರೆ ಅಳುವದುಂಟೇ? ಅಂದು ಜ್ವಾಲಾಸಿಂಗರ ಮನೆಯಲ್ಲಿಯೂ ಅತ್ತಿ—ಅಮ್ಮ ಸಿಟ್ಟಾಗಬಹುದೆಂದು ಹಾಗೆ ಹೇಳುತ್ತೀಯಾ?" ಎಂದು ಕೇಳಿದೆ. "ಇಲ್ಲ ಅಮ್ಮ ಬಹಳ ಪ್ರೀತಿಸುತ್ತಾಳೆ—ಏಕಂದರೆ ನಮ್ಮಮ್ಮ ಬಹಳ ಪ್ರೀತಿಸುತ್ತಿದ್ದಳು. ಅವಳು ನನ್ನನ್ನು ಬಿಟ್ಟು ಎಲ್ಲೋ ಹೋದಳು. ಚಿಕ್ಕಮ್ಮನಾದರೂ ಬಹಳ ಪ್ರೀತಿಸುತ್ತಾಳೆ. ಆ ಅಮ್ಮನಂತೆ ಚಿಕ್ಕಮ್ಮನಾದರೂ ಎಲ್ಲಿ ಬಿಟ್ಟು ಹೋಗುವಳೊ ಅಂತ ನೆನಪಿಗೆ ಬಂದರೆ ಅಳು ಬರುತ್ತದೆ" ಎಂದ. ಅವನಿಗೆ ಅಳುವು ನಿಲ್ಲಲಿಲ್ಲ. ನನಗೂ ಹಾಗೇ ಅಯಿತು. ಲತೆಯ ಪ್ರೇಮವು ಈ ಮುಗ್ಧ ಬಾಲಕನ ಹೃದಯದಲ್ಲಿ ಎಷ್ಟು ಗಾಢವಾಗಿ ಮನೆಮಾಡಿಕೊಂಡಿದೆಯಲ್ಲ! ನನಗೆ ಸ್ವಲ್ಪ ಅಂಜಿಕೆ ಎನಿಸಿತು. ಒಬ್ಬ ಕವಿಯ ಮಾತು ನೆನಪಿಗೆ ಬರುತ್ತದೆ:— ಉತ್ತಮ ಜೀವಿಗಳು ಜಗತ್ತಿನಲ್ಲಿ ಬಹಳ ಕಾಲ ಬಾಳುವುದಿಲ್ಲ. ದೈವವೇ ಮಗುವಿನ ಮುಖದಿಂದ ಅನಿಸಿರಲಿಕ್ಕಿಲ್ಲಷ್ಟೇ, ದೇವರೇ, ಆ ದಿನವನ್ನು ಕಾಣದಂತೆ ಕರುಣಿಸು; ತಾಯಿಯ ಸಾವಿನಲ್ಲಿ ಪ್ರೇಮವಿಯೋಗದ ಮಾನಸಿಕ ಸಂಬಂಧ ಉಂಟು. ಮುನ್ನುನನ್ನ ಎತ್ತಿಕೊಂಡ ಲತೆಯ ಹತ್ತಿರ ಬಂದೆ "ಇವನು ಯಾಕೆ ಅಳುತ್ತಾನೆ ಕೇಳು!" ಎಂದು ನಗುತ್ತ ಹೇಳಿದೆ. ಬೆಚ್ಚಿಬಿದ್ದಳು. "ನೀವೇ ಕೇಳಿ" ಎಂದಳು. "ನೀನು ಬಹಳ ಪ್ರೀತಿಸುವಿಯಂತೆ. ಮೊದಲಿನ ಅಮ್ಮನಂತೆ ನೀನು ಕೂಡಾ ಬಿಟ್ಟುಹೋದರೆ ಎಂಬ ಭಯದಿಂದ ಅಳುತ್ತಾನಂತೆ" ಎಂದು ಹೇಳಿದೆ. ಧೂಳು ಹೋದ ಕನ್ನಡಿಯಂತೆ ಮುಖವು ಹೊಳೆಯಿತು. ಮುನ್ನುನನ್ನು ಎತ್ತಿ ಮುದ್ದಿಟ್ಟಳು.

ದುರ್ದೈವ! ಯಾರಿಗೆಗೊತ್ತು, ಮುನ್ನುನ ಮಾತು ಇಷ್ಟು ತೀವ್ರ ಪೂರ್ತಿಯಾಗುವದೆಂದು? ಯಮನೆ ಈ ಅಜ್ಞಾನ ಬಾಲಕನ ಕಿವಿಯಲ್ಲಿ ಉಸುರಿರಬಹುದೇ? ಆರು ತಿಂಗಳು ಹೋಗಲಿಲ್ಲ ಲತೆಯು ಜೇನೆಯಿಂದ ಹಾಸಿಗೆ ಹಿಡಿದಳು. ನೋಡು ನೋಡುತ್ತಲೆ ವಿಧಿಯು ನಮ್ಮ ಕೈಯಿಂದ ಕಸಿದುಕೊಂಡು ಹೋಯಿತು ಲತೆಯನ್ನು. ಲತೆ ಕಮರಿತು, ತೋಟ ಹಾಳಾಯಿತು. ಲತೆ ಮುನ್ನುನನ್ನ ನೆನೆಯುತ್ತ ಪ್ರಾಣ ಬಿಟ್ಟಳು ಲತೆ ನಿಜವಾಗಿಯೂ ಮಾತೃಋಣವನ್ನು ತೀರಿಸಿದಳು. ಮಳೆ ಚಳಿಯಲ್ಲಿಯೂ ಕೂಡಾ ಬೇಸರಿಯದೆ ಅವನಿಗೆ ತಿಂಡಿ ತಿನಸುಗಳನ್ನು ಮಾಡುತ್ತಿದ್ದಳು.

ಮುನ್ನು ಬಹಳ ಹಟಮಾರಿ. ಅವಳೇ ಉಣಿಸಿದರೆ ಊಟ ಮಾಡಬೇಕು. ಜೋಕಾಲಿಯಲ್ಲಿ ಕೂಡ್ರಿಸಿ ತೂಗದೆ ಹೋದರೆ ಅವಳನ್ನು ಗೋಳಾಡಿಸುತ್ತಿದ್ದ. ಲತೆ ಬೇಸರಿಯುತ್ತಿದ್ದಿಲ್ಲ. ಅವನ ತುಂಟತನದಿಂದಲೂ ಅವಳಿಗೆ ಒಂದು ಬಗೆಯ ಆನಂದ. ಜ್ವರದಿಂದ ಬಳಲುತ್ತಿದ್ದರೂ ಮಗ್ಗಲಾಗಲು ಬಾರದಿದ್ದರೂ ಇಂಥ ದುರವಸ್ಥೆಯಲ್ಲಿಯೂ ಮುನ್ನುನ ಹೊಟ್ಟೆಯ ಚಿಂತೆ. ಹಾ! ಅನಿರ್ವಚನೀಯವಾದ ಅವಳ ಸೇವೆಯೂ ಈಗ ಕತೆಯಾಗಿ ಪರಿಣಮಿಸಿದೆ. ಅದನ್ನು ನೆನೆದರೆ ಮನಸ್ಸು ಇನ್ನೂ ಹಳಹಳಿಸುತ್ತದೆ. ಮುನ್ನುನ ಬಾಲ್ಯದ ವಿನೋದ, ಕಿಡಿಗೇಡಿತನ, ಎಳೆನಗು ಎಲ್ಲ ಲತೆಯ ಬೆನ್ನಹಿಂದೆ ಕಮರಿಹೋದವು. ಈಗ ಅವನು ಉದಾಸೀನಮೂರ್ತಿಯಾಗಿದ್ದಾನೆ. ತಾಯಿಯ ಮಮತೆಯನ್ನು ಕಳೆದುಕೊಂಡು ಜೀವಿಸಿ ದೊಡ್ಡವನಾಗಿದ್ದಾನೆ.




ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

# ಡಿಸೆಂಬರ ೨ ರಿಂದ ೮ ರ ವರೆಗೆ

## ಮೇಷ

ಪ್ರಕೃತಿ ಸಾಧಾರಣವೆ, ಆದರೆ ಪ್ರಾಪಂಚಿಕ ಸುಖ ಮನಸ್ಸಿನಂತೆ. ಅಪ್ತರಲ್ಲಿ ಮಂಗಲ ಕಾರ್ಯಗಳು. ಮಕ್ಕಳಲ್ಲಿ ಒಂದು ಉತ್ಕರ್ಷದ ಸಂಗತಿ ಸಂಭವಿಸಿದರೆ ಮತ್ತೊಂದು ಚಿಂತಾಜನಕವಾದ ತಿರುವುಮುರುವು ಸಂಗತಿ ಸಂಭವಿಸುವುದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಮನಸಿನ ವಿರುದ್ಧ ಅದಕ್ಕಾಗಿ ಕೆಲ ಮಾತು ಮಾಡಬೇಕಾದ ಪ್ರಸಂಗ ಬರುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರತ್ವದಲ್ಲಿ ಪರಸ್ಪರರಲ್ಲಿ ಸಹಾನುಭೂತಿಯು ಬೆಳವಣಿಗೆ ಮಾತುಕತೆ ಮಾತ್ರ ದ್ವೇಷ ಹುಟ್ಟಿಸುವಂಥವು. ಪ್ರವಾಸ ಸುಖಕರ. ಪತ್ರವ್ಯವಹಾರ ಉತ್ತಮ. ಆದರೆ ಭೆಟ್ಟಿಯು ಕೆಲಸ ಮಧ್ಯಮವೆ. ಭರಣಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨, ೫, ೬, ೭, ಅನುಕೂಲ.

೮ ನೇ ತಾರೀಖು ರಾತ್ರಿ ೯—೧೧ ಗಂಟೆಗೆ ಹಿಡಿದು ೧ ಗಂಟೆಗೆ ಬಿಡುವ ಖಗ್ರಾಸ ಚಂದ್ರಗ್ರಹಣವಿದೆ. ಇದು ಈ ರಾಶಿಗೆ ಎರಡನೆ ಸ್ಥಾನದಲ್ಲಾಗುವದರಿಂದ ಕೌಟುಂಬಿಕ ಕಲಹ ಸಂಗ್ರಹಹಾನಿ, ನೇತ್ರಪೀಡೆ, ಸ್ತ್ರೀ ಕ್ಲೇಶ ಮೊದಲಾದ ಅಶುಭ ಫಲಗಳು ದೊರೆಯುವವು. ೩ ತಿಂಗಳ ಇದರ ಫಲಕಾಲ.

## ವೃಷಭ

ಪ್ರಕೃತಿ ಸಾಧಾರಣ. ಮಕ್ಕಳಲ್ಲಿ ಕ್ಲೇಶ—ಹೆಂಡತಿಯಿಂದ ಉಪದ್ರವ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಉದ್ಯೋಗದಲ್ಲಿ ಪ್ರಗತಿ: ಅನುಕೂಲ ಆದರೆ ಪ್ರತಿಷ್ಠೆ ಮತ್ತು ಲಾಭ ಇಲ್ಲದಂತೆಯೆ. ಸ್ನೇಹಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು. ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸ ಅನುಕೂಲ. ರೋಹಿಣಿಗೆ ಬಹಳ ತೊಂದರೆ ತಾ. ೨, ೩, ೪, ಅನುಕೂಲ,

೮ ನೇ ತಾರೀಖಿನ ಗ್ರಹಣ ಪ್ರಥಮ ಅಂದರೆ ಜನ್ಮ ರಾಶಿಯಲ್ಲಿಯೆ ಆಗುವದರಿಂದ ದೇಹ ಕ್ಲೇಶ, ಚಿತ್ತ ಭ್ರಾಂತಿ, ಸ್ತ್ರೀ ಕ್ಲೇಶ ಇಲ್ಲವೆ ವಿರೋಧ. ಲಾಭಕ್ಕಿಂತ ವೆಚ್ಚ ಹೆಚ್ಚು ರೋಹಿಣಿ ಇಲ್ಲವೆ ಮೃಗ ಇವುಗಳಲ್ಲಿ ಜನ್ಮ ನಕ್ಷತ್ರ ಇದ್ದವರಿಗೆ ಬಹಳ ತೊಂದರೆ ಮತ್ತು ಅಂಜಿಕೆ.

## ಮಿಥುನ

ನಿಮ್ಮ ಮತ್ತು ಹೆಂಡತಿಯು ಪ್ರಕೃತಿ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಅಷ್ಟು ಆಗಬೇಕಾದರೆ ಚಮತ್ಕಾರಿಕ ಪ್ರಸಂಗಗಳನ್ನೆದುರಿಸಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ ಆರಿದ್ರೆಗೆ ತೊಂದರೆ ಕಡಮೆ. ತಾ. ೨, ೩, ೬, ಅನುಕೂಲ.

೮ ನೇ ತಾರೀಖಿನ ಚಂದ್ರಗ್ರಹಣ ನಿಮಗೆ ೧೨ ನೇ ಸ್ಥಾನದಲ್ಲಿರುವದರಿಂದ ಕೌಟುಂಬಿಕ ಕಲಹ, ವೆಚ್ಚ ಬಹಳ ವೃಥಾವೈರ ಮಕ್ಕಳಲ್ಲಿ ಕ್ಲೇಶ ಲೋಕಾಪವಾದ ಮೊದಲಾದ ಫಲ ಕೊಡುವದು. ಮೃಗ ನಕ್ಷತ್ರದವರಿಗೆ ಬಹಳ ಕ್ಲೇಶ.

## ಕರ್ಕ

ಪ್ರಕೃತಿ ಸಾಧಾರಣವೆ. ಹೆಂಡತಿ ಮಕ್ಕಳು ಮೇಲಿಂದ ಮೇಲೆ ವಿರೋಧ ಮಾಡುವರು ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಬಹಳ. ಕೆಟ್ಟ ವಿಚಾರಗಳು. ಅನಾಯಾಸವಾಗಿ ವಾಹನಸುಖ ಸಿಕ್ಕುವ ಸಂಭವ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಸಾಮಾನ್ಯ ಯಶಸ್ಸು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ ತಾ ೩, ೪, ೫, ೬, ಅನುಕೂಲ

೮ ನೇ ತಾರೀಖಿನ ಚಂದ್ರಗ್ರಹಣ ನಿಮಗೆ ೧೧ ನೇ ಸ್ಥಾನದಲ್ಲಿ ಬರುವದರಿಂದ ಉತ್ತಮೋತ್ತಮ ಲಾಭ. ಮಿತ್ರಸುಖ ಶತ್ರುನಾಶ ಆದರೆ ಮಾತೃಪಿತೃಕ್ಲೇಶ ಮೊದಲಾದ ಫಲ ಕೊಡುವದು.

## ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಕೆಡುವದು. ಉಳಿದ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆ. ಆದರೆ ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ, ಪೂರ್ವಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨, ೫, ೬, ಅನುಕೂಲ.

೮ ನೇ ತಾರೀಖಿನ ಚಂದ್ರಗ್ರಹಣ ೧೦ ನೇ ಸ್ಥಾನದಲ್ಲಿ ಬರುವದರಿಂದ ಸತ್ತಾ ವರ್ಚಸ್ಸು ಮತ್ತು ಲೌಕಿಕ ವೃದ್ಧಿ ಲಾಭ ಕಡಮೆ ಆದರೆ ಉತ್ಕರ್ಷ ಹೆಚ್ಚು. ಬಂಧುವರ್ಗದವರಲ್ಲಿ ಕ್ಲೇಶ ಮಿತ್ರ ವಿರೋಧ ಮೊದಲಾದ ಫಲ ದೊರೆಯುವವು.

## ಕನ್ಯಾ

ಹೆಂಡತಿಯ ಪ್ರಕೃತಿ ಕೆಡುವದು, ಆದರೆ ಪರಸ್ಪರರಲ್ಲಿ ಮತ್ತೈಕ್ಯ ಅನುಕೂಲ. ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಮಿತ್ರತ್ವದಲ್ಲಿ ವಿರೋಧ, ಆದರೆ ಶತ್ರುಗಳು ಕೂಡ ಮಿತ್ರರಾಗುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ಹಸ್ತಾಕ್ಕೆ ತೊಂದರೆಯಿಂದಲೇ ಯಶಸ್ಸು. ತಾ. ೩, ೪, ೭, ೮ ಅನುಕೂಲ.

ಚಂದ್ರಗ್ರಹಣ ೯ ನೇ ಸ್ಥಾನದಲ್ಲಿರುವದರಿಂದ ಭಾಗ್ಯವೃದ್ಧಿ. ದೂರಿನ ಪ್ರವಾಸ. ಯಾತ್ರಾದಿ ಪುಣ್ಯಕೃತ್ಯಗಳು, ಹೆಂಡತಿಯ ಬಂಧುಗಳ ಉತ್ಕರ್ಷ ಮೊದಲಾದ ಫಲ ಸಿಕ್ಕುವವು.

## ತುಲಾ

ಆರೋಗ್ಯ ಎಲ್ಲರದೂ ಉತ್ತಮ. ಆದರೆ ನಿಮ್ಮ ನಿಮ್ಮಲ್ಲಿ ಮತ್ತೈಕ್ಯ ಕಡಮೆ. ಸಂಗ್ರಹದಲ್ಲಿ ಸ್ವಲ್ಪ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಮತ್ತು ಲಾಭ ಅಂದಾಜಿಗಿಂತ ಹೆಚ್ಚು. ವಾದದಲ್ಲಿ ಅನುಕೂಲತೆ. ಮಿತ್ರರಲ್ಲಿ ಕ್ಲೇಶ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ, ಸ್ವಾತಿಗೆ ಹೆಚ್ಚು ಅನುಕೂಲ. ತಾ. ೩, ೫, ೭ ಅನುಕೂಲ

ಆದರೆ ಚಂದ್ರಗ್ರಹಣ ೮ ನೇ ಸ್ಥಾನದಲ್ಲಿ ಬರುವದರಿಂದ ಭಯಂಕರ ಶರೀರ ಕ್ಲೇಶ, ಗೌಪ್ಯ ಇಲ್ಲವೆ ರಹಸ್ಯ ಸ್ಫೋಟವಾಗುವದರಿಂದ ಹಾನಿ. ಸ್ತ್ರೀ ವಿರೋಧ ಮೊದಲಾದ ಫಲ ದೊರೆಯುವವು.

## ವೃಶ್ಚಿಕ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಕೆಡುವದು. ಪ್ರಾಪಂಚಿಕ ಸುಖ ಸ್ವಲ್ಪ ಚೆನ್ನಾಗಿದ್ದರೂ ಸೌಖ್ಯ ಕಡಮೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭ ಕಡಮೆ. ಖರ್ಚು ಭಾರದು. ಮಿತ್ರತ್ವದಲ್ಲಿ ವಿರೋಧ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಅನುಕೂಲ. ಅನುರಾಧೆಗೆ ತೊಂದರೆ ಕಡಮೆ. ತಾ. ೩, ೪ ೭ ಅನುಕೂಲ.

ಚಂದ್ರಗ್ರಹಣ ೭ ನೇ ಸ್ಥಾನದಲ್ಲಿ ಆಗುವದರಿಂದ ಹೆಂಡತಿಗೆ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಸತ್ತೆಯ ಹೆಚ್ಚಳ. ವ್ಯಸನ, ಮೋಹ ಮೊದಲಾದ ಫಲಗಳು ಸಿಕ್ಕುವವು.

## ಧನು

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ ಮಕ್ಕಳು ಕೆಲ ಅಪಕೃತ್ಯ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ಕೊನೆಯಲ್ಲಿ ಯಶಸ್ಸು ಮತ್ತು ಸುಖ ಅನುಕೂಲ, ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪೂರ್ವಾಷಾಢಕ್ಕೆ ತೊಂದರೆಯಿಂದಲೇ ಯಶಸ್ಸು. ತಾ. ೨, ೫, ೬ ಅನುಕೂಲ.

ಚಂದ್ರಗ್ರಹಣ ೬ ನೇ ಸ್ಥಾನದಲ್ಲಿ ಆಗುವದರಿಂದ ಶತ್ರುಗಳ ನಾಶ. ವಿಜಯ ಸತ್ತೆಯ ಅಭಿವೃದ್ಧಿ, ಮಿತ್ರಕ್ಲೇಶ. ಅನವಶ್ಯಕ ವೆಚ್ಚ ಮೊದಲಾದ ಫಲಗಳು.

## ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಮತ್ತು ಲಾಭವೂ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಹಿತದು, ಶ್ರವಣಾಕ್ಕೆ ತೊಂದರೆಯಿಂದಲೇ ಯಶಸ್ಸು. ತಾ. ೨, ೩, ೪, ೭ ಅನುಕೂಲ.

ಚಂದ್ರಗ್ರಹಣ ೫ ನೇ ಸ್ಥಾನದಲ್ಲಿ ಆಗುವದರಿಂದ ಲಾಭಕ್ಕೂ ಭಾಗ್ಯಕ್ಕೂ ಅನುಕೂಲ. ಆದರೆ ಮಕ್ಕಳಿಗೆ ಕ್ಲೇಶ. ಬುದ್ಧಿಭ್ರಂಶ ದೇವತಾಕೋಪ ಮೊದಲಾದ ಫಲಗಳು ದೊರೆಯುವವು.

## ಕುಂಭ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿಯು ಮತ್ತು ಪ್ರಾಪಂಚಿಕ ಸುಖ ಉತ್ತಮ, ಉದ್ಯೋಗದಲ್ಲಿ ಪ್ರಗತಿ ಬಹಳ. ಪ್ರತಿಷ್ಠೆ ಉತ್ತಮ. ಆದರೆ ಲಾಭ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಯಶಸ್ಸು ಮಿತ್ರರಿಂದ ವಿಶೇಷ ಸಹಾಯ. ಪ್ರವಾಸಾದಿ ಕೆಲಸ ಹಿತಕರ. ಶತತಾರಿಕೆಗೆ ಬಹಳ ಅನುಕೂಲ. ತಾ. ೨, ೫, ೭ ಅನುಕೂಲ.

ಚಂದ್ರಗ್ರಹಣ ೪ ನೇ ಸ್ಥಾನದಲ್ಲಿ ಆಗುವದರಿಂದ ಆಪ್ತವಿರೋಧ ಮಾತೃಕ್ಲೇಶ ಸ್ಥಾವರದಲ್ಲಿ ಹಾನಿ ಮೊದಲಾದ ಫಲ ಸಿಕ್ಕುವವು.

## ಮೀನ

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ಅದಕ್ಕೂ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಪ್ರತಿಷ್ಠೆಯೂ ಅನುಕೂಲ. ಬಹಳ ಅವಚಿತ ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಪತ್ರವ್ಯವಹಾರ ಮತ್ತು ಭೆಟ್ಟಿಗಿಂತ ಪ್ರವಾಸ ಅನುಕೂಲ. ಉತ್ತರಾಭಾದ್ರಪದಕ್ಕೆ ಹೆಚ್ಚು ಅನುಕೂಲ.

ಚಂದ್ರಗ್ರಹಣ ೩ ನೇ ಸ್ಥಾನದಲ್ಲಿ ಆಗುವದರಿಂದ ಸಾಹಸದ ಮತ್ತು ಪರಾಕ್ರಮದ ಕೆಲಸಗಳಲ್ಲಿ ಯಶಸ್ಸು. ಮಕ್ಕಳಲ್ಲಿ ಉತ್ಕರ್ಷ. ಬಂಧುವರ್ಗದವರಲ್ಲಿ ವಿರೋಧ ಮೊದಲಾದ ಫಲ ಸಿಕ್ಕುವವು.





ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಗುತ್ತಾ.